ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ



ಸಂಪುಟ ೧೨ ಸಂಚಿಕೆ ೧೨ ಮಾರ್ಚ್ ೨೫, ೧೯೯೦ ಬೆಲೆ ೫೦

"ಉದಾರೀಕರಣ"ದ ಹಾದಿ ಬಿಡಲೊಲ್ಲದ

ಮೊದಲ ರಾಷ್ಟ್ರೀಯರಂಗ ಬಜೆಟ್

ಪಾಲಿಟ್ ಬ್ಯೂರೋ ಟೀಕೆ

ಹಿಂದಿನ ಕಾಂಗ್ರೆಸ್(ಐ) ಸರಕಾರ ದೇಶದ ಆರ್ಥಿಕವನ್ನು ಹಾಳು ಗೆಡವಿ ಜನತೆಯ ಮೇಲೆ ಸಂಕಷ್ಟಗಳನ್ನು ಹೇರಿತ್ತು. ಇದರಿಂದ ಹೊರ ಬಂದು ಹೊಸ ಕೇಂದ್ರ ಸರ್ಕಾರ ಆರ್ಥಿಕಕ್ಕೆ ಮೂಲಭೂತವಾಗಿಯೇ ಹೊಸದಾದ ದಿಕ್ಕು ನೀಡುವುದು ಅಗತ್ಯವಾಗಿತ್ತು. ಇದಕ್ಕಾಗಿ ಹಿಂದಿನ ಕಾಂಗ್ರೆಸ್(ಐ) ಆಳ್ವಿಕೆಯ "ಉದಾರೀಕರಣ" ನೀತಿ ಜಾಡು ಬಿಡುವುದು ಅನಿವಾರ್ಯವಾಗಿತ್ತು. ಹಣಕಾಸು ಮಂತ್ರಿ ದಂಡವತೆಯವರ ಅತ್ಯಂತ ಆಸಕ್ತಿಯಿಂದ ಕಾಯುತ್ತಿದ್ದ ಬಜೆಟ್ ಈ ನಿರೀಕ್ಷೆಯ ಮಟ್ಟಕ್ಕೆ ಬರಲು ವಿಫಲಗೊಂಡಿದೆ. ಹಳೆಯ ಜಾಡನ್ನು ಬಿಡುವಲ್ಲಿ ಅರೆಮನಸ್ಸಿನ ಯತ್ನವೇ ಇದಕ್ಕೆ ಕಾರಣವೆಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ವಿಶ್ವಬ್ಯಾಂಕ್, ಐ.ಎಂ.ಎಫ್. ಪ್ರತಿಪಾದಿಸುವ 'ರಫ್ತು ಆಧಾರಿತ ಬೆಳವಣಿಗೆ'ಯ ಹಾದಿಯನ್ನು ನಿರ್ಣಾಯಕವಾಗಿ ಬಿಡಲು ಸರಕಾರಕ್ಕೆ ಮನಸ್ಸಿಲ್ಲ. ಆಮದನ್ನೂ ತಪ್ಪಿಸಲು ಸ್ಥಳೀಯ ಉತ್ಪಾದನೆಯ ಧೋರಣೆಯ ಮೇಲೆ ಅದು ಸಾಕಷ್ಟು ಒತ್ತು ಹಾಕಿಲ್ಲ ಎಂದು ಬಜೆಟ್‌ನಿಂದ ಸ್ವಯಂವೇದ್ಯ ಎಂದು ಪಿ.ಬಿ. ಟೀಕಿಸಿದೆ.

ಇದು ರಾಷ್ಟ್ರೀಯ ರಂಗ ಸರಕಾರದ ಮೊದಲ ಬಜೆಟ್. ಅತ್ಯಂತ ಕಷ್ಟಕರ ಆರ್ಥಿಕ ಸನ್ನಿವೇಶದಲ್ಲಿ ಇದನ್ನು ರೂಪಿಸ ಬೇಕಾಗಿತ್ತು. ಹಿಂದಿನ ವರ್ಷದ ೧೧೬೫೦ ಕೋಟಿ ರೂ. ಗಳ ಬೃಹತ್ ಕೊರತೆ, ದೈತ್ಯಾಕಾರದ ವಿದೇಶೀ ಸಾಲ ದಿನೇ ದಿನೇ ಆಳವಾಗುತ್ತಿರುವ ಆಮದು - ರಫ್ತು ಕಂದರ ಉದ್ಯೋಗಾವಕಾಶಗಳಲ್ಲಿ ಸತತವಾಗಿ ತೀವ್ರ ಕಡಿತ, ದೊಡ್ಡ ಪ್ರಮಾಣದಲ್ಲಿ ಕೈಗಾರಿಕಾ ಘಟಕಗಳ ಮುಚ್ಚುಕೆ ಹಿಂದಿನ ಕಾಂಗ್ರೆಸ್(ಐ) ಸರಕಾರ ಸೃಷ್ಟಿಸಿದ ಈ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ರಾಷ್ಟ್ರೀಯ ರಂಗ ಸರ್ಕಾರ ತನ್ನ ಚುನಾವಣಾ ಭರವಸೆಗಳನ್ನು ಪಾಲಿಸಲು ಗಂಭೀರ ಕ್ರಮ ಕೈಗೊಳ್ಳುತ್ತದೆ ಎಂಬ ವ್ಯಾಪಕ ನಿರೀಕ್ಷೆ ಜನರಲ್ಲಿತ್ತು. ೧೯೯೦-೯೧ರ ಬಜೆಟ್ ಈ ನಿರೀಕ್ಷೆ ಈಡೇರಿಸಿಲ್ಲ.

ಬಜೆಟ್, ಕಂಪನಿ ವಲಯಕ್ಕೆ ನೀಡಿದ್ದ ಕೆಲವು ತೆರಿಗೆ ರಿಯಾಯ್ತಿಗಳನ್ನು ಹಿಂತೆಗೆದು ಕೊಂಡು ಹೆಚ್ಚಿನ ಸಂಪನ್ಮೂಲ ಶೇಖರಣೆಗೆ ಪ್ರಯತ್ನಿಸಿರುವುದು ಈ ಬಜೆಟ್‌ನ ಒಂದು ಒಳ್ಳೆಯ ಅಂಶ ಎಂದು ಪಿ.ಬಿ. ಹೇಳಿದೆ ಇದರಿಂದ ಕಂಪನಿ ವಲಯದಿಂದ ೮೦೦ ಕೋಟಿ ರೂ. ಪಡೆಯಲಾಗಿದೆ. ಆದರೆ ದೊಡ್ಡ ವ್ಯಾಪಾರಿಗಳ ಶ್ರೀಮಂತ ವಿಭಾಗಗಳ ಬೃಹತ್ ಆದಾಯದಿಂದ ಸಂಪನ್ಮೂಲ ಸಂಗ್ರಹಿಸುವ ಪರಿಣಾಮಕಾರಿ ಕ್ರಮ ರೂಪಿಸಲು ಬಜೆಟ್ ವಿಫಲಗೊಂಡಿದೆ ಕಂಪನಿ ತೆರಿಗೆಯನ್ನು ೪೦% ಕ್ಕೆ ಇಳಿಸಿರುವುದರಲ್ಲಿ ಇದನ್ನು ಕಾಣಬಹುದು. ಇದರಿಂದಾಗಿಯೇ ಹೆಚ್ಚಿನ ಸಂಪನ್ಮೂಲ ಶೇಖರಿಸಲು ಪರೋಕ್ಷ ತೆರಿಗೆಗಳ ಬಲೆ ಹರಡಬೇಕಾಗಿದೆ ಎಂದಿರುವ ಪಾಲಿಟ್ ಬ್ಯೂರೋ ಈ ಕ್ರಮಗಳಿಂದ ಜನಸಾಮಾನ್ಯರ ಮೇಲೆ ಪ್ರತಿ ಕೂಲ ಪರಿಣಾಮ ಬೀಳುತ್ತದೆ ಎಂದು ಆತಂಕ ವ್ಯಕ್ತಪಡಿಸಿದೆ.

ಪೆಟ್ರೋಲ್, ಡೀಸೆಲ್ ಬೆಲೆಗಳಲ್ಲಿ ದೊಡ್ಡ ಪ್ರಮಾಣದ ಏರಿಕೆ, ಅಂಚೆ ದರಗಳಲ್ಲಿ ವಿಪರೀತ ಏರಿಕೆ ಬೆಲೆಯೇರಿಕೆಯಿಂದ ನರಳುತ್ತಿರುವ ಜನರ ಹೊರೆಯನ್ನು ಇನ್ನಷ್ಟು ಹೆಚ್ಚಿಸಿದೆ. ರೈಲು ಪ್ರಯಾಣ ಹಾಗೂ ಸಾಗಾಣಿಕೆ ದರದ ಏರಿಕೆಯ ಜತೆಗೆ ಇದು ಹಣ ದುಬ್ಬರಕ್ಕೆ

ಪುಟ ೮ ಕ್ಕೆ

ರಾಷ್ಟ್ರೀಯ ರಂಗ ಈ ಭರವಸೆ ನೀಡಿತ್ತು

ರಾಷ್ಟ್ರೀಯ ರಂಗ ತನ್ನ ಚುನಾವಣಾ ಪ್ರಣಾಳಿಕೆ ಮೂಲಕ ನೀಡಿದ ಕೆಲವು ಮುಖ್ಯ ಭರವಸೆಗಳು.

ಜನತೆಯ ಮೇಲೆ ಬಂಡವಾಳ ವಿನಿಯೋಗ ಅಂದರೆ ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ವಸತಿ, ಜೀವನಾವಶ್ಯಕ ಸಾಮಗ್ರಿಗಳು ಸಬ್ಸಿಡಿ ಬೆಲೆಗಳಲ್ಲಿ (ಪರಿಚ್ಛೇದ ೧೫)

ಕಾನೂನು ಮಿತಿಗಿಂತ ಹೆಚ್ಚಿದ್ದ ಬಚ್ಚಿಟ್ಟ ಜಮೀನನ್ನು ವಶಪಡಿಸಿ ಗ್ರಾಮೀಣ ಬಡವರಿಗೆ ಹಂಚುವುದು (ಪರಿಚ್ಛೇದ ೧೬)

ಉದ್ಯೋಗಾವಕಾಶ ಗರಿಷ್ಠಗೊಳಿಸುವ ಕೈಗಾರಿಕಾ ಬೆಳವಣಿಗೆ (ಪರಿಚ್ಛೇದ ೨೦)

ಗ್ರಾಮೀಣ ಕಸುಬುದಾರರಿಗೆ, ಗ್ರಾಮ ಕೈಗಾರಿಕೆಗಳಿಗೆ ಪ್ರಯೋಜನಕಾರಿಯಾದ ಕೃಷಿ ಸಂಸ್ಕರಣ ಉದ್ದಿಮೆಗಳು (ಪರಿಚ್ಛೇದ ೨೧)

ವಿದೇಶೀ, ದೇಶೀ ಸಾಲ ದೈತ್ಯ ಗಾತ್ರದಲ್ಲಿ ಬೆಳೆಯುವಂತೆ ಮಾಡಿದ ಧೋರಣೆಗಳನ್ನು ಕೈ ಬಿಡುವುದು (ಪರಿಚ್ಛೇದ ೨೩)

ರೆವಿನ್ಯೂ ಆದಾಯ ಹೆಚ್ಚಿಸಿ, ಭ್ರಷ್ಟಾಚಾರ ತಗ್ಗಿಸಲು ನೇರ, ಪರೋಕ್ಷ ತೆರಿಗೆಗಳ ಹಣಕಾಸು ನೀತಿ (ಪರಿಚ್ಛೇದ ೨೪)

ಖಾಸಗೀ ಕಂಪನಿ ವಲಯದ ವಂಚನೆಗಳನ್ನು ತಡೆಯಲು ಕಂಪನಿ ಕಾನೂನಿಗೆ ತಿದ್ದುಪಡಿ (ಪರಿಚ್ಛೇದ ೨೬)

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸುವುದು (ಪರಿಚ್ಛೇದ ೨೮)

೬೦ ವರ್ಷ ಮೀರಿದ ಅಗತ್ಯವುಳ್ಳವರಿಗೆಲ್ಲಾ ಪಿಂಚಣಿ (ಪರಿಚ್ಛೇದ ೩೫)

ಶಿಕ್ಷಣಕ್ಕೆ ರಾಷ್ಟ್ರೀಯ ಆದಾಯದ ೬% ದವರೆಗೆ ಬಂಡವಾಳ ಹೂಡಿಕೆ (ಪರಿಚ್ಛೇದ ೩೬)

ಶ್ರೀಮಂತ ಪರ ವಿಕೃತಿಗಳನ್ನು ನಿವಾರಿಸಿ ಎಲ್ಲರಿಗೂ ಶಿಕ್ಷಣ (ಪರಿಚ್ಛೇದ ೩೭)


ಕಲಾಕಾರರಿಗೆ ಸೃಜನಾತ್ಮಕ ಉದ್ದೇಶಗಳಿಗೆ ಹಣಕಾಸು ನೆರವು (ಪರಿಚ್ಛೇದ ೩೮)


ಕಡಿಮೆ ಬಡ್ಡಿಯಲ್ಲಿ ೫೦ ಸಾವಿರ ರೂ. ಗಳಷ್ಟು ವಿದ್ಯಾವಂತ ನಿಪುಣ ಯುವಜನರಿಗೆ ಸ್ವಉದ್ಯೋಗಕ್ಕೆ ಸಾಲ (ಪರಿಚ್ಛೇದ ೩೯)

ಒಂದು ರೂಪಾಯಿ-ಎಲ್ಲಿಂದ ಬರುತ್ತದೆ-ಎಲ್ಲಿಗೆ ಹೋಗುತ್ತದೆ

೧೯೯೦-೯೧ ರಲ್ಲಿ ಕೇಂದ್ರ ಸರ್ಕಾರದ ಆದಾಯದ ಪ್ರತಿ ಒಂದು ರೂಪಾಯಿಯಲ್ಲಿ

- ೨೩ ಪೈಸೆ ಶ್ರೀಮಂತರಿಂದ ಸಾಲ ಪಡೆದು
- ೨೨ ಪೈಸೆ ಒಳ ಸುಂಕದಿಂದ
- ೧೯ ಪೈಸೆ ಆಮದು ರಫ್ತು ಸುಂಕದಿಂದ
- ೧೦ ಪೈಸೆ ತೆರಿಗೇತರ ಆದಾಯದಿಂದ
- ೬ ಪೈಸೆ ಕೊರತೆ ಬಜೆಟ್‌ನಿಂದ
- ೫ ಪೈಸೆ ಆದಾಯ ತೆರಿಗೆಯಿಂದ
- ೫ ಪೈಸೆ ಕಂಪನಿಗಳ ಮೇಲೆ ತೆರಿಗೆಯಿಂದ
- ೪ ಪೈಸೆ ವಿದೇಶ ಸಾಲದಿಂದ
- ೪ ಪೈಸೆ ಬಂಡವಾಳ ವಾಪತಿಯಿಂದ
- ೨ ಪೈಸೆ ಇತರ ತೆರಿಗೆಗಳಿಂದ





೧೯೯೦-೯೧ ರಲ್ಲಿ ಕೇಂದ್ರ ಸರ್ಕಾರದ ಆದಾಯದ ಪ್ರತಿ ಒಂದು ರೂಪಾಯಿಯಲ್ಲಿ

- ೧೮ ಪೈಸೆ ಸಾಲದ ಬಡ್ಡಿ ಪಾವತಿಗೆ
- ೧೫ ಪೈಸೆ ಕೇಂದ್ರ ಯೋಜನಾ ಬಾಬ್ತಿಗೆ
- ೧೪ ಪೈಸೆ ರಕ್ಷಣೆಗೆ
- ೧೩ ಪೈಸೆ ಇತರ ಯೋಜನೇತರ ಖರ್ಚಿಗೆ
- ೧೩ ಪೈಸೆ ರಾಜ್ಯಗಳಿಗೆ ತೆರಿಗೆ ಪಾಲು
- ೧೧ ಪೈಸೆ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಯೋಜನಾ ನೆರವು
- ೯ ಪೈಸೆ ಸಬ್ಸಿಡಿಗಳಿಗೆ
- ೪ ಪೈಸೆ ಸಣ್ಣ ಉಳಿತಾಯ, ಭವಿಷ್ಯ ನಿಧಿಗೆ
- ೩ ಪೈಸೆ ಯೋಜನೇತರ ನೆರವಿಗೆ

ರಾಜ್ಯ ಕೇಂದ್ರ ಬಜೆಟ್‌ಗಳು ಹೇರಿದ ಹೊರೆ

ಏಪ್ರಿಲ್ ೫ ರಂದು ಪ್ರತಿಭಟನೆ

ಬೆಲೆ ಏರಿಕೆ, ತೆರಿಗೆ ಬಾರದ ಹೊರೆಯಿಂದ ಈಗಾಗಲೇ ಬಳಲುತ್ತಿರುವ ರಾಜ್ಯದ ಜನತೆಯ ಮೇಲೆ ೧೪೫ ಕೋಟಿ ರೂ. ತೆರಿಗೆ ಹೊರೆಯನ್ನು ಹೇರಿದ ರಾಜ್ಯ ಬಜೆಟ್‌ನ ಜನ ವಿರೋಧಿ ಪ್ರತಿಗಾಮಿ ನೀತಿಯನ್ನು ಖಂಡಿಸಲು.

ರಾಜೀವ್ ಗಾಂಧಿಯವರ ತೆರಿಗೆ ಏರಿಕೆ, ರೈಲ್ವೆ ಪ್ರಯಾಣ, ಸಾಗಣೆ ದರ ಏರಿಕೆ, ಪೆಟ್ರೋಲ್ ಬೆಲೆ ಏರಿಕೆ ನೀತಿಯನ್ನು ಪೂರ್ಣವಾಗಿ ಕೈ ಬಿಡಲು ಮನಸ್ಸಿಲ್ಲದ, ವಿಶ್ವ ಬ್ಯಾಂಕ್‌ನ ಒತ್ತಡಗಳಿಗೆ ತಲೆ ಬಾಗುವುದನ್ನು ಮುಂದುವರಿಸಿದ ಕೇಂದ್ರ ಬಜೆಟ್‌ನ ನೀತಿಯ ಬಗ್ಗೆ ಜನತೆಯ ಅಸಮಧಾನವನ್ನು ಪ್ರತಿ ಬಿಂಬಿಸಲು ಬಜೆಟ್ ಮೂಲಕ ಹಾಕಿರುವ ಹೊರೆಯನ್ನು ಹಿಂದಕ್ಕೆ ತೆಗೆದು ಕೊಳ್ಳುವಂತೆ ಒತ್ತಾಯಿಸಲು.

ರಾಜ್ಯದ ಎಲ್ಲೆಡೆ ಏಪ್ರಿಲ್ ೫ ರಂದು ಮೆರವಣಿಗೆ ಸಭೆಗಳನ್ನು ನಡೆಸಬೇಕೆಂದು ಪಕ್ಷದ ರಾಜ್ಯ ಸಮಿತಿ ತೀರ್ಮಾನಿಸಿದೆ.

ಕಲಿಯಣ್ಣಾ ಕಲಿ...ಕಲಿ. ತಿಳಿಯಣ್ಣಾ ತಿಳಿ...ತಿ

ಅಖಿಲ ಭಾರತ ಜನವಿಜ್ಞಾನ ಕಾಂಗ್ರೆಸ್

ಎರ್ನಾಕುಲಂ ನಲ್ಲಿ ಸಾಕ್ಷರತಾ ಆಂದೋಲನದಲ್ಲಿ



ಬೆಂಗಳೂರಿನ ಸೈದ್ಧಾಂತಿಕ ಭೌತ ವಿಜ್ಞಾನಿ ತ್ರಿಚೂರಿನ ಸ್ಕೂಲ್ ಮಾಸ್ತರ ಜತೆ ಚರ್ಚೆ ನಡೆಸಿದ: ದೆಹಲಿಯ ಸಮಾಜ ವಿಜ್ಞಾನಿ ಪಾಂಡಿಚೇರಿಯ ಡಾಕ್ಟರರ ಅನುಭವಕೇಳಿ ಮಂತ್ರಮುಗ್ಧನಾದ ಹೊಸಂಗಾಬಾದ್‌ನ ಶಿಕ್ಷಣ ತಜ್ಞರ ವಿಜ್ಞಾನ ಆಟಿಕೆ, ಕಿಟ್‌ಗಳು ತ್ರಿಪುರಾರಿನ ಕಾಜೇಜು ವಿದ್ಯಾರ್ಥಿಯ ಮನಸೆಳೆದವು. ಪ. ಬಂಗಾಳದ ಬರ್ದ್ವಾನ್‌ನ ಕಾಲೇಜು ಅಧ್ಯಾಪಕಿ ಎ ರ್ನಾಕುಲಂನ ಸ್ಕೂಲ್ ಅಧ್ಯಾಪಕಿಯ ಅನಕ್ಷರತೆಯ ವಿರುದ್ಧ ಸಮರದ ಅನುಭವ ಕೇಳಿ ರೋಮಾಂಚನಗೊಂಡಳು. ಇವರೆಲ್ಲರೂ ೪ ದಿನ ಒಂದೇ ಕಡೆ ಇದ್ದರು. ಚರ್ಚೆನಡೆಸಿದರು. ನಮ್ಮ ದೇಶದ ಅನಕ್ಷರತೆ, ರೋಗ-ರುಜಿನ, ಪಾರತಂತ್ರದಿಂದ ಬಿಡುಗಡೆ ಪಡೆದು ಆಧುನಿಕ ಅಭಿವೃದ್ಧ ನವಭಾರತ ಕಟ್ಟುವುದು ಹೀಗೆ ಎಂದು ತಿಣಕಿದರು. ಮುಂದಿನ ಒಂದು ವರ್ಷಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಜನರನ್ನು ಅಣಿನೆರೆಸಲು ಘೋಷಣೆಗಳನ್ನು ರೂಪಿಸಿದರು.

ಇದು ನಡೆದದ್ದು ಬೆಂಗಳೂರಿನ ಬಳಿಯ ದೇವನಹಳ್ಳಿ ತಾಲ್ಲೂಕಿನ ವಿದ್ಯಾನಗರದಲ್ಲಿ ನಡೆದ "೨ನೇ ಅಖಿಲ ಭಾರತ ಜನ ವಿಜ್ಞಾನ ಕಾಂಗ್ರೆಸ್"ನಲ್ಲಿ ದೇಶದ ವಿವಿಧ ರಾಜ್ಯಗಳಲ್ಲೂ ಪಸರಿಸಿರುವ ೨೫೫ಕ್ಕೂ ಹೆಚ್ಚು ಜನವಿಜ್ಞಾನ ಚಳುವಳಿಯ ಸುಮಾರು ೪೦೦ಕ್ಕೂ ಹೆಚ್ಚು ಕಾರ್ಯಕರ್ತರು ಇಲ್ಲಿ ನೆರೆದಿದ್ದರು. ಇದೇ ಮಾರ್ಚ್ ೮ ರಿಂದ ೧೧

ಪೂರ್ಣ ಸಾಕ್ಷರತಾ ಆಂದೋಲನ

ಮುಖ್ಯ ಕಾರಣ ಎಂದು ಗುರುತಿಸಲಾಯಿತು.

ಸಾಕ್ಷರತೆ ಏತಕ್ಕಾಗಿ? ಎಂಬ ಬಗ್ಗೆ ಸಾಕ್ಷರತಾ ಅಧಿವೇಶನದಲ್ಲಿ ಸಾಕ್ಷರತಾ ತೀವ್ರ ಚರ್ಚೆ ನಡೆಯಿತು. ಸಾಕ್ಷರತೆ ಆಂದೋಲನದ ಹಿಂದಿನ ಪ್ರಯತ್ನ. ಅದರ ದೇಶದ .ಬಹುಸಂಖ್ಯಾತ ಜನತೆಯನ್ನು ಸಾಫಲ್ಯ ವೈಫಲ್ಯಗಳು ಅದಕ್ಕೆ ಕಾರಣಗಳ ಕಾಡುವ ಬಡತನ ಮತ್ತಿತರ ಸಮಸ್ಯೆಗಳಿಗೆ ಬಗ್ಗೆ ಮುಖ್ಯವಾಗಿ ಚರ್ಚಿಸಲಾಯಿತು. ರಾಮಬಾಣವಲ್ಲ ಆದರೆ . ಆ ಸಮಸ್ಯೆಗಳ ಅರೆ ಬರೆ ಪ್ರಯತ್ನ. ರಾಜಕೀಯ ವಿರುದ್ಧ ಹೋರಾಡಲು ಆತನಿಗೆ ಕೊಡುವ ನಿರ್ಧಾರದ ಅಭಾವ, ದೊಡ್ಡ ಪ್ರಮಾಣದಲ್ಲಿ ಪ್ರಮುಖ ಅಸ್ತ್ರ ಎಂದು ಅಭಿಪ್ರಾಯ ದೇಶಪ್ರೇಮಿ ವಿದ್ಯಾವಂತ ಜನತೆಯನ್ನು ಪಡಲಾಯಿತು. ಸಂಪೂರ್ಣ ಸಾಕ್ಷರತೆ ತೊಡಗಿಸದಿರುವುದು ಇಂತಹ ವೈಫಲ್ಯತೆಗೆ ಸಾಧಿಸುವಲ್ಲಿ ಎರ್ನಾಕುಲಂ ಮಾದರಿಯ ರವರೆಗೆ. ಇದು ಜನ ವಿಜ್ಞಾನ ಮತ್ತು ವ್ಯಾಪಕ ಪ್ರಜಾಸತ್ತಾತ್ಮಕ ಚಳುವಳಿಯಲ್ಲೊಂದು ಮೈಲಿಗಲ್ಲು.

೨ನೇ ಜನವಿಜ್ಞಾನ ಕಾಂಗ್ರೆಸ್ ಆರಂಭ ಮತ್ತು ಸಮಾರೋಪ ಅಧಿವೇಶನ ಬಿಟ್ಟರೆ, ಮೂರು ಉಪಅಧಿವೇಶನಗಳಲ್ಲಿ ಆಳ ಗಂಭೀರ ಚರ್ಚೆ ನಡೆಸಿತು. ಈ ಮೂರು ಉಪ ಅಧಿವೇಶನಗಳು ಸಾಕ್ಷರತೆ ಮತ್ತು ವಿಜ್ಞಾನ ಸಂವಹನ, ಆರೋಗ್ಯ, ಸ್ವಾವಲಂಬನೆ. ಇದಲ್ಲದೆ ನರ್ಮದಾ ಯೋಜನೆ ಬಗ್ಗೆ ಚರ್ಚೆ ನಡೆಸಲಾಯಿತು.

ಅನುಭವಗಳು ಮತ್ತು ಇತರ ಸಣ್ಣ ಪ್ರಮಾಣದ ಪ್ರಯತ್ನಗಳ ಅನುಭವಗಳ ಮಂಥನ ನಡೆಯಿತು.

ಜನವಿಜ್ಞಾನ ಚಳುವಳಿ ಪೂರ್ಣ ಸಾಕ್ಷರತಾ ಆಂದೋಲನದಲ್ಲಿ ವಹಿಸಬೇಕಾದ ಪಾತ್ರದ ಬಗ್ಗೆ ಚರ್ಚೆ ನಡೆಯಿತು. ಜನ ವಿಜ್ಞಾನ ಚಳುವಳಿ ಇಂತಹ ಆಂದೋಳನ ವನ್ನು ಆರಂಭಿಸಬೇಕು ಮತ್ತು ಅದರ ಪ್ರಬಲ ಕೇಂದ್ರವಾಗಿರಬೇಕು. ಆದರೆ ಇದಕ್ಕೆ ಎಲ್ಲಾ ಜನವಿಭಾಗಗಳ! ಅವುಗಳ ಪ್ರಜಾತತ್ತಾತ್ಮಕ ಸಂಘಟನೆಗಳ ಸಹಕಾರ ಅಗತ್ಯ. ಅವನ್ನು ಉತ್ಸಾಹಪೂರ್ಣವಾಗಿ ಈ ಆಂದೋಲನದಲ್ಲಿ ತೊಡಗಿಸುವುದು ಮುಖ್ಯ ಪಾತ್ರ ಎಂದು ನಿರ್ಧರಿಸಲಾಯಿತು.

'ಭಾರತ ಜ್ಞಾನ ವಿಜ್ಞಾನ ಜಾಥಾ' ಇಂತಹ ಪ್ರಯತ್ನದ ಆರಂಭ ಎನ್ನಲಾಯಿತು. ಈ ಜಾಥಾದಲ್ಲಿ ೧೦ ಲಕ್ಷ ಸ್ವಯಂಸೇವಕರನ್ನು ಅಣಿನೆರೆಸಬೇಕು ಎಂಬುದು ತೀರಾ ಆಗು ಹೋಗದ ಗುರಿಯೇ ಎಂಬ ಬಗ್ಗೆ ಸಂಶಯ ವ್ಯಕ್ತಪಡಿಸಲಾಯಿತು. ಇದಕ್ಕಿಂತ ಸಣ್ಣ ಪ್ರಮಾಣದ ಆಂದೋಲನ ಅನಕ್ಷರತೆಯ ಸಮಸ್ಯೆಯ ಹತ್ತಿರಕ್ಕೂ ಹೋಗಲಾರದು. ಇದನ್ನು ಒಂದು ಪಂಥಾಹ್ವಾನವಾಗಿ ಸ್ವೀಕರಿಸಬೇಕು. ಎಂಬ ಅಭಿಪ್ರಾಯ ಮೂಡಿ ಬಂತು.

ಎಲ್ಲರಿಗೂ ಆರೋಗ್ಯ ಎಲ್ಲರೂ ಆರೋಗ್ಯಕ್ಕಾಗಿ

ಆರೋಗ್ಯ, ಬೇಡಿ ಅಧಿವೇಶನ, ಔಷಧಿ ನೀತಿ, ಸಾರ್ವತ್ರಿಕ ಅಯೋಡಿಕೃತ ಉಪ್ಪು ನೀತಿ, ಮಹಿಳೆಯರ ಆರೋಗ್ಯ, ಔದ್ಯೋಗಿಕ ಆರೋಗ್ಯ, ಗ್ರಾಮೀಣ ಆರೋಗ್ಯ ವ್ಯವಸ್ಥೆ ಬಗ್ಗೆ ವಿವರವಾಗಿ ಚರ್ಚೆ ನಡೆಸಿತು. ಮೊದಲ ಎರಡು ವಿಷಯಗಳ ಬಗ್ಗೆ ವಿವರವಾದ ಕಾರ್ಯಕ್ರಮ ಯೋಜಿಸ ಲಾಯಿತು. ಮಹಿಳೆಯರ ಆರೋಗ್ಯವನ್ನು ಸಾಮಾನ್ಯವಾಗಿ ಹೆರಿಗೆ ಮತ್ತು ಸಂಬಂಧಿತ ಆರೋಗ್ಯ ಸಮಸ್ಯೆಗಳ ದೃಷ್ಟಿಯಿಂದ ನೋಡಲಾಗುತ್ತಿರುವುದು ತಪ್ಪು. ಇಂತಹ ಸಮಸ್ಯೆಗಳು ಮಹಿಳೆಯರ ಆರೋಗ್ಯ ಸಮಸ್ಯೆಗಳ ಕೇವಲ ಶೇಕಡಾ ೧೫ ಭಾಗ ಮಾತ್ರ. ಇವರ ಹಲವು ಸಮಸ್ಯೆಗಳು ಮಹಿಳೆಯರ ಸಾಮಾಜಿಕ-ಆರ್ಥಿಕ ಪರಿ ಸ್ಥಿತಿಯಿಂದ ಉದ್ಭವವಾದುವು. ಇದು ಮಹಿಳೆಯರಿಗೆ ವಿಶಿಷ್ಟವಾದುದು ತುರ್ತು ಪರಿಸ್ಥಿತಿಯ ನಂತರ ಮಹಿಳಾ ಗರ್ಭ ನಿರೋಧಕ ಆಪರೇಷನ್‌ಗಳಿಗೆ ಕುಟುಂಬ ಯೋಜನೆಯಲ್ಲಿ ಹೆಚ್ಚಿನ ಒತ್ತು. ಇಂತಹ ಕ್ಯಾಂಪುಗಳಲ್ಲಿ ನಿರ್ಲಕ್ಷ್ಯ ಇತ್ಯಾದಿಗಳಿಂದ ಸಮಸ್ಯೆಗಳು. ಮತ್ತು ಭ್ರೂಣ ಪರೀಕ್ಷೆ ಹಾಗೂ ಗರ್ಭಪಾತ ಮುಂತಾದವನ್ನು

➧ ಪುಟ 5

ನಿರ್ಣಯಗಳು

- ★ ದೇಶದಲ್ಲಿ ಸಾಕ್ಷರತಾ ಆಂದೋಲನ ಆರಂಭಿಸಲು ದೇಶದ ೬೦ ಸಾವಿರ ಕೇಂದ್ರಗಳಲ್ಲಿ ೧೦ ಲಕ್ಷ ಸ್ವಯಂ ಸೇವಕರನ್ನು ಅಣಿನೆರೆಸಿ!
- ★ ಲಕ್ಷಗಟ್ಟಲೆ ಜನರಲ್ಲಿ 'ಅಕ್ಷರ ದಾನ್' 'ಅಕ್ಷರ ಅಧ್ಯಯನ್' ಪ್ರತಿಜ್ಞೆ ಕೈಕೊಳ್ಳಿ!
- ★ ೧೯೮೬ರ ಹೊಸ ಔಷಧಿ ನೀತಿಯನ್ನು ಬಿಸಾಕಿ, ಅದರ ಬದಲು ಜನತೆಯ ಹಿತಾಸಕ್ತಿಗೆ ಸ್ವಾವಲಂಬನೆಗೆ ಅನುಗುಣವಾದ ಹೊಸ ನೀತಿಯನ್ನು ಸಾರ್ವಜನಿಕ ಚರ್ಚೆಯ ನಂತರ ರೂಪಿಸಿ!
- ★ ಸಾರ್ವತ್ರಿಕ ಅಯೋಡಿಕೃತ ಉಪ್ಪು ನೀತಿಯನ್ನು ಪುನರ್ವಿಮರ್ಶಿಸಿ!
- ★ ಹೊಸ ಬೀಜ ಆಮದು ನೀತಿಯನ್ನು ಕಿತ್ತು ಹಾಕಿ!
- ★ ದೇಶದ ಸ್ವಾವಲಂಬನೆ, ಸಾರ್ವಭೌಮತ್ವಕ್ಕೆ ಪೂರಕವಾದ ೧೯೭೦ ಪೇಟೆಂಟ್ ಕಾನೂನನ್ನು ವಿದೇಶೀ ಒತ್ತಡಕ್ಕೆ ಮಣಿದು ತಿದ್ದುಪಡಿ ಮಾಡುವುದು ಬೇಡ!
- ★ ನರ್ಮದಾ ಯೋಜನೆಯಿಂದ ದೊಡ್ಡ ಪ್ರಮಾಣದಲ್ಲಿ ನಿರ್ವಸಿತರಾಗುವವರ ಪುನರ್ವಸತಿಯ ಬಗ್ಗೆ ಮತ್ತು ಅಸಮಾನ ವೆಚ್ಚ ಮತ್ತು ಪ್ರಯೋಜನ ಹಂಚಿಕೆ ಬಗ್ಗೆ ವಿವರವಾದ ಅಧ್ಯಯನವನ್ನು ಜನತೆ ಮುಂದಿಡಬೇಕು!

ಈ ವರ್ಷಕ್ಕೆ ಕಾರ್ಯಯೋಜನೆ

ಸಾಕ್ಷರತೆ

೧) ಸೆಪ್ಟೆಂಬರ್ ೧೮ ಅಕ್ಷರದಾನ ... ಸಾಕ್ಷರತಾ ದಿನವಾದ ಸೆಪ್ಟೆಂಬರ್ ... ಲಕ್ಷಗಟ್ಟಲೆ ಜನರಿಂದ 'ಅಕ್ಷರ ದಾ... ಅಧ್ಯಯನ್ ಪ್ರತಿಜ್ಞೆ ಕೈ... ಸಂಘಟನೆ.

೨) ಅಕ್ಟೋಬರ್ 2 ರಿಂದ ನವಂ... ರಾಷ್ಟ್ರೀಯ ಸಾಕ್ಷರತಾ ಆಂದೋಲನ... ದ್ಯಂತ ಹಬ್ಬಿಸಲು ೬೦ ಸಾವಿರ (ಎ... ಜಿಲ್ಲೆಗಳೂ ಸೇರಿದಂತೆ) ಕೇಂದ್ರಗಳ... ಲಕ್ಷ ಸ್ವಯಂ ಸೇವಕರನ್ನು ... ಭಾರತ ಜ್ಞಾನ ವಿಜ್ಞಾನ ಜಾಥಾ.

೩) ಭಾರತ ಜ್ಞಾನ ವಿಜ್ಞಾನ ... ಮೊದಲು ಕೇರಳ ಮತ್ತು ... ರಾಜ್ಯಗಳಲ್ಲಿ ಸಂಪೂರ್ಣ ಸಾಕ್ಷರತೆಯ... ಉಳಿದ ರಾಜ್ಯಗಳ ಕೆಲವು ಜಿಲ್ಲೆ, ... ಹೋಬಳಿ, ಗ್ರಾಮಗಳಲ್ಲಾದರೂ ... ಸಾಕ್ಷರತೆಯ ಸಾಧನೆ.

೪) ಇನ್ನು ಕೆಲವು ವರ್ಷಗಳಲ್ಲಿ ೨... ಜನರನ್ನು ಸಾಕ್ಷರರಾಗಿಸಲು ೨... ಸ್ವಯಂ ಸೇವಕರನ್ನು ಅಣಿನೆರೆಸಲು ... ಯೋಜನೆ ತಯಾರಿ.

ಆರೋಗ್ಯ

೧. ವಿಶ್ವ ಆರೋಗ್ಯ ದಿನವಾದ ... ೭ರಿಂದ ಹೊಸ ಔಷಧಿ ನೀತಿ ಬ... ಕಾಂಗ್ರೆಸ್ ಕೈಗೊಂಡ ನಿರ್ಣಯದ ... ಸಹಿ ಸಂಗ್ರಹ ಆಂದೋಲನದ ಸಪ್ತಾಹ...

೨. ಮೇ ೨ ರಂದು ಹೊಸ ಔ... ವಿರುದ್ಧ ಬೇಡಿಕೆ ದಿನಾಚರಣೆಯ ... ಪ್ರದರ್ಶನ, ಧರಣಿ ಸತ್ಯಾಗ್ರಹ, ... ಸಭೆ, ಕಪ್ಪು ಬ್ಯಾಡ್ಜ್ ಧಾರಣೆ ... ಪ್ರತಿಭಟನಾ ಕಾರ್ಯಕ್ರಮ ಮತ್ತು ... ಖಾತೆಗೆ ಮನವಿ ಸಲ್ಲಿಕೆ.

೩. ಮೇ ಕಡೆಯ ಅಥವಾ ಜೂನ... ವಾರದಲ್ಲಿ ಸರ್ಕಾರದ ಸಾರ್ವತ್ರಿಕ ಅ... ಉಪ್ಪು ನೀತಿಯನ್ನು ಕೂ... ಪರಿಶೀಲಿಸಿ ಬದಲಿ ನೀತಿ ... ದೆಹಲಿಯಲ್ಲಿ ರಾಷ್ಟ್ರೀಯ ವಿಚಾರ ಸ...

೪. ಮಹಿಳೆಯರ ಆರೋಗ್ಯ, ... ಆರೋಗ್ಯ, ಗ್ರಾಮೀಣ ಆರೋಗ್ಯ ... ಬಗೆಗಿನ ಸಮಸ್ಯೆಗಳ ಆಳ ಅಧ್ಯಯ... ಬಗ್ಗೆ ಪ್ರಚಾರ ಮತ್ತಿತರ ಕಾರ್ಯಕ್ರಮ...

ಸ್ವಾವಲಂಬನೆ

೧) ಹೊಸ ಬೀಜ ಆಮದು ... ವಿರುದ್ಧ ನಿರ್ಣಯದ ಪರವಾಗಿ ಸ... ಚಳುವಳಿ ಏಪ್ರಿಲ್ ೨ನೇ ವಾರದ... ಈ ಪಾರ್ಲಿಮೆಂಟಿನ ಅಧಿವೇಶನದ... ನೀತಿಯ ಬಿಸಾಕಿ ಹೊಸ ನೀತಿ ಎರ... ಸಾರ್ವಜನಿಕ ಒತ್ತಡ ತರಲು ... ಮನವಿ.

೨) ದೇಶದ ಹತ್ತು ಕೃಷಿ ವಿಜ್ಞಾ... ಬೀಜ ಬೆಳೆಗಾರರ ಕೇಂದ್ರಗಳಲ್ಲಿ ... ಈ ನಿರ್ಣಯವನ್ನು ಪ್ರಚ... ವಿಚಾರ ಸಂಕಿರಣಗಳ ಆಯೋಜನೆ.

೩) ಕೃಷಿ ವಿಜ್ಞಾನಿಗಳು, ಬೀಜ ... ರೈತರು, ಬೀಜ ಮಾರಾಟಗಾರರ... ಉತ್ಪಾದಕ ಕಂಪನಿಗಳು, ಬಳಕೆ ... ರೈತರು ಈ ಎಲ್ಲಾ ಜನವಿಭಾಗ... ಬೀಜ ನೀತಿಯ ವಿರುದ್ಧ ಪ್ರಚಾರ... ಕಾರ್ಯಕ್ರಮ.

೪) ಪೇಟೆಂಟ್ ಕಾನೂನು ... ಬದಲಾವಣೆ ವಿರುದ್ಧ ಸಹಿ ... ಚಳುವಳಿ.

೫) ಸಾರ್ವತ್ರಿಕ ಬಳಕೆ ... ಸ್ವಾಯುತ್ತತೆಗೆ ಅಪಾಯ ಮತ್ತ... ಪಡೆಯುವ ಹಕ್ಕು ಇವುಗ... ಅಧ್ಯಯನ ನಡೆಸಿ ಪ್ರಚಾರ ... ಅಣಿಯಾಗುವಂತೆ ತಯಾರಿ.

ಮಾರ್ಚ್ ೨೩: ಭಗತ್‌ಸಿಂಗ್ ಹುತಾತ್ಮ ದಿನ

ರಾಷ್ಟ್ರೀಯ ಐಕ್ಯತಾ ದಿನಾಚಾರಣೆ



ಹುತಾತ್ಮರ ಈ ದಿನವನ್ನು ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಗಳು ರಾಷ್ಟ್ರೀಯ ಐಕ್ಯತಾ ದಿನವನ್ನಾಗಿ ಆಚರಿಸುತ್ತಿರುವ ಹಿನ್ನಲೆಯಲ್ಲಿ ಭಗತ್‌ಸಿಂಗ್ ಕೆಲವು ವಿಚಾರಗಳು ಇಲ್ಲಿವೆ.

"ನನ್ನ ಚಿಂತನೆಯ ಸೆಲೆ - ನೆಲೆ"

೧೯೨೧-೨೨ ರ ಚಳುವಳಿಯಿಂದಾಗಿ ನಾನು ಜೈಲಿನಲ್ಲಿದ್ದಾಗ ಭಗವದ್ಗೀತೆ, ರಾಮಾಯಣ, ಖುರಾನ್‌ಗಳು ನನಗೆ ಸ್ಫೂರ್ತಿಯ ನೆಲೆಯಾಗಿದ್ದವು. ೧೯೩೦-೩೧ ರ ಚಳುವಳಿಯ ಹೊತ್ತಿಗೆ ಕಾರ್ಲ್ ಮಾರ್ಕ್ಸ್ ರವರ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ' ಮತ್ತು ರಶಿಯನ್ ಕ್ರಾಂತಿಯ ಇತಿಹಾಸ ಲೆನಿನ್ ಜೀವನ ಚರಿತ್ರೆ ಗ್ರಂಥಗಳು ನನ್ನ ಚಿಂತನೆಯ ಸ್ಫೂರ್ತಿದಾಯಕ ಸೆಲೆಯಾಗಿದ್ದವು".

'ಹೋರಾಟದ ಆದರ್ಶ ಸ್ಪಷ್ಟವಾಗಿ ತಿಳಿದಿರಲಿ

.... ನಾನು ಓದಲು ಪ್ರಾರಂಭಿಸಿದೆ. ಹಳೆಯ ವಿಚಾರಗಳು ಅದ್ಭುತವಾಗಿ ಬದಲಾದವು. ನಮ್ಮಲ್ಲಿ ವ್ಯಾಪಕವಾಗಿ ಮನೆ ಮಾಡಿಕೊಂಡಿದ್ದ ಹಿಂಸಾ ಮಾರ್ಗದ ಅನುಸರಣೆಯ ಆಕರ್ಷಣೀಯ ಸ್ಥಾನದಲ್ಲಿ ಗಂಭೀರ ವಿಚಾರಗಳು ಒಡ ಮಾಡಿದವು. ಯಥಾರ್ಥವಾದ ನನ್ನ ಬದುಕಿನ ನಂಬುಗೆಯಾಯಿತು. ಬೇರೆ ಯಾವುದೇ ದಾರಿ ಇಲ್ಲದಾದಾಗ ಮಾತ್ರ ಹಿಂಸಾ ಮಾರ್ಗ ನ್ಯಾಯ ಸಮ್ಮತವೆನಿಸುತ್ತದೆ. ಅಹಿಂಸೆಯು ಎಲ್ಲಾ ಜನಾಂದೋಲನಗಳ ಅನಿವಾರ್ಯ ಸಿದ್ಧಾಂತವಾಗಬೇಕೆಂಬುದು ನನ್ನ ನಂಬಿಕೆ. ಇದು ಸಾಧನೆಯ ಮಾತಾಯಿತು. ಎಲ್ಲಕ್ಕಿಂತಲೂ ಮಹತ್ವದ್ದೆಂದರೆ ಯಾವ ಆದರ್ಶಕ್ಕಾಗಿ ನಾವು ಹೋರಾಡುತ್ತಿದ್ದೇವೆಯೋ ಅದನ್ನು ಸ್ಪಷ್ಟವಾಗಿ ತಿಳಿದಿರಬೇಕು."

'ತರ್ಕ ಬದ್ಧತೆ ಚಿಂತನೆಯ ತಳಹದಿ"

"ಪ್ರಗತಿ ಮತ್ತು ವಿಕಾಸಕ್ಕೆ ಬದ್ಧನಾದ ಯಾವುದೇ ವ್ಯಕ್ತಿ ಸಾಂಪ್ರದಾಯಿಕ ಶ್ರದ್ಧೆ, ನಂಬಿಕೆಗಳ ಪ್ರತಿಯೊಂದು ಆಯಾಮವನ್ನು ಕುರಿತು ಆಲೋಚಿಸಬೇಕಾಗುವುದು. ಜೀವ ಕಳೆದುಕೊಂಡು ಬರಡು ಕೊರಡಾದುದನ್ನು ಪ್ರಶ್ನಿಸುವ, ತಿರಸ್ಕರಿಸುವ ಸಾಹಸಕ್ಕೆ ಕೈ ಹಾಕ ಬೇಕಾಗುತ್ತದೆ. ಪ್ರಚಲಿತವಿರುವ ಪ್ರತಿಯೊಂದು ಮತವನ್ನೂ ಹಲವು ನಿಟ್ಟಿನಿಂದ ಪರೀಕ್ಷಿಸಿ ತರ್ಕದ ಒರೆಗಲ್ಲಿಗೆ ತಿಕ್ಕ ಬೇಕಾಗುತ್ತದೆ. ತರ್ಕ ಬದ್ಧತೆಯ ವಿಚಾರದ ಬಳಿಕ ಆತನನ್ನೂ ಆಕರ್ಷಿಸಿದ ಸಿದ್ಧಾಂತ ಸ್ವಾಗತಾರ್ಹ. ಆದರೆ ಕೇವಲ ನಂಬಿಕೆ, ಅಂಧಾಭಿಮಾನ, ಮಾತ್ರ ಬಹಳ ಅಪಾಯಕಾರಿ. ಇವು ಮನಸ್ಸನ್ನೂ ಮೌಢ್ಯದಿಂದ ತುಂಬಿ ಮನುಷ್ಯನನ್ನೂ 'ಪ್ರತಿಗಾಮಿ' ಯನ್ನಾಗಿ ಮಾಡುತ್ತವೆ. ಪ್ರಾಚೀನ ನಂಬಿಕೆ.. ಆಚರಣೆಗಳಲ್ಲಿ ಕೆಲವನ್ನು ಪುರಸ್ಕರಿಸುವ ಕೆಲವನ್ನು ತಿರಸ್ಕರಿಸುವ ಮೌಲ್ಯ ಮಾಪನ ಕ್ರಿಯೆ ನಡೆಯುತ್ತಾ ಇರಬೇಕಾಗುತ್ತದೆ."

"ಸಮರ ಸಾಗಿಯೇ ಸಾಗುತ್ತದೆ" (ಪಂಜಾಬ್‌ನ ರಾಜ್ಯಪಾಲರಿಗೆ ಬರೆದ ಪತ್ರ)

.... ಕೇವಲ ಕೈ ಹಿಡಿಯಷ್ಟು ಜನರಿಂದ ಭಾರತ ದೇಶದ ಶ್ರಮ ಜನತೆಯ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಶೋಷಣೆ ನಡೆಯುವ ಕೊನೆ ಕ್ಷಣದವರೆಗೂ ಈ ಸಮರ ಮುಂದುವರಿಯುತ್ತದೆ. ಅವರು ಆಂಗ್ಲ ಬಂಡವಾಳಶಾಹಿಗಳಾಗಿರಬಹುದು, ಇಲ್ಲವೇ ಭಾರತೀಯ ಬಂಡವಾಳಗಾರರಾಗಿರಬಹುದು. ಇದರಲ್ಲಿ ಏನೂ ಅಂತಹ ವ್ಯತ್ಯಾಸವಿಲ್ಲ. ನಿಮ್ಮ ಸರ್ಕಾರ ಸಣ್ಣ ಪುಟ್ಟ ರಿಯಾಯಿತಿ ಹಾಗೂ ರಾಜೀ ಮಾಡಿಕೊಳ್ಳುವುದರ ಮೂಲಕ ಭಾರತದ ಮೇಲ್ ವರ್ಗದ ನಾಯಕರನ್ನು ಗೆಲ್ಲುವುದರಲ್ಲಿ ಸಫಲವಾಗಬಹುದು. ಇದರಿಂದ ನಮ್ಮ ಹೋರಾಟದಲ್ಲಿ ತಾತ್ಕಾಲಿಕ ನಿರುತ್ಸಾಹ ಮೂಡಬಹುದು. ನಮಗೆ ಇದೇನೂ ದೊಡ್ಡ ವಿಷಯವೇನಲ್ಲ. ಈ ಸಮರ ಮುಂದುವರಿಯುತ್ತದೆ. ಹೋರಾಟದ ಮಾರ್ಗ ಅದರ ವಿಧಾನ ಎಂತಹದಿರಬೇಕೆಂದು ನೀವೇ (ಬ್ರಿಟಿಷರು) ಆಯ್ಕೆ ಮಾಡಿಕೊಳ್ಳಿ. ಆದರೆ ಸಮರಮಾತ್ರ ನಿರಂತರ ಸಾಗುತ್ತದೆ. ಹೊಸ ಉತ್ಸಾಹ ಒಂದಿಷ್ಟು ಚಂಚಲತೆಗೆ ಒಳಗಾಗದೇ ದೃಢ ನಿರ್ಧಾರದಿಂದ ಸಮಾಜವಾದೀ ಗಣತಂತ್ರ ನೆಲೆಸುವ ತನಕವೂ ನಮ್ಮ ಹೋರಾಟ ಸಾಗಿಯೇ ಸಾಗುತ್ತದೆ".

— ಸಂಗ್ರಹ: ಎಸ್.ವೈ. ಗುರುಶಾಂತ್

ಬೀಡಿ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಬೃಹತ್ ಪ್ರದರ್ಶನ

ಕಳೆದ ನಾಲ್ಕು ತಿಂಗಳುಗಳಿಂದ ವಾರದಲ್ಲಿ ಬರೇ ಎರಡು ದಿನಗಳ ಕೆಲಸ ಸಿಗುತ್ತಿರುವುದರಿಂದ ಉಪವಾಸದ ದವಡೆಗೆ ತಳ್ಳಲ್ಪಟ್ಟಿರುವ ದ.ಕ. ಜಿಲ್ಲೆಯ ಮೂರು ಲಕ್ಷ ಬೀಡಿ ಕಾರ್ಮಿಕರಿಗೆ ವಾರದ ಆರು ದಿನವೂ ಕೆಲಸ ಕೊಡಬೇಕು. ಕೆಲಸವಿಲ್ಲದ ದಿನಗಳಿಗೆ ಕನಿಷ್ಠ ಕೂಲಿಯ ಕಾನೂನು ಪ್ರಕಾರ ೮೦೦ ಬೀಡಿಗಳ ಮಜೂರಿ (ಫಾಲ್‌ಬ್ಯಾಕ್ ವೇಜ್) ನೀಡಬೇಕೆಂದು ಒತ್ತಾಯಿಸಿ ತಾರೀಕು ೩.೩.೯೦ ರಿಂದ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಅನಿರ್ದಿಷ್ಟಾವಧಿಯ ಸತ್ಯಾಗ್ರಹ ನಡೆಸುತ್ತಿರುವ ಬೀಡಿ ಕಾರ್ಮಿಕರ ಬೆಂಬಲಾರ್ಥವಾಗಿ ತಾರೀಕು ೮.೩.೯೦ ರಂದು ಸಿಐಟಿಯು ದ.ಕ. ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಬೃಹತ್ ಪ್ರದರ್ಶನವನ್ನು ನಡೆಸಲಾಯಿತು. ಹಂಚು, ಗೇರುಬೀಜ, ಅಡಿಕೆ, ಮೋಟಾರ್ ಟ್ರಾನ್ಸ್‌ಪೋರ್ಟ್, ಆಟೋ ರಿಕ್ಷಾ, ಪ್ರೆಸ್ ಇತ್ಯಾದಿ ಕೈಗಾರಿಕೆಗಳ ಕಾರ್ಮಿಕರೂ ಬೀಡಿ ಕಾರ್ಮಿಕರೂ ಮೆರವಣಿಗೆಯಲ್ಲಿ ಬಂದು ಪ್ರದರ್ಶನ ದಲ್ಲಿ ಭಾಗವಹಿಸಿದರು.

ಸಿಐಟಿಯು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕೆ. ಮೊಸಬ್ಬ, ಪ್ರಧಾನ ಕಾರ್ಯದರ್ಶಿ ಬಿ. ಮಾಧವ ಮತ್ತು ಕಾರ್ಯದರ್ಶಿಗಳಾದ ಕಮಲಾಕ್ಷ ಬಂಗೇರ ಮತ್ತು ಪಿ. ಉಮೇಶ್ ಭಂಡಾರಿ ಯವರನ್ನು ಒಳಗೊಂಡ ನಿಯೋಗವು ಜಿಲ್ಲಾಧಿಕಾರಿಯವರನ್ನು ಭೇಟಿಯಾಗಿ ಮನವಿ ಅರ್ಪಿಸಿತು.

ಬಳಿಕ ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ನ ದ.ಕ. ಜಿಲ್ಲಾ ಪ್ರಧಾನಕಾರ್ಯದರ್ಶಿ ಬಿ.ಮಾಧವ ನವರು ಬೀಡಿ ಕಾರ್ಮಿಕರ ಗಂಭೀರ ಸಮಸ್ಯೆಯ ಕುರಿತು ರಾಜ್ಯ ಸರಕಾರವು ತಾಳಿರುವ ಅಸಡ್ಡೆಯ ಮನೋಭಾವವನ್ನು ಖಂಡಿಸಿದರು. ಸರಕಾರವು ತಕ್ಷಣ ಮಧ್ಯ ಪ್ರವೇಶ ಮಾಡಿ ಕಾರ್ಮಿಕರಿಗೆ ನ್ಯಾಯ ಸಮ್ಮತ ಪರಿಹಾರವನ್ನು ದೊರಕಿಸಿಕೊಡಬೇಕೆಂದೂ, ಮಧ್ಯ ಪ್ರದೇಶ ಸರಕಾರವನ್ನು ಸಂಪರ್ಕಿಸಿ ಕರ್ನಾಟಕಕ್ಕೆ ಸಾಕಷ್ಟು ಬೀಡಿ ಎಲೆಯನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದೂ ಒತ್ತಾಯಿಸಿದ ಅವರು ಜಿಲ್ಲೆಯ ಎಲ್ಲಾ ವಿಭಾಗಗಳ ಕಾರ್ಮಿಕರೂ ಬೀಡಿಕಾರ್ಮಿಕರ ಹೋರಾಟವನ್ನು ಸಕ್ರಿಯವಾಗಿ ಬೆಂಬಲಿಸಬೇಕೆಂದು ಕರೆನೀಡಿದರು.

ಪ್ರತಿಭಟನಾ ಸತ್ಯಾಗ್ರಹ

ಕುಂದಾಪುರದಲ್ಲಿ ೮.೩.೧೯೯೦ ರಂದು ಬೀಡಿ ವರ್ಕರ್ಸ್ ಯೂನಿಯನ್ ಕುಂದಾಪುರ, ಇದರ ನೇತೃತ್ವದಲ್ಲಿ ತಾಲ್ಲೂಕು ಕಛೇರಿಯ ಎದುರು ಸಾಮೂಹಿಕ ಸತ್ಯಾಗ್ರಹ ನಡೆಯಿತು. ಮುಖ್ಯ ಮಂತ್ರಿಗೆ ತಹಸಿಲ್ದಾರರವರ ಮುಖಾಂತರ ಬೇಡಿಕೆಗಳುಳ್ಳ ಮನವಿಯೊಂದನ್ನು ಕೊಡಲಾಯಿತು. ವಾರದಲ್ಲಿ ಬೀಡಿ ಕಾರ್ಮಿಕರಿಗೆ ೬ ದಿವಸ ಕೆಲಸ ಇಲ್ಲದಿದ್ದಲ್ಲಿ ಕನಿಷ್ಠ ಕೂಲಿ ಕಾಯಿದೆಯಲ್ಲಿದಂತೆ ಪರಿಹಾರ ನೀಡುವ ವ್ಯವಸ್ಥೆ ಕೂಡಲೆ ಮಾಡಬೇಕೆಂದು ಸರಕಾರವನ್ನು ಮನವಿಯಲ್ಲಿ ಒತ್ತಾಯಿಸಲಾಗಿದೆ

ಬೀಡಿ ಕಾರ್ಮಿಕರ ಬೇಡಿಕೆಗಳನ್ನು ಹಾಗೂ ಹೋರಾಟವನ್ನು ಬೆಂಬಲಿಸಿ ಹಂಚಿನ ಕಾರ್ಮಿಕರು ಹಾಗೂ ಇತರ ಸಹೋದರ ಸಂಘಟನೆಗಳು ಮಧ್ಯಾಹ್ನ ೪ ಘಂಟೆಗೆ ಬೃಹತ್ ಮೆರವಣಿಗೆ ಹೊರಟು ತಾಲೂಕು ಕಛೇರಿಗೆ ಹೋಗಿ, ಅನಂತರ ಕುಂದಾಪುರ ಶಾಸ್ತ್ರಿ ಪಾರ್ಕಿನ ಬಳಿ ಸಾರ್ವಜನಿಕ ಸಭೆ ನಡೆಯಿತು.

ಸಿಐಟಿಯು ಮುಖಂಡರಾದ ಶ್ರೀಯುತ ಹೆಚ್. ನಾರಾಯಣನವರು ಸ್ವಾಗತಿಸಿ, ಬೀಡಿ ಕಾರ್ಮಿಕರ ಹೋರಾಟದ ಮಹತ್ವವನ್ನು ವಿವರಿಸಿದರು. ಬೀಡಿ ವರ್ಕರ್ಸ್ ಯೂನಿಯನ್, ಕುಂದಾಪುರ ಇದರ ಅಧ್ಯಕ್ಷರಾದ ಶ್ರೀಯುತ ಕೆ. ಶಂಕರ್ ಸಭೆಯ ಅಧ್ಯಕ್ಷತೆ ವಹಿಸಿದರು.

ಸಭೆಯನ್ನುದ್ದೇಶಿಸಿ ಮಹಿಳಾ ಸಂಘಟನೆಯ ಮುಖಂಡರಾದ ಎಸ್.ಆರ್. ಲೀಲಾವತಿ, ಸಿಐಟಿಯು ಮುಖಂಡರಾದ ಮಹಾಬಲ ವಡೇರ ಹೋಬಳಿ ಹಾಗೂ ಅಬ್ರಹಾಂ ಕರ್ಕಡರು ಮಾತನಾಡಿ ಮುಖ್ಯವಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಬೀಡಿ ಕೈಗಾರಿಕೆಯಲ್ಲಿ ನಡೆಯುವ ಶೋಷಣೆ ಹಾಗೂ ಕೆಲಸ ಭದ್ರತೆ ಇಲ್ಲದಿದ್ದುದರ ಬಗ್ಗೆ ವಿವರಿಸಿ, ಕನಿಷ್ಠ ಕೂಲಿ ಕಾಯಿದೆಯ ಉಲ್ಲಂಘನೆ ಮಾಡಿದ ಮಾಲಿಕರ ಮೇಲೆ ಸರಕಾರ ತುರ್ತಾಗಿ ಕ್ರಮ ಕೈಗೊಳ್ಳಬೇಕೆಂದೂ, ವಾರದಲ್ಲಿ ೬ ದಿವಸ ಕೆಲಸ ಇಲ್ಲವೇ ಇಲ್ಲದ ದಿವಸಗಳಲ್ಲಿ ಪರಿಹಾರದ ವ್ಯವಸ್ಥೆ ತುರ್ತಾಗಿ ಆಗ ಬೇಕೆಂದು ಸರಕಾರವನ್ನು ಒತ್ತಾಯಿಸಿದರು.

ನ್ಯಾಯವಾದ ಬೇಡಿಕೆಗಳಿಗಾಗಿ ಸಂಘಟನೆ ಮತ್ತು ಹೋರಾಟವನ್ನು ಬೆಳೆಸಬೇಕೆಂದು ಕರೆನೀಡಿದರು. ಶ್ರೀಯುತ ವಿ. ನರಸಿಂಹ ನವರು ಅಭಿನಂದನೆ ಸಲ್ಲಿಸಿದರು.

ಸವಿನೆನಪಿಗಾಗಿ ಕಾಣಿಕೆ

ರಾಯಚೂರಿನ ಕಾಂ.ಲಿಂಗಪ್ಪ ಪೂಜಾರ್ ತಮ್ಮ ಮದುವೆಯ ಸವಿನೆನಪಿನಲ್ಲಿ ತಮ್ಮ ಪ್ರಿಯ ಪತ್ರಿಕೆ 'ಐಕ್ಯರಂಗ'ಕ್ಕೆ ೨೫ ರೂ. ಕೊಡುಗೆ ನೀಡಿದ್ದಾರೆ. ಈ ಅಭಿಮಾನಕ್ಕಾಗಿ ಕೃತಜ್ಞತೆ ಸಲ್ಲಿಸುತ್ತಾ ಅವರ ವೈವಾಹಿಕ ಜೀವನ ಸುಖಮಯವಾಗಿರಲಿ. ಸಾರ್ಥಕವಾಗಲಿ, ಕರ್ನಾಟಕದ ಪ್ರಜಾಪ್ರಭುತ್ವ ಆಂದೋಲನಕ್ಕೂ ಕಾಣಿಕೆಯಾಗಲಿ ಎಂದು 'ಐಕ್ಯರಂಗ' ಹಾರ್ದಿಕವಾಗಿ ಹಾರೈಸುತ್ತದೆ.

ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ರೈತ ಕಾರ್ಮಿಕರ ಹೋರಾಟ ಬಲ ಪಡಿಸಲು ಕರೆ

ಇತ್ತೀಚೆಗೆ ನಡೆದ ಮಹಾ ಚುನಾವಣೆಯಲ್ಲಿ ಆಡಳಿತರೂಢ ಕಾಂಗ್ರೆಸ್ ಸೋತು ರಾಷ್ಟ್ರೀಯ ರಂಗ ಸರ್ಕಾರ ದೇಶದಲ್ಲಿ ಅಧಿಕಾರಕ್ಕೆ ಬಂದಿರುವುದರಿಂದ ರೈತರು, ಕಾರ್ಮಿಕರು ತಮ್ಮ ಬೇಡಿಕೆಗಳಿಗೆ ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ.

ಸ್ವಾತಂತ್ರ್ಯ ಬಂದು ೪೩ ವರ್ಷಗಳಾದರೂ ನಮ್ಮ ದೇಶದ ಬಹುಮುಖ್ಯ ಸಮಸ್ಯೆಗಳಿಗೆ ಪರಿಹಾರವು ದೊರೆತಿಲ್ಲವಾದುದರಿಂದ ಈ ಸಂದರ್ಭವನ್ನು ಸದುಪಯೋಗ ಪಡಿಸಿ ಶೋಷಿತ ಜನ ಸಮುದಾಯವು ತಮ್ಮ ಹೋರಾಟವನ್ನು ಚುರುಕುಗೊಳಿಸಬೇಕಾದಅವಶ್ಯಕತೆಯನ್ನು ಮಾರ್ಚ್ ೧೦ ರಂದು ರೈತ ಕಾರ್ಮಿಕರ ವಿಟ್ಲ ಫಿರ್ಕಾ ಸಮ್ಮೇಳನವನ್ನುದ್ದೇಶಿಸಿ ದ.ಕ. ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾ. ಕೆ.ಆರ್. ಶ್ರೀಯಾನ್ ಕರೆ ಇತ್ತರು.

ವಿಟ್ಲ ಫಿರ್ಕಾ ರೈತ ಕಾರ್ಮಿಕರ ಪ್ರಥಮ ಸಮ್ಮೇಳನಕ್ಕೆ ಬಂಟ್ವಾಳ ತಾಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ಜಿ. ನಾರಾಯಣ ಶುಭಕೋರಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಸ್ವಾಗತ ಸಮಿತಿ ಅಧ್ಯಕ್ಷ ಕಾ. ಜಿ. ವಾಸುಗಟ್ಟಿಯವರು ವಹಿಸಿದ್ದರು.


ವಿಟ್ಲ ಫಿರ್ಕಾದಲ್ಲಿ ವಿದ್ಯುತ್ ಲೋ ವೋಲ್ಟೇಜನಿಂದಾಗಿಪರೀಕ್ಷೆಯ ಸಮಯಗಳಲ್ಲಿ ವಿದ್ಯಾರ್ಥಿಗಳಿಗೆ ಆಗಲಿರುವ ತೊಂದರೆ ಅಲ್ಲದೆ ರೈತರು ಅನುಭವಿಸುತ್ತಿರುವ ತೊಂದರೆಗಳನ್ನು ಚರ್ಚಿಸಿ ಸರಿಪಡಿಸಲು ಕೆ.ಇ.ಬಿ. ಇಲಾಖೆಯ ಅಧಿಕಾರಿಗಳನ್ನು ಒತ್ತಾಯಿಸುವ ಠರಾವನ್ನು ಮಂಡಿಸಿಮಂಜೂರು ಮಾಡಲಾಯಿತು.

ಅಧ್ಯಕ್ಷರಾಗಿ ಕೂಸಪ್ಪಯ್ಯ ಕಾಮತ್, ಪುಳಿಂದ, ಉಪಾಧ್ಯಕ್ಷರಾದ ಕೃಷ್ಣ ಮರೆತ್ತಾಯ ಕನ್ಯಾನ, ಕಾರ್ಯದರ್ಶಿಯಾಗಿ ಪಿ. ರಾಮಣ್ಣ ವಿಟ್ಲ, ಜತೆ ಕಾರ್ಯದರ್ಶಿಯಾಗಿ ನಾರಾಯಣ ಮೂಲ್ಯ ಕೇಪು, ಖಜಾಂಚಿಯಾಗಿ ಎ. ಚೆನ್ನಪ್ಪ ಸೇರಿರುವ ಹದಿಮೂರು ಜನರ ವಿಟ್ಲ ಫಿರ್ಕಾ ರೈತ ಕಾರ್ಮಿಕರ ಫಿರ್ಕಾ ಸಮಿತಿಯನ್ನು ರಚಿಸಲಾಯಿತು.

ಮಾರ್ಚ್ ೧೩ ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ರೈತ ಕಾರ್ಮಿಕರ ಹಿತಾಸಕ್ತಿ ಕಾಪಾಡದೆ ವಚನ ಭ್ರಷ್ಟರಾದ ಕಾಂಗ್ರೆಸ್ ಚುನಾವಣೆಯಲ್ಲಿ ಸೋತಿತು, ಇದೀಗ ಅಧಿಕಾರಕ್ಕೆ ಬಂದಿರುವ ರಾಷ್ಟ್ರೀಯ ರಂಗ ಸರ್ಕಾರ ರೈತರಿಗೆ, ಕೃಷಿ ಕೂಲಿಕಾರರಿಗೆ ನೀಡಿರುವ ಭರವಸೆಗಳನ್ನು ನೆನಪಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ. ಆದರೆ ಭರವಸೆಗಳ ಈಡೇರಿಕೆಗೆ ಬಲವಾದ ರೈತ, ಕೃಷಿ ಕೂಲಿಕಾರ ಸಂಘಟನೆ ಅಗತ್ಯ. ಎ.ಐ.ಕೆ.ಎಸ್. ನೇತೃತ್ವದಲ್ಲಿ ರೈತ ಸಂಘ ಕಟ್ಟಬೇಕೆಂದು ದ.ಕ. ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಮಾಧವ ಕರೆ ನೀಡಿದರು.

ಇ.ಎಂ.ಎಸ್. ಪ್ರಶ್ನೋತ್ತರ

ಐಕ್ಯರಂಗದ ಓದುಗರ ಪ್ರಶ್ನೆಗಳಿಗೆ ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಹಾಗೂ ದೇಶದ ಕಮ್ಯುನಿಸ್ಟ್ ಆಂದೋಲನದ ಅಗ್ರಮಾನ್ಯ ಮುಂದಾಳು ಕಾಂ. ಇ.ಎಂ.ಎಸ್. ನಂಬೂದರಿಪ್ಪಾಡ್ ಉತ್ತರಿಸುತ್ತಾರೆ ಎಂದು ಹಿಂದೆ ಓದುಗರ ಪ್ರಶ್ನೆಗಳನ್ನು ಆಹ್ವಾನಿಸಿದ್ದೆವು. ಪತ್ರಿಕೆಯ ಅನಿಯಮಿತತೆಯಿಂದಾಗಿ ಇದು ಜಾರಿಗೆ ಬರಲಿಲ್ಲ. ಈಗ ಅದನ್ನು ಮತ್ತೆ ಆರಂಭಿಸಲಿದ್ದೇವೆ. ನಿಮ್ಮ ಪ್ರಶ್ನೆಗಳನ್ನು 'ಐಕ್ಯರಂಗ'ಕ್ಕೆ ಕಳುಹಿಸಿ.



ಜನವರಿ ೨೪ ರಂದು ಬೆಂಗಳೂರಿನ ಆಟೋರಿಕ್ಷಾ ಡ್ರೈವರ್ ಯೂನಿಯನ್‌ನ ೧೫ನೇ ವಾರ್ಷಿಕೋತ್ಸವ ಮತ್ತು ಸರ್ವಸದಸ್ಯರ ಸಭೆಯ ಸಂದರ್ಭದಲ್ಲಿ ಸಭೆ ನಡೆದ ಸ್ಥಳವಾದ ಬೆಂಗಳೂರಿನ ಪುರಭವನದ ಎದುರು ಬೆಂಗಳೂರಿನ ನಾಗರಿಕರ ಗಮನ ಸೆಳೆದ ಎ.ಆರ್.ಡಿ.ಯು. ಬಾವುಟ ಹೊತ್ತ ಆಟೋ ರಿಕ್ಷಾಗಳು.

ಸಿ.ಪಿ.ಟಿ.ಯು. ರಾಜ್ಯಾಧ್ಯಕ್ಷ ಎಸ್. ಸೂರ್ಯನಾರಾಯಣರಾವ್ ಉದ್ಘಾಟಿಸಿದ ಈ ಸಮಾರಂಭದ ಅಧ್ಯಕ್ಷತೆಯನ್ನು ವಿ. ರಮೇಶ್ ವಹಿಸಿದ್ದರು. ಚರ್ಚೆ, ವಿಚಾರ ವಿನಿಮಯದ ನಂತರ ಸಭೆ ಚಾಲಕರ ಸಮಸ್ಯೆ ಕುರಿತು ಹತ್ತು ಬೇಡಿಕೆಗಳನ್ನು ಮುಂದಿಡಲು ನಿರ್ಧರಿಸಿತು. ಜಿ. ಸುಬ್ಬರಾವ್ ನೂತನ ಸಮಿತಿಯ ಅಧ್ಯಕ್ಷರಾಗಿ, ಜಿ.ಎಸ್. ನಾರಾಯಣ ಮೂರ್ತಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಎ.ಕೆ. ಕುಪ್ಪುಸ್ವಾಮಿ ಮತ್ತು ಜಿ. ಅನ್ಬಳಗನ್ ಉಪಾಧ್ಯಕ್ಷರುಗಳಾಗಿ, ಆರ್.ಬಾಲಕೃಷ್ಣ, ಸಮೀಉಲ್ಲ ಜಂಟಿ ಕಾರ್ಯದರ್ಶಿಗಳಾಗಿ, ಆರ್. ನಂಜಪ್ಪ, ಅಬ್ದುಲ್‌ಗಫೂರ್ ಸಹಾಯಕ ಕಾರ್ಯದರ್ಶಿಗಳಾಗಿ ಆಯ್ಕೆಗೊಂಡರು. ಸಂಘಟನಾ ಕಾರ್ಯದರ್ಶಿಯಾಗಿ ಹೆಚ್.ಜಿ. ಶ್ರೀನಿವಾಸಮೂರ್ತಿ ಹಾಗೂ ಖಜಾಂಚಿಯಾಗಿ ಎಂ.ಆರ್. ಜಯಪ್ರಕಾಶ್ ಆಯ್ಕೆಗೊಂಡರು. ವಕೀಲರಾದ ಎಸ್. ಶಂಕರಪ್ಪ ಸಂಘದ ಕಾನೂನು ಸಲಹೆಗಾರರಾಗಿರುತ್ತಾರೆ.

ಆಟೋ ಚಾಲಕರ ಸಮಸ್ಯೆಗಳ ಬಗ್ಗೆ ಉಪೇಕ್ಷೆಗೆ ಪ್ರತಿಭಟನೆ

ಆಟೋ ನಿಲ್ದಾಣಗಳ ಅಭಾವ, ಸಂಚಾರ ನಿಯಮಗಳ ಉಲ್ಲಂಘನೆ ಹೊರಿಸುವ ಮೊಕದ್ದಮೆಗಳ ಮೂಲಕ ಕಿರುಕುಳ, ಸೋಲಾರಿಂಗ್ ಬೋರ್ಡ್‌ಗಳಿಂದ ಪ್ರಯಾಣಿಕರನ್ನು ಇಳಿಸುವ ತೊಂದರೆ, ಈ ಸಮಸ್ಯೆಗಳ ಪರಿಹಾರಕ್ಕೆ ಡಿ.ಸಿ.ಪಿ. ಯವರಿಗೆ ಸಲ್ಲಿಸಿದ ಮನವಿ ಪತ್ರಕ್ಕೆ ಇದುವರೆಗೂ ವಿನಃ ಪ್ರತಿಕ್ರಿಯೆ ಇಲ್ಲದ್ದರಿಂದ ದಿನ ಒತ್ತಡದಿಂದ ಆಗುವ ಸಣ್ಣ ಪುಟ್ಟ ನಿತ್ಯ ಆಟೋ ಚಾಲಕರು ಅನುಭವಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಒತ್ತಾಯಿಸಿ ಮಾರ್ಚ್ ೧೩ ರಂದು ಆಟೋ ಚಾಲಕರು ಎ.ಆರ್.ಡಿ.ಯು. ನೇತೃತ್ವದಲ್ಲಿ ಪೋಲೀಸ್ ಕಮಿಷನರ್ ಕಚೇರಿಗೆ ಮೆರವಣಿಗೆ ಹೋಗಿ ಮನವಿ ಅರ್ಪಿಸಿ ಧರಣಿ ನಡೆಸಿದರು.



ಇ.ಎಂ.ಎಸ್. ಪ್ರಶ್ನೋತ್ತರ

ಸಮಾಜವಾದೀ ಜಗತ್ತಿನ ಪರಿಸ್ಥಿತಿ ಏಕೆ? ಏನು?

ಪ್ರಶ್ನೆ:

ಏಳು ದಶಕಗಳನ್ನು ದಾಟಿದ ಸೋವಿಯತ್ ಒಕ್ಕೂಟದಲ್ಲಿ ಲಿತ್ವಾನಿಯಾದಂತಹ ಗಣ ರಾಜ್ಯ ತನ್ನದೇ ಆದ ಸ್ವತಂತ್ರ ಆಡಳಿತದ ಹಕ್ಕನ್ನು ಕೇಳಿದೆ. ಸಿ.ಪಿ.ಎಸ್.ಯು. ಮುಖಂಡ ಪಾತ್ರದ ಬಗ್ಗೆ ಹೇಳುವ ಸಂವಿಧಾನದ ೬ ನೆಯ ಕಲಮನ್ನು ತೆಗೆದುಹಾಕಲಾಗುತ್ತಿದೆ. ನಲ್ವತ್ತು ವರ್ಷಗಳನ್ನು ಕ್ರಮಿಸಿದ ರುಮಾನಿಯನ್ ಅಧ್ಯಕ್ಷರನ್ನು ಗುಂಡಿಟ್ಟುಕೊಂದರು. ರುಮಾನಿಯಾದಲ್ಲಿ ಕಮ್ಯೂನಿಸಮನ್ನು ನಿಶೇಧಿಸಲಾಯಿತು. ಹಂಗರಿ, ಪೋಲಂಡ್, ಝೆಕಸ್ಲವಾಕಿಯಾ, ಬಲ್ಗೇರಿಯಾ, ಎಂಬಿತ್ಯಾದಿಯೆಡೆಗಳಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಹೆಸರು ಬದಲಾಯಿಸುತ್ತಿರವರು. ಇವು ಸಮಾಜವಾದಿ ರಾಷ್ಟ್ರಗಳಲ್ಲಿನ ಈಗಿನ ಸ್ಥಿತಿಯಾಗಿದ್ದರೆ ಮಾರ್ಕ್ಸ್ ಪರಿಕಲ್ಪಿಸುವ ಕಾರ್ಮಿಕ ವರ್ಗದ ಸರ್ವಾಧಿಕಾರ ಕಮ್ಯುನಿಸಂ ವಿಶ್ವದಲ್ಲಿ ಜಾರಿಯಾಗುವ ಕಾಲಘಟ್ಟ ಯಾವುದಾಗಿರಬಹುದು? ಅಥವಾ ಯಾವಾಗ? ಒಡನಾಡಿಯಿಂದ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ.

ಪಿ. ಮಹಮ್ಮದ್ ಕೋಯ
ಕೋಷ್ಯಿಯಲ್ ಕಲ್ಲಿಕೋಟೆ

ಉತ್ತರ:

ಬಂಡವಾಳಶಾಹಿ ಪದ್ಧತಿಯಿಂದ ಸಮಾಜವಾದಕ್ಕೆ ಇರುವ ಪರಿವರ್ತನೆ ಒಂದು ಧೀರ್ಘ ಕಾಲೀನ ಪ್ರಕ್ರಿಯೆಯಾಗಿದೆ. ಅದರ ಮಧ್ಯೆ ಯಶಸ್ಸುಗಳು ಎಂಬಂತೆಯೇ ಹಿನ್ನೆಲೆಗಳೂ ಉಂಟಾಗುವುದು ಸಹಜವಾಗಿವೆ. ಅಂತಹದೊಂದು ಹಿನ್ನಡೆಯ ಸಂದರ್ಭ ಇದಾಗಿದೆ.

ಮಾರ್ಕ್ಸ್ ಮತ್ತು ಏಂಗಲ್ಸ್‌ರಿಗೆ, ಸಮಾಜವಾದೀ ಸಮಾಜ ಕಟ್ಟಿ ಬೆಳೆಸುವುದರ ಕುರಿತು ಕೆಲವು ಸಾಮಾನ್ಯ ಕಲ್ಪನೆಗಳು ಮಾತ್ರ ಇದ್ದವು. ಅವರು ಬದುಕಿದ್ದ ಕಾಲದಲ್ಲಿ ಸಮಾಜವಾದೀ ಪರಿವರ್ತನೆ ಪ್ರಾಯೋಗಿಕ ಪ್ರಶ್ನೆಯಾಗಿ ಮೂಡಿ ಬರಲಿಲ್ಲ. ಅಲ್ಲವೇ?

ಇದರಿಂದಾಗಿ, ಪ್ರಥಮ ಸಮಾಜವಾದೀ ಕ್ರಾಂತಿ ನಡೆದ ರಷ್ಯಾದಲ್ಲಿ ಸಮಾಜವಾದೀ ಸಮಾಜ ಕಟ್ಟಿ ಬೆಳೆಸಬೇಕಾಗಿ ಬಂದ ಲೆನಿನ್: ಮಾರ್ಕ್ಸ್ ಮತ್ತು ಏಂಗಲ್ಸ್‌ರಂತೆಯೇ ತಮ್ಮ ಸ್ವಂತ ಬುದ್ಧಿಶಕ್ತಿಯನ್ನು ಉಪಯೋಗಿಸಬೇಕಾಗಿ ಬಂತು. ಅದನ್ನುಪಯೋಗಿಸಿ ಸಮಾಜವಾದಿ ನಿರ್ಮಾಣದ ಮಾರ್ಗವನ್ನು ಅವರು ರೂಪಿಸಿದರು. ಒಮ್ಮೆ ಬಳಸಿದ ಮಾರ್ಗವನ್ನು ನಂತರ ಕೈಬಿಡಬೇಕಾಗಿ ಬಂತು. ಇದರ ಅನುಭವದಿಂದ ಮಾರ್ಕ್ಸ್ ಮತ್ತು ಏಂಗಲ್ಸ್‌ರ ದೃಷ್ಟಿಕೋನಗಳನ್ನು ಬಲಪಡಿಸಿ, ಪ್ರಾಯೋಗಿಕವಾದ ಒಂದು ಮಾರ್ಗವನ್ನು ರೂಪಿಸಲುಸಾಧ್ಯವಾಯಿತು.

ಲೆನಿನ್‌ರೂ ಹೆಚ್ಚಿನ ಕಾಲ ಬದುಕಿರಲಿಲ್ಲ. ಆದುದರಿಂದ ಅವರು ತೋರಿಸಿಕೊಟ್ಟ ಮಾರ್ಗ ಅವರ ಹಿಂದೆ ಬಂದವರಿಗೆ ಅಪರ್ಯಾಪ್ತವಾಗಿದ್ದವು. ಅವರೂ ಅವರವರ ಸ್ವಂತ ಬುದ್ಧಿಶಕ್ತಿಯನ್ನು ಬಳಸಿ, ಸಮಾಜವಾದೀ ಸಮಾಜವನ್ನು ಕಟ್ಟಿ ಬೆಳೆಸಲಾರಂಭಿಸಿದರು. ಅದಕ್ಕೆ ಅದ್ಭುತಕರವಾದ ಫಲವೂ ಉಂಟಾಯಿತು.

ಅಂದಿನವರೆಗೆ ಹಿಂದೆ ಬಿದ್ದಿದ್ದ ಸೋವಿಯತ್ ಯೂನಿಯನ್ ಅತಿ ಬೇಗನೆ ಮುಂದಕ್ಕೆ ಸಾಗಿತು. ವಿಶ್ವದ ಅತ್ಯಂತ ಶಕ್ತಿಶಾಲಿಯಾದ ಒಂದು ಸೈನ್ಯವನ್ನು ನಾಜಿ ಸೇನೆಯನ್ನು ಬೆನ್ನಟ್ಟಿ ಓಡಿಸಲೂ ನುಚ್ಚು ನೂರು ಮಾಡಲೂ ಸೋವಿಯತ್ ಒಕ್ಕೂಟಕ್ಕೆ ಸಾಧ್ಯವಾಯಿತು. ಮುಂದೆ ಹೊಸ ದೇಶಗಳಿಗೆ ಸಮಾಜವಾದ ಹರಡಿತು. ಏಕೈಕ ಸಮಾಜವಾದೀ ರಾಷ್ಟ್ರ, ಉಳಿದೆಲ್ಲವೂ ಬಂಡವಾಳಶಾಹಿ ರಾಷ್ಟ್ರಗಳು ಎಂಬ ಸ್ಥಿತಿ ಬದಲಾಗಿ: ಬಂಡವಾಳಶಾಹಿಯ ಮತ್ತು ಸಮಾಜವಾದದ ಎರಡು ಜಗತ್ತುಗಳು ಅಸ್ತಿತ್ವಕ್ಕೆ ಬಂದವು. ಬಂಡವಾಳಶಾಹಿ ಜಗತ್ತಿನಲ್ಲಿಯೇ, ಉನ್ನತದಲ್ಲಿರುವ ಅಮೆರಿಕಾದ ಮುಖ್ಯಕ್ಕೆ ಸೋವಿಯತ್ ಒಕ್ಕೂಟ ಏರಿತು.

ಈ ಹಿನ್ನೆಲೆಯಲ್ಲಿ: ಸೋವಿಯತ್ ಒಕ್ಕೂಟ ಜಾರಿ ಮಾಡಿದ್ದುದೇ ಸಮಾಜವಾದವೆಂದೂ, ಇತರೆಡೆಗಳಲ್ಲಿಯೂ ಸಮಾಜವಾದವನ್ನು ಕಟ್ಟಿ ಬೆಳೆಸಲು ಸೋವಿಯತ್ ಒಕ್ಕೂಟದ ಮಾರ್ಗದಲ್ಲಿ ಏನು ಮಾಡಿದ್ದರೋ ಅದರ ಪುನರಾವರ್ತನೆಯಾಗಬೇಕು ಎಂಬ ಒಂದು ಅಭಿಪ್ರಾಯ

(ಪುಟ ೬ಕ್ಕೆ)

ರಾಷ್ಟ್ರೀಯ ರಂಗ ಸರ್ಕಾರದ ನೂರುದಿನಗಳು

ಪ್ರಜಾಪ್ರಭುತ್ವ ಶಕ್ತಿಗಳಲ್ಲಿ ನಿರೀಕ್ಷೆ ಮೂಡಿಸಿದ್ದರೂ...

ಚುನಾವಣಾ ಸಮಯದಲ್ಲಿ ನೀಡಿದ ಭರವಸೆಗಳನ್ನು ಎಷ್ಟು ಈಡೇರಿಸಲಾಗುತ್ತದೆ ಎಂಬ ಆಧಾರದ ಮೇಲೆ ಒಂದು ಸರಕಾರದ ಬಗ್ಗೆ ತೀರ್ಮಾನಕ್ಕೆ ಬರಬೇಕು. ಜನ ತಮ್ಮನ್ನು ಅನುಸರಿಸುವಂತೆ ಚುನಾವಣಾ ಸಮಯದಲ್ಲಿ ಬೂರ್ಜ್ವಾ ಪಕ್ಷಗಳು ಎಲ್ಲಾ ತರದ ಭರವಸೆ ನೀಡುತ್ತವೆ. ಚುನಾವಣೆ ಮುಗಿದ ಕೂಡಲೇ ಮರೆತು ಬಿಡುತ್ತವೆ. ಇದು ಇತ್ತೀಚಿನವರೆಗೆ ಎಲ್ಲಾ ಚುನಾವಣೆಗಳ ಅನುಭವ.

ಆದರೆ ಸದ್ಯದ ಸರ್ಕಾರ, ಅದೊಂದು ಅಲ್ಪಮತದ ಸರ್ಕಾರವಾಗಿದ್ದರೂ ತನ್ನ ಚುನಾವಣಾ ಭರವಸೆಗಳನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಎಂಬ ಸೂಚನೆಯನ್ನು ತನ್ನ ಮೊದಲ ನೂರುದಿನಗಳ ಆಡಳಿತದಲ್ಲಿ ನೀಡಿದೆ. ಉದಾಹರಣೆಗೆ ಕೇಂದ್ರ ರಾಜ್ಯ ಸಂಬಂಧಗಳನ್ನು ಪುನರ್ರಚಿಸುವಲ್ಲಿ ಅಂತರ ರಾಜ್ಯ ಮಂಡಳಿ ಸ್ಥಾಪಿಸಲು ಅದು ನಿರ್ಧರಿಸಿದೆ. ಸಂವಿಧಾನದಲ್ಲೇ ಇದಕ್ಕೆ ಅವಕಾಶವಿದ್ದರೂ ಇದುವರೆಗೆ ಅದನ್ನು ಜ್ಯಾರಿಗೊಳಿಸಲಾಗಿಲ್ಲ ಎಂಬುದು ಗಮನಾರ್ಹ. ಈ ಮಂಡಳಿಯ ಸಭೆಯನ್ನೂ ಈಗ ಕರೆಯಲಾಗಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಲು ಕೆಲವು ಕ್ರಮಗಳನ್ನು ರಾಷ್ಟ್ರೀಯ ರಂಗ ಸರಕಾರ ಈಗಾಗಲೇ ಕೈಗೊಂಡಿದೆ. ಚುನಾವಣಾ ಸುಧಾರಣೆಗಳ ಕುರಿತು ಒಂದು ಸಮಿತಿ ರಚನೆಗೊಂಡಿದೆ. 'ಲೋಕಪಾಲ' ಸಂಸ್ಥೆಯ ರಚನೆಗೆ ಒಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಪ್ರಧಾನ ಮಂತ್ರಿಗಳು ಇದರ ವ್ಯಾಪ್ತಿಗೆ ಬರುವಂತೆ ಮಾಡಲಾಗಿದೆ. ಹೈಕೋರ್ಟ್, ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇಮಕಕ್ಕೆ ಒಂದು ಉಚ್ಚ ಮಟ್ಟದ ನ್ಯಾಯಾಂಗ ಸಮಿತಿಯ ರಚನೆಗೆ ಸೂಕ್ತವಾದ ಶಾಸನ ರೂಪಿಸಲು ಸರ್ಕಾರ ನಿರ್ಧರಿಸಿದೆ. ಅಂಚೆ ಕಚೇರಿ ತಿದ್ದುಪಡಿ ಮಸೂದೆ ನಾಗರಿಕರ ಖಾಸಗಿ ಹಕ್ಕಿನಲ್ಲಿ ಅತಿಕ್ರಮಣ ಮಾಡುತ್ತದೆಂದು ಹೇಳಿ ಅದರ ಮರು ಪರಿಶೀಲನೆ ನಡೆಸುವುದಾಗಿ ಹೇಳಿದೆ. ಪ್ರಸಾರ ಮಾಧ್ಯಮಗಳನ್ನು ಕುರಿತಂತೆ 'ಪ್ರಸಾರ ಭಾರತಿ' ಮಸೂದೆಯನ್ನು ಮಂಡಿಸಿದೆ. ಮಾಹಿತಿ ಹಕ್ಕುಗಳ ಗ್ಯಾರಂಟಿ ನೀಡಲು ಅಧಿಕೃತ ಗುಪ್ತ ಮಾಹಿತಿ ಶಾಸನದ ಸೂಕ್ತ ತಿದ್ದುಪಡಿ ಮಾಡುವ ಉದ್ದೇಶ ವ್ಯಕ್ತಪಡಿಸಿದೆ. ಈಗಾಗಲೇ ೫೯ನೇ ಸಂವಿಧಾನ ತಿದ್ದುಪಡಿಯನ್ನು ರದ್ದುಪಡಿಸಲಾಗಿದೆ.

ಕಾರ್ಮಿಕ, ರೈತರ, ಕೃಷಿ ಕೂಲಿಗಾರರ, ವಿದ್ಯಾರ್ಥಿಗಳ, ಯುವಜನರ, ಮಹಿಳೆಯರ ಸಾಮೂಹಿಕ ಸಂಘಟನೆಗಳನ್ನು ಈ ಜನ ಸಮೂಹಗಳ ತುರ್ತು ಸಮಸ್ಯೆಗಳ ಬಗ್ಗೆ ಸರ್ವ ಸಮ್ಮತಿ ರೂಪಿಸುವಲ್ಲಿ ಸರಕಾರ ಮುಂದಿಡಿಯಿಟ್ಟಿದೆ. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕಾಗಿ ಮಾಡಲು ಒಂದು ಸಂವಿಧಾನ ತಿದ್ದುಪಡಿ ಮಸೂದೆ ಮಂಡಿಸುವ ನಿರ್ಧಾರ ಮಾಡಿರುವುದಾಗಿ ರಾಷ್ಟ್ರಪತಿ ಭಾಷಣ, ದೇಶದ ನಾಗರಿಕರಿಗೆ ಮತ್ತೊಮ್ಮೆ ಭರವಸೆ ನೀಡಿದೆ. ಹರಿಜನ-ಗಿರಿ ಜನರು ಅನುಭವಿಸುತ್ತಲೇ ಇರುವ ಅತ್ಯಾಚಾರಗಳ ತಡೆಗೆ ಶಾಸನವನ್ನು ಜನವರಿ ೩೦ ರಿಂದಲೇ ಜ್ಯಾರಿ ಮಾಡಲಾಗಿದೆ.

ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯಲ್ಲೂ ರಾಷ್ಟ್ರೀಯ ರಂಗ ಸರ್ಕಾರದ ಸರ್ವಸಮ್ಮತಿ ರೂಪಿಸುವ ಪ್ರಯತ್ನಗಳನ್ನು ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಈ ಸಮಸ್ಯೆಗಳನ್ನು ಪಕ್ಷದ ಸ್ವಾರ್ಥಕ್ಕೆ ಬಳಸುವ ಪ್ರವೃತ್ತಿಗೆ ತಡೆ ಬಂದಿದೆ. ಆದರೆ ಹಳೆಯ ಅಭ್ಯಾಸ ಪೂರ್ಣವಾಗಿ ಹೋದಂತಿಲ್ಲ.

ಕೃಷಿ ರಂಗದಲ್ಲೂ ಕೃಷಿ ಸಂಬಂಧೀ ಬಾಬ್ತುಗಳಿಗೆ ೫೦% ವಿನಿಯೋಗಿಸುವುದಾಗಿ, ಕೃಷಿ ಉತ್ಪನ್ನಗಳಿಗೆ ಫಲಕಾರಿ ಬೆಲೆ ನೀಡುವುದಾಗಿ, ಸಣ್ಣ, ಅತಿ ಸಣ್ಣ ರೈತರ, ಕಸುಬುದಾರರ ೧೦ ಸಾವಿರ ರೂ. ವರೆಗಿನ ಸಾಲವನ್ನು ಮನ್ನಾ ಮಾಡುವುದಾಗಿ ಸರ್ಕಾರ ಘೋಷಿಸಿದೆ. ಅದೇ ರೀತಿ ಹರಿಜನ-ಗಿರಿಜನರಿಗೆ ಸಾಲ ಸೌಲಭ್ಯ,

ಚುನಾವಣಾ ಭರವಸೆಗಳು ಅಧಿಕಾರಕ್ಕೆ ಬಂದ ಕೂಡಲೇ ಮರೆತು ಬಿಡಬೇಕಾದ ಭರವಸೆಗಳು. ಇದು ಭಾರತೀಯ ಜನತೆಯ ಇದುವರೆಗಿನ ಅನುಭವ. 'ಸಮಾಜವಾದಿ ಮಾದರಿ ಸಮಾಜ; 'ಗರೀಬಿ ಹಠಾವೋ' ಈ ಅನುಭವದ ಕೆಲವು ಮುತ್ತುಗಳು. ರಾಷ್ಟ್ರೀಯ ರಂಗ ಸರ್ಕಾರ ಅದೇ ಜಾಡಿನಲ್ಲಿಯೇ ಸಾಗಿದೆಯೇ? ಅದರ ಮೊದಲ ನೂರು ದಿನಗಳು ಈ ಬಗ್ಗೆ ಆತಂಕ ಮೂಡಿಸುವಂತಿಲ್ಲ. ಬದಲಿಗೆ ಚುನಾವಣಾ ಭರವಸೆಗಳನ್ನು ಈಡೇರಿಸುವ ಸೂಚನೆಗಳನ್ನು ನೀಡಿದೆ ಅದೊಂದು ಅಲ್ಪ ಮತದ ಸರ್ಕಾರವಾದರೂ. ಇದು ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಮಾಧಾನ ತಂದಿರುವ ಅಂಶಗಳು. ಆದರೂ ಒಂದು ಮಾತು ಸ್ಪಷ್ಟ. ಸರಕಾರದ ಉದ್ದೇಶವೇನೇ ಇರಲಿ. ಸಾಮೂಹಿಕ ಆಂದೋಲನಗಳನ್ನು ಬೆಳೆಸದೆ ಅದು ತನ್ನ ವಚನಗಳನ್ನು ಪಾಲಿಸುವಂತೆ ಮಾಡುವ ಬೇರೆ ಮಾರ್ಗವಿಲ್ಲ. ಈ ಬಗ್ಗೆ ಎಚ್ಚರ ಅಗತ್ಯ.

ಉಗ್ರಾಣ, ಗೋಡಾನ್‌ಗಳ ಒಂದು ಜಾಲ ವ್ಯವಸ್ಥೆಯ ಬೃಹತ್ ಯೋಜನೆ, ಕೃಷಿಕೂಲಿಕಾರರಿಗೆ ನ್ಯಾಯಪೂರ್ಣ ಕನಿಷ್ಠ ಕೂಲಿ, ಒಂಬತ್ತನೇ ಶೆಡ್ಯೂಲಿನಲ್ಲಿ ಭೂಸುಧಾರಣೆ ಸೇರಿಸುವ ಮಾತುಗಳನ್ನು ಹೇಳಿದೆ.

ರಾಷ್ಟ್ರೀಯ ರಂಗ ಸರಕಾರದ ಪರವಾಗಿ ಬಜೆಟ್ ಅಧಿವೇಶನದ ಆರಂಭದಲ್ಲಿ ರಾಷ್ಟ್ರಪತಿಗಳು ಮಾಡಿದ ಭಾಷಣ, ಸರ್ಕಾರ ತನ್ನ ಚುನಾವಣಾ ಭರವಸೆಗಳನ್ನು ಜ್ಯಾರಿ ಮಾಡುವ ಬಗ್ಗೆ ಇನ್ನೂ ಕೆಲವು ಭರವಸೆಗಳನ್ನು, ಕ್ರಮಗಳನ್ನು ಹೇಳಿದೆ. ಆದರೆ ಇನ್ನೂ ಕೆಲವು ಭರವಸೆಗಳ ಬಗ್ಗೆ ಮೌನ ಅಥವಾ ಸಂತೃಪ್ತ ಭಾವನೆ ತಾಳಿರುವುದೂ ಕಂಡು ಬಂದಿದೆ.

ಉದಾಹರಣೆಗೆ "ಉಳುವವನನ್ನೇ ಹೊಲದೊಡೆಯನಾಗಿ ಮಾಡಲು ಭೂಮಿಯ ನೀರು ಮತ್ತಿತರ ನೈಸರ್ಗಿಕ ಸಂಪನ್ಮೂಲಗಳ ಸೂಕ್ತ ವಿತರಣೆ ಮಾಡುವಂತಾಗಲು ಸದ್ಯದ ಕಾನೂನುಗಳನ್ನು ಪರಿಷ್ಕರಿಸಲಾಗುವುದು" ಎಂದು ಮೊದಲ ಅಧಿವೇಶನದ ರಾಷ್ಟ್ರಪತಿ ಭಾಷಣದಲ್ಲಿ ಹೇಳಿದ್ದರೆ ಈ ಬಾರಿ ಭೂಸುಧಾರಣೆಗಳನ್ನು ಒಂಬತ್ತನೇ ಶೆಡ್ಯೂಲಿನಲ್ಲಿ ಸೇರಿಸುವ ಪ್ರಸ್ತಾಪ ಬಿಟ್ಟು ಬೇರೇನೂ ಕಾಣುತ್ತಿಲ್ಲ. ಮುಂಗಾರು ಬೆಳೆಗಳಿಗೂ ಬೆಲೆ ಪರಿಷ್ಕರಣೆಯ ಪ್ರಸ್ತಾಪವಿಲ್ಲ. ನೀರಾವರಿ ಸಾಮರ್ಥ್ಯದ ಬಳಕೆಯ ಮೇಲೆ ಸಾಕಷ್ಟು ಒತ್ತು ಇಲ್ಲ. ಎಲ್ಲಕ್ಕೂ ಮಿಗಿಲಾಗಿ ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿ ಹಾಗೂ ಮಾನವೀಯ, ಜೀವನ ಸ್ಥಿತಿ ನಿರ್ಮಿಸುವ ಕೇಂದ್ರೀಯ ಶಾಸನ ಬೇಕೆಂಬ ಮಹತ್ವದ ಬೇಡಿಕೆಯ ಬಗ್ಗೆ ಕೂಡಾ ಪ್ರಸ್ತಾಪವಿಲ್ಲ.

ಕೈಗಾರಿಕಾ ವಿವಾದ ಕಾನೂನಿನಲ್ಲಿ ತಿದ್ದುಪಡಿ ತರಲು ಹಿಂದಿನ ಕಾಂಗ್ರೆಸ್ ಸರಕಾರ ಮಂಡಿಸಿದ ತಿದ್ದುಪಡಿ ಮಸೂದೆಯ ಬದಲಿಗೆ ಎಲ್ಲಾ ಕಾರ್ಮಿಕ ಸಂಘಗಳೊಡನೆ ಸಮಾಲೋಚಿಸಿ ಕಾರ್ಯಾಚರಣೆಯ ಒಂದು ಹೊಸ ಕಾರ್ಮಿಕ ಶಾಸನ ತರುವ ಬಗ್ಗೆಯೂ ರಾಷ್ಟ್ರಪತಿ ಭಾಷಣದಲ್ಲಿ ಈ ಬಾರಿ ಮಾತಿಲ್ಲ.

ಮಹಿಳೆಯರ ಘನತೆ, ಸಮಾನತೆ ಕಾಪಾಡಲು ಒಂದು ರಾಷ್ಟ್ರೀಯ ಆಯೋಗ ರಚಿಸುವ ಭರವಸೆಯನ್ನು ರಾಷ್ಟ್ರಪತಿ ಭಾಷಣ ಮತ್ತೆ ನೀಡಿದೆ. ೨೦೦೦ ಇಸ್ವಿಯೊಳಗೆ ಸಾರ್ವತ್ರಿಕ ಸಾಕ್ಷರತೆ ಮತ್ತು ಎಲ್ಲರಿಗೂ ಆರೋಗ್ಯದ ಭರವಸೆಯನ್ನೂ ನೀಡಿದೆ. ಎಂಟನೇ ಯೋಜನೆಯ ಒತ್ತು ಮುಖ್ಯವಾಗಿ ಉದ್ಯೋಗಾವಕಾಶ ಸೃಷ್ಟಿ, ಬಡತನ ನಿವಾರಣೆ ಹಾಗೂ ಗ್ರಾಮ ನಗರಗಳ ನಡುವಿನ ಅಸಮತೋಲ ಸರಿಪಡಿಸುವಿಕೆಯ ಮೇಲೆ ಎಂದು ಸರ್ಕಾರ ಹೇಳಿರುವುದಾದರೂ ಅದು ಎಷ್ಟು ಮಟ್ಟಿಗೆ ಜ್ಯಾರಿಯಾಗುತ್ತದೆ ಎಂದು ಕಾದು ನೋಡಬೇಕಾಗಿದೆ. ವಿಶೇಷವಾಗಿ ಮೇಲೆ ಹೇಳಿದ ಕೆಲವು ವಿಷಯಗಳ ಬಗ್ಗೆ, ಈಗಿನ ಮೌನದ ಹಿನ್ನೆಲೆಯಲ್ಲಿ.

ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯಲ್ಲೂ ಸರ್ವಸಮ್ಮತಿ ರೂಪಿಸುವ ಸ್ವಾಗತಾರ್ಹ ಪ್ರಯತ್ನ ನಡೆದಿದ್ದರೂ ಒಂದು ರೀತಿಯ ಸಂತೃಪ್ತ ಭಾವನೆ ರಾಷ್ಟ್ರಪತಿ ಭಾಷಣದಲ್ಲಿ ಕಂಡು ಬಂದಿದೆ. ಕಾಶ್ಮೀರದಲ್ಲಿ ಸಾಮಾನ್ಯ ಸ್ಥಿತಿ ನಿರ್ಮಿಸಲು ಅಲ್ಲಿನ ಆಡಳಿತ ಅಂದರೆ ರಾಜ್ಯಪಾಲರ ಆಳ್ವಿಕೆ ಉತ್ತಮ ಕ್ರಮ ಕೈಗೊಂಡಿದೆ ಎಂದು ಅಭಿನಂದಿಸಲಾಗಿದೆ. ಹಾಗಿದ್ದರೆ ಆರು ಪಕ್ಷಗಳ ಸಲಹಾ ಸಮಿತಿಯ ನೆರವಿರುವ ಒಬ್ಬ ಹೊಸ ಕಾಶ್ಮೀರ ವ್ಯವಹಾರಗಳ ಮಂತ್ರಿಯ ನೇಮಕದ ಅಗತ್ಯವೇಕೆ ಬಂತು? ಈ ಅಭಿನಂದನೆ ರಾಷ್ಟ್ರೀಯ ಐಕ್ಯತೆಯನ್ನೂ ಬೆಂಬಲಿಸುವ ಎಲ್ಲಾ ರಾಜಕೀಯ ಶಕ್ತಿಗಳನ್ನು ಭಯೋತ್ಪಾದನೆ, ಪ್ರತ್ಯೇಕತಾವಾದದ ವಿರುದ್ಧ ಆಣಿನೆರಿಸುವ ಸರಕಾರದ ಪ್ರಯತ್ನಗಳನ್ನೇ ನಿಷ್ಪ್ರಯೋಜಕವಾಗಿ ಕಂಡಂತಲ್ಲವೇ?

ಪಂಜಾಬಿನ ಬಗ್ಗೆಯೂ ಬಹಳಷ್ಟು ಕ್ರಮಗಳನ್ನು ಕೈಗೊಂಡಿದ್ದರೂ ರಾಷ್ಟ್ರಪತಿ ಭಾಷಣದಲ್ಲಿ ಒಂದು ರೀತಿಯ ಸಂತೃಪ್ತ ಭಾವನೆ ವ್ಯಕ್ತಗೊಂಡಿದೆ. ಸರಕಾರ ಜನತೆಯಲ್ಲಿ ಈ ಬಗ್ಗೆ ವಿಶ್ವಾಸ ಮೂಡಿಸಲು ಮೊದಲಿಗೆ ಕೈಗೊಂಡ ಕ್ರಮಗಳನ್ನು ಅನುಸರಿಸಿ ಸರಿಯಾದ ಕಾರ್ಯಕ್ರಮ ರೂಪಿಸಲಿಲ್ಲ. ಆದ್ದರಿಂದ ಈ ರಾಜಕೀಯ ಪ್ರಯತ್ನಗಳು ಅರ್ಥ ಕಳೆದುಕೊಳ್ಳುತ್ತಿದೆ.

ಕೋಮು ಪರಿಸ್ಥಿತಿ ಕೂಡಾ "ಕಣ್ಣಿಗೆ ಕಾಣುವ ರೀತಿಯಲ್ಲಿ ಸುಧಾರಿಸುತ್ತಿದೆ" ಎಂಬ ಹೇಳಿಕೆ ಸಂತೃಪ್ತ ಭಾವನೆಯನ್ನು ಸೂಚಿಸುತ್ತದಷ್ಟೆ. ಏಕೆಂದರೆ ಶಿವಸೇನೆ, ಜಮಾತ್-ಎ-ಇಸ್ಲಾಮಿಯ ಶಕ್ತಿಯಲ್ಲಿ ಹೆಚ್ಚಳ, ಕೆಲವು ಪ್ರದೇಶಗಳಲ್ಲಿ ಬಿ.ಜೆ.ಪಿ.ಗೆ ದೊರೆತ ದೊಡ್ಡ ಬೆಂಬಲ ಜನರ ಆಕ್ರೋಶವನ್ನು ಕೋಮುವಾದಿ ದಾರಿಯತ್ತ ತಿರುಗಿಸುವ ಪ್ರಯತ್ನಗಳ ಸೂಚಕ. ದಿಲ್ಲಿ, ಮೀರತ್, ಭಾಗಲ್ಪುರ ದಂಗೆಗಳ ಬಗ್ಗೆ ವಿಶೇಷ ನ್ಯಾಯಾಲಯ ರಚನೆಯ ಭರವಸೆಗಳು ಸ್ವಾಗತಾರ್ಹ. ನೂರೈವತ್ತು ಅಂಶಗಳ ಕಾರ್ಯಕ್ರಮದ, ಉರ್ದುವಿಗೆ ಪ್ರೋತ್ಸಾಹ ನೀಡುವ ಗುಜ್ರಾಲ್ ಸಮಿತಿಯ ಶಿಫಾರಸುಗಳು ಅನುಷ್ಠಾನದ ಭರವಸೆ ನೀಡಿರುವುದು ಅಲ್ಪಸಂಖ್ಯಾತರಲ್ಲಿ ವಿಶ್ವಾಸ ಮೂಡಿಸುತ್ತದೆ. ಆದರೆ ರಾಮಜನ್ಮ ಭೂಮಿ ಬಾಬ್ರಿ ಮಸೀದಿ ವಿವಾದ ಈಗಲೂ ನಿರ್ಣಾಯಕ ಪ್ರಶ್ನೆಯಾಗಿ ಉಳಿದಿದೆ. ಕೋಮುಶಕ್ತಿಗಳು ಹೆಚ್ಚುತ್ತಿರುವ ಚಟುವಟಿಕೆ ಕಾಶ್ಮೀರ ಸನ್ನಿವೇಶದ ಮೇಲೂ ಪ್ರಭಾವ ಬೀರುವುದು ಖಂಡಿತ. ಕೋಮುವಾದ ಹರಿತಂತೆ ಐಕ್ಯತೆಯ ಆಧಾರ ಎಂದು ಮತ್ತೊಮ್ಮೆ ಸ್ಪಷ್ಟಪಡಿಸುವ ಅಗತ್ಯವಿದೆ ಈಗ. ಮಹಾರಾಷ್ಟ್ರದ ಅಸೆಂಬ್ಲಿ ಚುನಾವಣೆಗಳಿಂದ ಈ ಬಗ್ಗೆ ಸರಿಯಾದ ಪಾಠ ಕಲಿಯಬೇಕಾಗಿದೆ.

ರಾಷ್ಟ್ರಪತಿ ಭಾಷಣದ ವಿದೇಶಾಂಗ ವಿಭಾಗ ಚೆನ್ನಾಗಿ ಮೂಡಿ ಬಂದಿದೆ. ಅಲಿಪ್ತ ನೀತಿಗೆ ನಮ್ಮ ಬದ್ಧತೆ, ಪ್ರಾಬಲ್ಯ, ಶೋಷಣೆ ಹಾಗೂ ಯುದ್ಧದಿಂದ ಮುಕ್ತವಾದ ಶಾಂತಿಯುತ ವಿಶ್ವದ ನಮ್ಮ ಆಕಾಂಕ್ಷೆಗಳೇ ನಮ್ಮ ವಿದೇಶಾಂಗ ನೀತಿಯ ಆಧಾರ ಎಂದು ಅದು ಸರಿಯಾಗಿಯೇ ಹೇಳಿದೆ. ಶಾಂತಿಗಾಗಿ, ಸಾಮ್ರಾಜ್ಯಶಾಹಿ ಹಾಗೂ ವರ್ಣದ್ವೇಷದ ವಿರುದ್ಧ, ರಾಷ್ಟ್ರೀಯ ವಿಮೋಚನಾ ಆಂದೋಲನಗಳ ಪರವಾದ ಹೋರಾಟಗಳಲ್ಲಿ, ಪ್ರಾದೇಶಿಕ ಸಂಘರ್ಷಗಳನ್ನು ಪ್ರತಿಯೊಂದು ದೇಶದ ಐಕ್ಯತೆ, ಸಮಗ್ರತೆಯ ಚೌಕಟ್ಟಿನಲ್ಲಿ ಪರಿಹರಿಸುವಲ್ಲಿ ನಮ್ಮ ದೇಶ ತನ್ನ ಪಾತ್ರವಹಿಸುವುದೆಂದೂ ಹೇಳಲಾಗಿದೆ. ಭಾರತ ಚೀನಾಗಳ ನಡುವೆ ರಾಜ... ವಿನಿಮಯ ... ಪುನಃಗೊಳಿಸಲಾ... ಎಂಬುದು ನಮ್ಮೆರಡು ದೇಶಗಳ ... ಹಾಗೂ ಪ್ರಾದೇಶಿಕ ಸನ್ನಿವೇಶದ ಸು... ಸಾಧಕವಾಗುತ್ತದೆ. ಆದರೆ ಅಮೆರಿಕಾದ... ಹೇಳುವಾಗ "ನಮ್ಮೆರಡು ಪ್ರಜ... ಗಳಿಗೂ ಸಮಾನವಾದ ಉದ್ದೇಶಗಳು" ... ಮಾತು ಅಸಮರ್ಥನೀಯ. ... ದೊಂದಿಗೆ ಅದರ ವರ್ತನೆ, ನಿಕ... ಚುನಾವಣೆಯಲ್ಲಿ ಅದು ಮೂಗ... ರೀತಿ ಇವನ್ನೆಲ್ಲಾ ನೋಡಿದರೆ ಅ... ಪ್ರಜಾಪ್ರಭುತ್ವದೊಂದಿಗೆ ನಮ್ಮ ಪ್ರಜ... ವನ್ನು ಹೋಲಿಸುವುದು ಸರಿಯಲ್ಲ.

ಪ್ರಸ್ತುತ ಸರಕಾರ ವ್ಯಕ್ತಿಯ ... ಮೇಲೆ ನಿಂತ, ಅಭಿವೃದ್ಧಿಯ ಫಲ... ಮುಖ್ಯವಾಗಿ ಬಡವರಲ್ಲಿ ಬಡವರಿಗೆ ... ಒಂದು ಬಲಿಷ್ಠ ಭಾರತದ ನಿ... ದುಡಿಯುತ್ತದೆ ಎಂದು ರಾಷ್ಟ್ರಪತಿ ... ಕೊನೆಯಲ್ಲಿ ಭರವಸೆನೀಡುತ್ತದೆ. ... ನಿರುದ್ಯೋಗ, ಶೋಷಣೆ ಅಂತ್ಯಗೊಳಿಸಿ ... ಬಲಿಷ್ಠವಾಗಬೇಕು ಎಂದು ಬಯ... ರೆಲ್ಲಾ ಇದನ್ನು ಖಂಡಿತಾ ಸ್ವಾಗ... ಭವಿಷ್ಯದಲ್ಲಿ ಈ ಸರಕಾರ ಮು... ಪ್ರಶ್ನೆಗಳನ್ನು ಹೇಗೆ ಎದುರಿಸುತ್ತದೆ ... ದರ ಮೇಲೆ ಜನ ತೀರ್ಮಾನಕ್ಕೆ ಬರುತ್ತಾ...

ಆದರೆ ಇದುವರೆಗಿನ ಮತ್ತು ರಾ... ರಂಗ ಸರಕಾರದ ನೂರು ದಿನಗಳ ... ಅನುಭವದ ಮೇರೆಗೆ ಒಂದು ಮ... ಸ್ಪಷ್ಟ. ಸರಕಾರದ ಉದ್ದೇಶವೇನೇ ... ಕಾರ್ಮಿಕರ, ರೈತರ, ಯು... ಮಹಿಳೆಯರ, ವಿದ್ಯಾರ್ಥಿಗಳ, ... ಸಾಮೂಹಿಕ ಆಂದೋಲನಗಳನ್ನು ... ಚುನಾವಣಾ ಭರವಸೆಗಳನ್ನು ... ಗ್ಯಾರಂಟಿ ಪಡೆಯುವುದು ಸಾ... ಆದ್ದರಿಂದ ದೇಶದ ಎಡ ಪ್ರಜಾ... ಶಕ್ತಿಗಳು ಎಚ್ಚರ ದಿಂದಿರಬೇಕು. ... ದಿಕ್ಕಿನಲ್ಲಿ ಸರಕಾರದ ಮೇಲೆ ಒತ್ತಡ ... ಸರ್ವಪ್ರಯತ್ನ ನಡೆಸಬೇಕು. ಪ್ರಜಾ... ಶಕ್ತಿಗಳ ಐಕ್ಯತೆಗೆ, ದೇಶದ ಐಕ್ಯತೆಗೆ ... ತರುವ ಕೋಮುವಾದ ಹೆಚ್ಚುತ್ತಿರುವ ... ಯದ ಬಗ್ಗೆಯೂ ಎಚ್ಚರ ದಿಂದಿರಬೇಕು.

(ಆಧಾರ: ಪೀಪಲ್ಸ್ ಡೆಮಾಕ್ರಸಿ' ಸಂಪಾ...

ರಾಷ್ಟ್ರಪತಿ ಭಾಷಣದಲ್ಲಿ ಚುನಾವಣಾ ವಚನಗಳನ್ನು ಪಾಲಿಸುವ ಇನ್ನು ಕೆಲವು ಕ್ರಮಗಳ ಬಗ್ಗೆ ಹೇಳಿದೆ. ಆದರೆ ಹೊಸ ಕಾರ್ಮಿಕ ಶಾಸನದ, ಕೃಷಿಕೂಲಿಕಾರರಿಗೆ ಕೇಂದ್ರೀಯ ಶಾಸನದ ಪ್ರಸ್ತಾಪವಿಲ್ಲ. ಕಾಶ್ಮೀರ, ಪಂಜಾಬ್, ಕೋಮು ಪ್ರಶ್ನೆಯ ಬಗ್ಗೆ ಸೂಕ್ತವಾದ ಸಂತೃಪ್ತ ಭಾವನೆ ಕಂಡು ಬರುತ್ತಿದೆ.



೧೦೦% ಸಾಕ್ಷರತೆಯ ಪ್ರತಿಜ್ಞೆ-ಎರ್ನಾಕುಲಂ

ಪುಟ 2ರಿಂದ

ಖಂಡಿಸಲಾಯಿತು. ಈ ಸಂಬಂಧದಲ್ಲಿ ಮಹಿಳಾ ಸಾಕ್ಷರತೆ ಬಗ್ಗೆ ಒತ್ತು ಕೊಡಬೇಕೆಂದು ನಿರ್ಧರಿಸ ಲಾಯಿತು.

ಔದ್ಯೋಗಿಕ ಆರೋಗ್ಯ ಸಮಸ್ಯೆ ಬಗ್ಗೆ ಐಎಲ್‌ಓ ನಿರ್ಧಾರಗಳ ಜಾರಿಗೆ ಒತ್ತಾಯ, ಟ್ರೇಡ್ ಯೂನಿಯನ್ ಮತ್ತು ಕಾರ್ಮಿಕರಲ್ಲಿ ಜಾಗೃತಿ, ಇಎಸ್‌ಐ ಡಾಕ್ಟರುಗಳಿಗೆ ಈ ಬಗ್ಗೆ ಮಾಹಿತಿ, ಈ ಬಗ್ಗೆ ಅಗತ್ಯ ಕಾನೂನು ಬಗ್ಗೆ ಅಧ್ಯಯನ ಮಾಡಲು ನಿರ್ಧರಿಸಲಾಯಿತು.

ಸ್ವಾವಲಂಬನೆ

ಸ್ವಾವಲಂಬನೆ ಎಂದರೇನು?

ಸಂಶೋಧನಾ ಸಂಸ್ಥೆಗಳ ಪಾತ್ರ, ಆವಿಷ್ಕಾರದ ಸರಪಣಿಯ ಜಾರಿ ಈ ಬಗ್ಗೆ ಚರ್ಚೆ

ನರ್ಮದಾ ಯೋಜನೆ ಕುರಿತು ನಿರ್ಣಯ

೧) ಎಲ್ಲಾ ಜನವಿಜ್ಞಾನ ಸಂಘಟನೆಗಳು ಒಪ್ಪುವ ಪುನರ್ವಸತಿ, ಅಸಮಾನ ವೆಚ್ಚ ಮತ್ತು ಪ್ರಯೋಜನ ಹಂಚಿಕೆ ಬಗ್ಗೆ ಮಾಹಿತಿ ಪುಸ್ತಕ ರೂಪದಲ್ಲಿ ಸಂಘಟಿತ ಪ್ರಚಾರ.

೨) ಬಹಳಷ್ಟು ಭಿನ್ನಾಭಿಪ್ರಾಯವಿರುವ ಪರಿಸರ ದುಷ್ಪರಿಣಾಮಗಳು, ಬದಲಿ ಯೋಜನೆ, ಯೋಜನೆಗಳು ವೆಚ್ಚ ಮತ್ತು ಪ್ರಯೋಜನದ ಪ್ರಮಾಣ ನಿರ್ಧಾರ ಇತ್ಯಾದಿಗಳ ಬಗ್ಗೆ ಹಿನ್ನೆಲೆ ಮಾಹಿತಿಯ ಸಂಗ್ರಹಣೆ.


ಕಲಿಯಣ್ಣಾ ಕಲಿ ಕ...

ತಿಳಿಯಣ್ಣ ತಿಳಿ ತಿ...

ನಡೆಯಿತು. ಸ್ವಾವಲಂಬನೆ... ತಡೆಗಳು, ಅದನ್ನು ... ಬೇಕಾದ ನೀತಿ, ಈ ... ಪ್ರಚಾರದ ಬಗ್ಗೆ ಚರ್ಚೆ ... ಅಲ್ಲದೆ ತಂತ್ರಜ್ಞಾನ ... ಮತ್ತು ಉತ್ಪಾದನೆಯ ... ಮಾದರಿಯನ್ನು ಪ್ರಯೋ... ಪಡೆಯಬೇಕೆಂಬ ಅಭಿ... ವಾಯಿತು. ಸಾಮೂಹಿಕ ... ಗಳಲ್ಲಿ ಸ್ವಾವಲಂಬನೆಯ ... ಮಾಹಿತಿ ಪಡೆಯುವ ... ಯೂ ಚರ್ಚೆ ನಡೆಯಿತು.

ನರ್ಮದಾ ಯೋಜನೆ... ಚರ್ಚೆ ನಡೆದು ಬರಿ ... ಮಾತ್ರ ಬರಲು ಸಾಧ್ಯವಾಯಿ...

೩ ನೇ ಕಾಂಗ್ರೆಸ್ ... ನಿರ್ಣಯಗಳು, ಕಾಯ... ಗಳನ್ನು ಬಾಕ್ಸ್‌ನಲ್ಲಿ ಕೊಡ...



ರೈಲ್ವೇ ಬಜೆಟ್ ಬಗ್ಗೆ ಪಿ.ಬಿ. ಟೀಕೆ

ಮಿಲಿಯಾಂತರ ಜನ ಸಾಮಾನ್ಯರ ತೊಂದರೆ ಹೆಚ್ಚಿಸುವ ಏರಿಕೆ

ಮಾರ್ಚ್ ೧೪ ರಂದು ಮಂಡಿಸಿದ ರೈಲ್ವೇ ಬಜೆಟ್‌ನಲ್ಲಿ ಸಾಗಾಣಿಕೆ ಹಾಗೂ ಪ್ರಯಾಣ ದರ ಏರಿಸಿರುವುದರ ಬಗ್ಗೆ ಸಿ.ಪಿ.ಐ(ಎಂ) ಪಾಲಿಟ್‌ಬ್ಯೂರೋ ತನ್ನ ಅಸಮಾಧಾನ ವ್ಯಕ್ತಪಡಿಸಿದೆ. ಕೆಲವು ಜೀವನಾವಶ್ಯಕ ಸಾಮಗ್ರಿಗಳಿಗೆ ವಿನಾಯ್ತಿ ನೀಡಿದರೂ ೧೦% ಏರಿಕೆ ಹಣದುಬ್ಬರಕ್ಕೆ ತುಪ್ಪ ಸುರಿಯುತ್ತದೆ ಎಂದು ಅದು ಅಭಿಪ್ರಾಯ ಪಟ್ಟಿದೆ. ಏರ್-ಕಂಡಿಶನ್ಡ್, ಹಾಗೂ ಇತರ ಮೇಲ್ತರಗತಿಯ ಪ್ರಯಾಣ ದರಗಳಲ್ಲಿ ೧೭% ಏರಿಕೆ ನ್ಯಾಯಪೂರ್ಣವಾದರೂ ಪ್ರತಿದಿನ ಕೆಲಸಕ್ಕೆ ಹೋಗಲು ರೈಲು ಬಳಸಬೇಕಾದ ಸಾಮಾನ್ಯ ಜನರ ಎರಡನೇ ತರಗತಿ ಪ್ರಯಾಣ ದರಗಳಲ್ಲಿ ಏರಿಕೆ ನ್ಯಾಯವಲ್ಲ ಎಂದು ಅದು ಹೇಳಿದೆ. ಇದರ ಜತೆಗೆ ಸ್ಲೀಪರ್ ಸರ್‌ಚಾರ್ಜ್, ಲಗೇಜ್ ದರಗಳಲ್ಲಿ ಏರಿಕೆ ಮಿಲಿಯಾಂತರ ಸಾಮಾನ್ಯ ಪ್ರಯಾಣಿಕರಿಗೆ ಬಹಳ ತೊಂದರೆ ಮಾಡುತ್ತದೆ.

ರೈಲ್ವೇ ಜಾಲದ ಅಭಿವೃದ್ಧಿಗೆ ರೈಲ್ವೇ ಮಂತ್ರಿಗಳು ಹಲವು ಪ್ರಸ್ತಾಪ ಮಾಡಿದ್ದಾರೆ. ಇವುಗಳ ಬಗ್ಗೆ ಚರ್ಚೆ ನಡೆಸಿ ಇವನ್ನು ಮತ್ತಷ್ಟು ಸುಧಾರಿಸಬೇಕು. ಆದರೆ ಈ ಅಭಿವೃದ್ಧಿ ಕೆಲಸಗಳಿಗೆ ಸಂಪನ್ಮೂಲ ಶೇಖರಣೆಗಾಗಿ ಈಗಾಗಲೇ ಕಷ್ಟದಲ್ಲಿರುವಜನ ಸಾಮಾನ್ಯರ ಮೇಲೆ ಇನ್ನಷ್ಟು ಕಷ್ಟ ತರುವ ರೀತಿಯ ವಿಧಾನಗಳನ್ನು ಅನುಸರಿಸುವುದು ತರವಲ್ಲ ಎಂದು ಪೊಲಿಟ್‌ಬ್ಯೂರೊ ಹೇಳಿದೆ.

ಎ.ಸಿ., ಪ್ರಥಮ ತರಗತಿ ರೈಲು ಕೋಚ್‌ಗಳ ಉತ್ಪಾದನೆ ನಿಲ್ಲಿಸುವ, ಇದರಿಂದ ಎರಡನೇ ತರಗತಿ ಹಾಗೂ ಇತರ ಸ್ಲೀಪರ್ ಕೋಚ್‌ಗಳಲ್ಲಿ ಹೆಚ್ಚಿನ ಪ್ರಯಾಣಾವಕಾಶ ಒದಗಿಸಬಹುದೆಂಬ ಪ್ರಸ್ತಾಪ ಸ್ವಾಗತಾರ್ಹ. ಆದರೆ ಇದೇ ಸಮಾನತೆಯ, ಬಡವರ ಪರವಾದ ಭಾವನೆ ರೈಲ್ವೇ ಮಂತ್ರಿಗಳು ತಿಳಿಯಪಡಿಸಿದ ಸಾಗಾಣಿಕೆ, ಪ್ರಯಾಣದರಗಳಲ್ಲಿ ಕಾರಣ ಸಿಗುತ್ತಿಲ್ಲ ಎಂದು ಖೇದ ವ್ಯಕ್ತ ಪಡಿಸಿರುವ ಪಿ.ಬಿ. ಜನತೆಯ ಸಂಕಷ್ಟಗಳನ್ನು ಪರಿಗಣಿಸಿ ಇವನ್ನು ಮರು ವಿಮರ್ಶಿಸಬೇಕೆಂದೂ, ಈ ಏರಿಕೆಗಳಿಂದ ಪರಿಹಾರ ನೀಡುವ ಪರಿಷ್ಕೃತ ಪ್ರಸ್ತಾಪ ನೀಡಬೇಕೆಂದು ಭಾರತ ಸರ್ಕಾರವನ್ನು ಕೇಳಿಕೊಂಡಿದೆ.

ಕೇಳಿಸಿ ಕೊಂಡದ್ದು

★ ನನಗೆ ಮುಂದಿನ ಜನ್ಮವೇನಾದರೂ ಇದ್ದರೆ ಅದನ್ನು ನಾನು ಜನ ವಿಜ್ಞಾನ ಚಳುವಳಿಗೆ ಮುಡಿಪಾಗಿಡುತ್ತೇನೆ.

– ಪ್ರೊ ಸಿ.ಎನ್.ಆರ್. ರಾವ್ ಉದ್ಘಾಟಿಸುತ್ತಾ (ಭಾರತೀಯ ವಿಜ್ಞಾನ ಮಂದಿರದ ನಿರ್ದೇಶಕರು)

★ ಅನಕ್ಷರತೆ ಹೋಗಲಾಡಿಸಲು ತೀವ್ರ ಸಾಮಾಜಿಕ ಬದಲಾವಣೆಗೆ ಕಾಯುವ ಅಗತ್ಯವಿಲ್ಲ. ಸಾಕ್ಷರತಾ ಆಂದೋಲನವೇ ಈ ಸಾಮಾಜಿಕ ಬದಲಾವಣೆಗೆ ಹೊಸ್ತಿಲಾಗಬಲ್ಲುದು"

– ಡಾ॥ ಸುಂದರರಾಮನ್, ಪಾಂಡಿಚೇರಿ ಸೈನ್ಸ್ ಫೋರಂ

★ ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಪೂರ್ಣ ಸಾಕ್ಷರತೆ ಅವಶ್ಯಕ ಷರತ್ತು. ಆದರೆ ಅದಷ್ಟೇ ಸಾಲದು .... ವಿವಿಧ ಅಧ್ಯಯನಗಳು ಕೇರಳದ ಹೆಚ್ಚಿನ ಸಾಕ್ಷರತೆ (ಅದರಲ್ಲೂ ಮಹಿಳೆಯರ ಹೆಚ್ಚಿನ ಸಾಕ್ಷರತೆಗೂ) ರಾಜ್ಯದ ಜೀವನ ಹೆಚ್ಚಿನ ಗುಣ ಮಟ್ಟಕ್ಕೂ ತೀರಾ ನಿಕಟ ಸಂಬಂಧ ಇದೆ ಎಂದು ತೋರಿಕೊಟ್ಟಿದೆ.... ಜ್ಞಾನಶಕ್ತಿ ವಿಜ್ಞಾನ ಮತ್ತು ತಂತ್ರಜ್ಞಾನ-ಆಧುನಿಕ ಉತ್ಪಾದನಾ ಶಕ್ತಿಗಳಲ್ಲಿ ಪ್ರಮುಖ ಭಾಗವಾಗಿದೆ. ಇಡೀ ಸಮಾಜದ ಜನತೆ ಈ ಶಕ್ತಿಯನ್ನು ಚಲಾಯಿಸಬೇಕು. ಇದನ್ನು ಕೆಲವೇ 'ನಾಯಕರು' ಮತ್ತು 'ವಿಶೇಷಜ್ಞ'ರಿಗೆ ಮಾತ್ರ ಬಿಡಲು ಸಾಧ್ಯವಿಲ್ಲ. ಇಂದಿನ ಕಾಲಘಟ್ಟದ ಉತ್ಪಾದನಾ ಶಕ್ತಿಗಳು ಸಶಕ್ತವಾಗಿದ, ಭಾಗವಹಿಸಲು ಸಾಧ್ಯವಾಗಿರುವ, ಕ್ರಿಯಾತ್ಮಕ ಪ್ರಜಾಪ್ರಭುತ್ವದ ಅವಶ್ಯಕತೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿದೆ....

ಇದು ಸಂಪೂರ್ಣ ಸಾಕ್ಷರತೆ ಮಾತ್ರ ಸಾಧ್ಯ..........

- ಡಾ॥ ಎಂ.ಪಿ. ಪರಮೇಶ್ವರನ್, ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್

★ ನಮ್ಮ ಶಕ್ತಿ ಉತ್ಪಾದನೆಗೆ ಮುಖ್ಯ ಘೋಷಣೆ "ಕಲ್ಲಿದ್ದಲು, ಕಲ್ಲಿದ್ದಲು, ಕಲ್ಲಿದ್ದಲು" ಆಗಬೇಕು......

ನಮ್ಮ ದೇಶದಲ್ಲಿ ಶಕ್ತಿ ಉತ್ಪಾದನೆ ನೀತಿಯ ಅತಾರ್ಕಿಕತೆಯ ಉದಾಹರಣೆಗಳು ಗಿನ್ನಿಸ್ ಪುಸ್ತಕದಲ್ಲಿ ಬಂದೀತು. ಸಿಂಧ್ರಿ ಗೊಬ್ಬರ ಕಾರ್ಖಾನೆ ಭಾರೀ ಕಲ್ಲಿದ್ದಲು ಗಣಿಯ ಮೇಲೆ ಕೂತಿದೆ. ಆದರೆ ಅದು ಉಪಯೋಗಿಸುವುದು ತೈಲವನ್ನು ಇಂಧನವಾಗಿ. ಇದೇ ರೀತಿ ಸಿಂಗರ್ ಭಾರೀ ಜಲವಿದ್ಯುತ್ ಭಾತ್ತಾಸಂಗಲ್ ಯೋಜನಾ ಸ್ಥಳದ ಬಳಿ ಇದೆ. ಅದೂ ತೈಲವನ್ನು ಇಂಧನವಾಗಿ ಉಪಯೋಗಿಸುತ್ತದೆ. ಇಂತಹ ಉದಾಹರಣೆಗಳು ಹಲವು.

- ಅಶೋಕರಾವ್, ಸಾರ್ವಜನಿಕ ವಲಯದ ಅಧಿಕಾರಿಗಳು ಸಂಘಗಳ ಫೆಡರೇಷನ್ ಅಧ್ಯಕ್ಷ

★ ಸಂದರ್ಶಕರು ಬಹುಗುಣರಿಗೆ ಭೂಕಂಪ ಶಾಸ್ತ್ರದ ಬಗ್ಗೆ ಹಷ್ಟಷ್ಟೆ ಗೊತ್ತಿರುವುದು ಆದರೆ ಅದಕ್ಕೆ ಉಪವಾಸ ಮಾಡುವುದು ಬರುತ್ತದೆ. ಅದು ನನ್ನ ಕೈಲಿ ಆಗಲ್ಲ....

- ತೆಹ್ರಿ ಜಲವಿದ್ಯುತ್ ಯೋಜನೆ ಬಗ್ಗೆ ಬಿ.ಬಿ.ಸಿ. ಚರ್ಚೆಯಲ್ಲಿ ಕೇಳಿ ಬಂದಿದ್ದು.

ನಮೀಬಿಯಾ ಈಗ ಸ್ವತಂತ್ರ ದೇಶ

ಮಾರ್ಚ್ ೨೧, ೧೯೯೦

ಸ್ವತಂತ್ರ ವಾತಾವರಣದಲ್ಲಿ ಉಸಿರಾಡುವ ನಮೀಬಿಯಾದ ೧೫ ಲಕ್ಷ ಜನಗಳ ಶತ ಮಾನದ ಕನಸು ನನಸಾಗಿದೆ. ನಮೀಬಿಯಾದ ಧೀರ ಹೋರಾಟಗಾರರ, ಶೋಷಣಾ ರಹಿತ ಸಮಾಜದ ಕನಸುಗಾರರ ಮುಂಚೂಣಿ ಸಂಘಟನೆ ಸ್ವಾಪೋದ ಮೂರು ದಶಕಗಳ ಹೋರಾಟ, ಎರಡು ದಶಕಗಳ ಸಶಸ್ತ್ರ ಹೋರಾಟದಿಂದ ನಮೀಬಿಯಾ ವಿಶ್ವದ ಸ್ವತಂತ್ರ ದೇಶಗಳ ಸಾಲಿಗೆ ಸೇರಿದೆ.

ಆಫ್ರಿಕಾ ಖಂಡದ ದಕ್ಷಿಣದ ಪಶ್ಚಿಮ ಭಾಗದಲ್ಲಿರುವ ಈ ದೇಶ, ಇತರ ಏಷ್ಯಾ, ಆಫ್ರಿಕಾ ದೇಶಗಳಂತೆ ಶತಮಾನಗಳ ಕಾಲ ತನ್ನ ಪಾಡಿಗೆ ತಾನು ಇದ್ದ ಈ ನಾಡು, ಕಳೆದ ಶತಮಾನದ ಅಂತ್ಯದಲ್ಲಿ ಜರ್ಮನ್ ವ್ಯಾಪಾರಿಗಳ ಪಾಲಾಯಿತು. ಈ ಎಲ್ಲಾ ದೇಶಗಳಲ್ಲಾದಂತೆ ಇಲ್ಲೂ ವ್ಯಾಪಾರಿಯ ತಕ್ಕಡಿ ರಾಜನ ಖಡ್ಗವಾಯಿತು. ಆಫ್ರಿಕಾದ ಬೇರೆ ಬೇರೆ ಜನಾಂಗಗಳು ಯುರೋಪಿನಲ್ಲಿ ವಿವಿಧ ಬಂಡವಾಳಶಾಹಿ ದೇಶಗಳ ವಸಾಹತುಗಳ, ಗುಲಾಮರಾದರು. ನಮೀಬಿಯಾ ದೂರದ ಜರ್ಮನಿಯವಸಾಹತುವಾಯಿತು. ಇದೊಂದು ವಜ್ರ, ಯುರೇನಿಯಂ ಕಲ್ಲಿದ್ದಲು, ತೈಲ, ಸತು, ತಾಮ್ರ ಮತ್ತಿತರ ಬೆಲೆ ಬಾಳುವ ಲೋಹಗಳ ಆಗರವೆಂದು ತಿಳಿದಾಗ ಜರ್ಮನ್ ವಸಾಹತುಶಾಹಿಗಳ ಸಂತೋಷಕ್ಕೆ ಪಾರವೇ ಇಲ್ಲ.

ಆದರೆ ಮೊದಲ ವಿಶ್ವಯುದ್ಧದಲ್ಲಿ ಜರ್ಮನಿ ಸೋತಾಗ ಅದರ ವಸಾಹತುಗಳು ಬೇರೆ ವಸಾಹತುಶಾಹಿ ಶಕ್ತಿಗಳ ಕೈಗೆ ಹೋಯಿತು. ನಮೀಬಿಯಾ ಬ್ರಿಟಿಷ್ ವಸಾಹತುವಾಯಿತು. ವಿಶ್ವಯುದ್ಧದ ಆರ್ಥಿಕ, ರಾಜಕೀಯ ಲಾಭ ಗಿಟ್ಟಿಸುವುದರಲ್ಲಿ ಮಗ್ನರಾಗಿದ್ದ ವಸಾಹತುಶಾಹಿಗಳಿಗೆ ನಮೀಬಿಯಾದ ಬಡಜನತೆಯ ಸ್ವಾತಂತ್ರ್ಯದ ಕೂಗು ಹೇಗೆ ಕೇಳಿಸಲು ಸಾಧ್ಯ?

ಅಂತರಾಷ್ಟ್ರೀಯ ಸಂಸ್ಥೆ ಆದರೆ ವಾಸ್ತವದಲ್ಲಿ ವಸಾಹತುಶಾಹಿಗಳ ಪ್ರಾಬಲ್ಯದಲ್ಲಿದ್ದ ಲೀಗ್ ಆಫ್ ನೇಶನ್ಸ್ ನಮೀಬಿಯಾದ ಆಳ್ವಿಕೆಯ ತಾತ್ಕಾಲಿಕ ಅಧಿಕಾರವನ್ನು ಆಗ ಬ್ರಿಟಿಷ್ ವಸಾಹತುವಾಗಿದ್ದ ದಕ್ಷಿಣ ಆಫ್ರಿಕಾಕ್ಕೆ ಒಪ್ಪಿಸಿತು. ಇದು ನಡೆದದ್ದು ೧೯೧೯ ರಲ್ಲಿ. ಎರಡನೇ ವಿಶ್ವ ಯುದ್ಧದಲ್ಲಿ ಫ್ಯಾಸಿಸ್ಟ್ ಜರ್ಮನಿಯಪತನವಾದಾಗಲೂ ನಮೀಬಿಯಾ ಜನತೆಯ ಅದೃಷ್ಟ ಬದಲಾಗಲಿಲ್ಲ. ಲೀಗ್ ಆಫ್ ನೇಶನ್ಸ್‌ನ ಉತ್ತರಾಧಿಕಾರಿಯಾಗಿ ಬಂದ ಈಗಿನ ವಿಶ್ವಸಂಸ್ಥೆ ೧೯೪೫ ರಲ್ಲಿ ಈ ದೇಶವನ್ನು ೨೦ ವರ್ಷಗಳ ಕಾಲ ದಕ್ಷಿಣ ಆಫ್ರಿಕಾದ 'ಟ್ರಸ್ಟೀಶಿಪ್ ಪ್ರದೇಶ' ಎಂದು ಘೋಷಿಸಿತು. ಯಾಕೆಂದರೆ ನಮೀಬಿಯಾದ ಕರಿಯರಿಗೆ "ಸ್ವಾತಂತ್ರ್ಯಕ್ಕೆ ಸಿದ್ಧಗೊಳ್ಳಲು" ಇಷ್ಟು ಸಮಯ ಬೇಕೆಂದು ದುರಭಿಮಾನಿ ಪಾಶ್ಚಿಮಾತ್ಯರ ಹಮ್ಮು. ಇದು ೧೯೬೫ ರಲ್ಲಿ ಕೊನೆಗೊಂಡು ೧೯೬೬ ರಲ್ಲಿ ನಮೀಬಿಯಾ ಸ್ವತಂತ್ರಗೊಳ್ಳಬೇಕಿತ್ತು. ಆದರೆ ಕೊನೆಗೊಳ್ಳಲಿಲ್ಲ. ೫೦ ವರ್ಷ ತನ್ನ ವರ್ಣ ದ್ವೇಷ ನೀತಿಯಿಂದ ನಮೀಬಿಯಾದ ಜನರ ಶ್ರಮದ ಅವರ ದೇಶದ ಸಂಪನ್ಮೂಲಗಳ ಕೊಳ್ಳೆ ಹೊಡೆದ ದಕ್ಷಿಣ ಆಫ್ರಿಕಾದ ಬಿಳಿಯರು ಅದನ್ನು ಸುಲಭವಾಗಿ ಬಿಟ್ಟುಕೊಡಲು ಸಿದ್ಧರಿರಲಿಲ್ಲ. ನಮೀಬಿಯಾದ ಗಣಿಗಳಲ್ಲಿ ಲಾಭ ಸೂರೆ ಮಾಡುತ್ತಿದ್ದ ಪಾಶ್ಚಿಮಾತ್ಯ ದೇಶಗಳ ಬಂಡವಾಳಶಾಹಿಗಳೂ ಇದಕ್ಕೆ ಪರೋಕ್ಷವಾಗಿ ಬೆಂಬಲ ನೀಡಿದರು.

೧೯೭೮ ರಲ್ಲಿ ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಇತಿಹಾಸ ಪ್ರಸಿದ್ಧ ನಿರ್ಣಯ ಸಂಖ್ಯೆ ೪೩೫ ನ್ನು ಅಂಗೀಕರಿಸಿ ನಮೀಬಿಯಾವನ್ನು ತೆರವು ಮಾಡಬೇಕೆಂದು ದಕ್ಷಿಣ ಆಫ್ರಿಕಾವನ್ನು ಒತ್ತಾಯಿಸಿತು. ೧೯೭೧ರಲ್ಲಿ ಅಂತರಾಷ್ಟ್ರೀಯ ನ್ಯಾಯಾಲಯ ಒಂದು ತೀರ್ಪು ನೀಡಿ ನಮೀಬಿಯಾದ ಮೇಲೆ ದಕ್ಷಿಣ ಆಫ್ರಿಕಾದ ಅಧಿಕಾರ ಕಾನೂನು ಬಾಹಿರ ಎಂದು ಘೋಷಿಸಿತು. ವಿಶ್ವದ ವಿಮೋಚನಾ ಪರ ಶಕ್ತಿಗಳೆಲ್ಲಾ ನಮೀಬಿಯಾದ ಬೆಂಬಲಕ್ಕೆ ನಿಂತರೂ ವಿಶ್ವ ಸಂಸ್ಥೆ ನಿರ್ಣಯದ ಮೇಲೆ ನಿರ್ಣಯ ಅಂಗೀಕರಿಸಿದರೂ ವಿಶ್ವ ಸಮುದಾಯದ ಒಕ್ಕೊರಲಿನ ಬೇಡಿಕೆಯನ್ನು ವರ್ಣದ್ವೇಷಿಗಳು ಉಪೇಕ್ಷಿಸುತ್ತಲೇ ಬಂದರು. ಇದರಲ್ಲಿ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಗಳ ಬೆಂಬಲದ ಪಾತ್ರವೇನು ಎಂದು ಪ್ರಶ್ನಿಸಬೇಕಾಗಿಲ್ಲ.

ನಮೀಬಿಯಾ ಜನತೆ ಶತಮಾನದ ಆರಂಭದಿಂದಲೇ ನಡೆದ ಹೋರಾಟದ ಅನುಭವದ ಮೊತ್ತವಾಗಿ ೧೯೬೦ ರಲ್ಲಿ ಸ್ವಾಪೋ ಸ್ಥಾಪನೆಗೊಂಡಿತು. ವಿಮೋಚನಾ ಹೋರಾಟಕ್ಕೆ ಹೊಸ ಆಯಾಮ ಬಂತು. ವರ್ಣದ್ವೇಷಿಗಳೊಂದಿಗೆ ವಾದ ಮಾಡಿ, ಮನವಿಗಳನ್ನು ಅರ್ಪಿಸಿ ಹೃದಯ ಪರಿವರ್ತನೆ ಮಾಡುವ ಘಟ್ಟ ಕೊನೆಗೊಂಡಿತು. ಯಾಕೆಂದರೆ ಇಂತಹ ಪ್ರತಿಯೊಂದು ಯತ್ನದಲ್ಲೂ ಬ್ರಿಟಿಷ್ ಮತ್ತು ದಕ್ಷಿಣ ಆಫ್ರಿಕಾದ ಬಿಳಿಯರು ತಮ್ಮ ದಮನವನ್ನು ಹೆಚ್ಚಿಸಿದ್ದರಷ್ಟೇ, ಬೇರೇನೂ ಫಲ ದೊರೆತಿರಲಿಲ್ಲ. ೧೯೬೬ ರಲ್ಲಿ ಸ್ವಾಪೋ ಸಶಸ್ತ್ರ ಹೋರಾಟ ಆರಂಭಿಸಿತು. ೭೦ ರ ದಶಕದಲ್ಲಿ ಈ ಹೋರಾಟ ಇನ್ನೂ ವ್ಯಾಪಕಗೊಂಡಿತು. ರಾಜಧಾನಿ ವಿಂಡ್‌ಹೋಕ್ ಹಾಗೂ ಇತರ ಗಣಿ ಪ್ರದೇಶಗಳಲ್ಲಿ ಮುಷ್ಕರಗಳು, ಪ್ರತಿಭಟನೆಗಳು ಹೆಚ್ಚಲಾರಂಭಿಸಿದವು. ೧೯೬೧ ರಲ್ಲಿ ನಮೀಬಿಯಾ ಜನತಾ ವಿಮೋಚನಾ ಸೇನೆ ಸ್ಥಾಪನೆ ಗೊಂಡಿತು. ಆರಂಭದಲ್ಲಿ ಸರಿಯಾದ ಬಟ್ಟೆ ಬರೆಯಿಲ್ಲದ ತಿನ್ನಲು ಕೂಳಿಲ್ಲದ, ಸರಿಯಾದ ಶಸ್ತ್ರಗಳಿಲ್ಲದ ಬಡ ಯುವಕ ಈ ಸೇನೆ ಒಂದು ಲಕ್ಷ ಧೀರ ವಿಮೋಚನಾ ಹೋರಾಟಗಾರರ ಸಂಘಟನೆಯಾಗಿ ಬೆಳೆದದ್ದೇ ಒಂದು ಪ್ರತ್ಯೇಕ ರೋಮಾಂಚನಕಾರಿ ಕಥೆ.

೧೯೭೫ ರಲ್ಲಿ ಅಂಗೋಲಾ ಪೋರ್ಚುಗೀಸ್ ರಿಂದ ವಿಮೋಚನೆಗೊಂಡಾಗ ಸ್ವಾಪೋಗೆ ತನ್ನ ಉತ್ತರ ಗಡಿಯಲ್ಲಿ ಒಬ್ಬ ವಿಶ್ವಾಸಾರ್ಹ ಗೆಳೆಯ ಸಿಕ್ಕಂತಾಯಿತು. ಸ್ವಾಪೋದ ವಿಮೋಚನಾ ಹೋರಾಟ ತೀವ್ರಗೊಂಡಿತು. ವಿಮೋಚನಾ ಹೋರಾಟವನ್ನು ಮುರಿಯಲು ದಮನದ ಜೊತೆಗೆ ದಕ್ಷಿಣ ಆಫ್ರಿಕಾದಲ್ಲಿ ಕರಿಯರಲ್ಲಿ ಒಡಕು ತರುವ 'ಬಂಟುಸ್ತಾನ್' ಯೋಜನೆಯನ್ನು ನಮೀಬಿಯಾದಲ್ಲೂ ವರ್ಣದ್ವೇಷಿಗಳು ಪ್ರಯತ್ನಿಸಿದರು. ಕೈಗೊಂಬೆಗಳನ್ನು ಸೃಷ್ಟಿಸಿಕೊಂಡರು. ಆದರೆ ಯಾವುದರಿಂದಲೂ ತಮ್ಮ ಆಳ್ವಿಕೆಯನ್ನು ಶಾಶ್ವತಗೊಳಿಸುವುದು ಅವರಿಗೆ ಸಾಧ್ಯವಾಗಲಿಲ್ಲ. ಈ ನಡುವೆ ಅಂಗೋಲಾದ ಕ್ರಾಂತಿ-ವಿರೋಧಿ ಸಂಘಟನೆ ಯುನಿಟಾಕ್ಕೆ ಬೆಂಬಲ ನೀಡಿ ಅಂಗೋಲಾದ ಕ್ರಾಂತಿಕಾರಿ ಸರ್ಕಾರವನ್ನು ಉರುಳಿಸಲು, ಆ ಮೂಲಕ ಸ್ವಾಪೋ ಹೋರಾಟಗಳನ್ನು ದಮನ ಮಾಡುವ ವರ್ಣದ್ವೇಷಿಗಳು ಪ್ರಯತ್ನಿಸಿದರು. ಅಂಗೋಲಾದ ದಕ್ಷಿಣ ಗಡಿಯಲ್ಲಿ ದಕ್ಷಿಣ ಆಫ್ರಿಕಾ ಸೇನೆಯ ಕಿರುಕುಳ, ಹಿಂಸಾಚಾರ, ಆಕ್ರಮಣ ಆರಂಭವಾಯಿತು. ಅಂಗೋಲಾದ ಕ್ರಾಂತಿಕಾರಿಸರ್ಕಾರ ಕ್ಯೂಬಾದ ನೆರವು ಕೇಳಿತು. ಕ್ಯೂಬಾದ ಕ್ರಾಂತಿಕಾರಿಗಳು ಇದು ತಮ್ಮ ಅಂತರಾಷ್ಟ್ರೀಯ ಕರ್ತವ್ಯವೆಂದು ಅಂಗೋಲಾದ ನೆರವಿಗೆ ಧಾವಿಸಿದರು. ಕ್ಯೂಬಾದ ಸಂಗಾತಿಗಳ ನೆರವಿನೊಂದಿಗೆ ಅಂಗೋಲಾದ ಜನತಾ ಸೇನೆ ಅತ್ಯಾಧುನಿಕ ಶಸ್ತ್ರಗಳಿಂದ ಸಜ್ಜಿತವಾಗಿದ್ದ ದಕ್ಷಿಣ ಆಫ್ರಿಕಾದ ಬಿಳಿಯ ಸೇನೆಗೆ ತಕ್ಕ ಪಾಠ ಕಲಿಸಿತು. ಸಶಸ್ತ್ರಗಳಿಂದ, ಸಾಮ್ರಾಜ್ಯಶಾಹಿಗಳ ಪರೋಕ್ಷ ಬೆಂಬಲದಿಂದ ಸ್ವಾಪೋ ವಿಮೋಚನಾ ಹೋರಾಟಗಾರರನ್ನು ವಿಶ್ವ ಜನಾಭಿಪ್ರಾಯವನ್ನು ಎದುರಿಸುವುದು ವರ್ಣದ್ವೇಷಿಗಳಿಗೆ ಹೆಚ್ಚೆಚ್ಚು ಕಷ್ಟವಾಗಲಾರಂಭಿಸಿತು. ಪಾಶ್ಚಿಮಾತ್ಯ ದೇಶಗಳು ವಿಶ್ವ ಜನಾಭಿಪ್ರಾಯಕ್ಕೆ ಮುಖ್ಯವಾಗಿ ಅಲಿಪ್ತ ಆಂದೋಲನ, ಆಫ್ರಿಕಾ ಸಂಘಟನೆ ಮುಂತಾದವುಗಳ ಮೂಲಕ ನವವಿಮೋಚಿತ ದೇಶಗಳ ಒತ್ತಾಯಕ್ಕೆ ತಲೆಬಾಗಿ ದಕ್ಷಿಣ ಆಫ್ರಿಕಾದ ವಿರುದ್ಧ ಆರ್ಥಿಕ ದಿಗ್ಬಂಧನ ಹಾಕಬೇಕಾಯಿತು.

ಈ ಹಿನ್ನೆಲೆಯಲ್ಲಿ, ಕ್ಯೂಬಾ ಹಾಗೂ ಅಂಗೋಲಾ ಮಾತುಕತೆಯ ಆಹ್ವಾನ ನೀಡಿದವು. ಮನಸ್ಸಿಲ್ಲದ ಮನಸ್ಸಿನಿಂದ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳು ಮಾತುಕತೆಗೆ ಬಂದರು. ಸೋವಿಯತ್ ಒಕ್ಕೂಟ ಹಾಗೂ ಅಮೆರಿಕಾ ವೀಕ್ಷಕರಾಗಿ ಮಧ್ಯಸ್ಥಿಕೆದಾರರಾಗಿ ಪಾಲುಗೊಂಡರು. ವರ್ಣದ್ವೇಷಿಗಳು ಹಲವು ಬಾರಿ ಈ ಮಾತುಕತೆಗಳಲ್ಲಿ ಅಡ್ಡಿ ಉಂಟು ಮಾಡಿದರೂ ಅಮೆರಿಕಾ ಕೂಡಾ ಹಲವು ಬಾರಿ ಪಕ್ಷಪಾತದಿಂದ ವರ್ತಿಸಿದರೂ ಕೊನೆಗೂ ೧೯೮೮ ರ ಅಂತ್ಯದಲ್ಲಿ ಒಂದು ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಬಿತ್ತು. ಕ್ಯೂಬಾ, ಅಂಗೋಲಾ ಮತ್ತು ದಕ್ಷಿಣ ಆಫ್ರಿಕಾದ ನಡುವೆ. ಕ್ಯೂಬಾದ ಸೈನಿಕರು ಏಪ್ರಿಲ್ ೧ ರಿಂದ ೨೭ ತಿಂಗಳಲ್ಲಿ ಅಂಗೋಲಾದಿಂದ ವಾಪಸು ಹೋಗುತ್ತಾರೆ. ನಮೀಬಿಯಾದಿಂದ ದಕ್ಷಿಣ ಆಫ್ರಿಕಾ ಸೇನೆ ವಾಪಸು ಹೋಗುತ್ತದೆ. ನಮೀಬಿಯಾ ಸ್ವಾತಂತ್ರ್ಯದ ಬಗ್ಗೆ ವಿಶ್ವ ಸಂಸ್ಥೆಯ ನಿರ್ಣಯ ಸಂಖ್ಯೆ ೪೩೫ ರ ಅನುಷ್ಠಾನ ಏಪ್ರಿಲ್ ೧, ೧೯೮೯ ರಿಂದ ಆರಂಭವಾಗುತ್ತದೆ ಎಂದು ಒಪ್ಪಲಾಯಿತು.

ಈ ಅಂತರಾಷ್ಟ್ರೀಯ ಒಪ್ಪಂದದ ನಂತರವೂ ದಕ್ಷಿಣ ಆಫ್ರಿಕಾ ಹೇಗಾದರೂ ನಮೀಬಿಯಾದ ಮೇಲೆ ತನ್ನ ಹಿಡಿತ ಯನ್ನು ಪರೋಕ್ಷವಾಗಿ ಮುಂದುವರಿಸಲು ಪ್ರಯತ್ನಿಸಿತು. ತನ್ನ ಕೈಗೊಂಬೆಗಳ ಡೆಮಾಕ್ರಾಟಿಕ್ ಟರ್ನ್‌ಹೆಲ್ ಅಲಯನ್ಸ್ (ಡಿ.ಟಿ.ಎ.) ಎಂಬ ಕೂಟವನ್ನು ಎತ್ತಿಕಟ್ಟಲುಪ್ರಯತ್ನಿಸಿತು. ನವಂಬರ್‌ನಲ್ಲಿ ನಡೆಯಬೇಕಾಗಿದ್ದ ಚುನಾವಣೆಗಳಲ್ಲಿ ಸ್ವಾಪೋದ ವಿರುದ್ಧ ಅಪಪ್ರಚಾರದ ವಾತಾವರಣ ಸೃಷ್ಟಿಸಲು ಪ್ರಯತ್ನಿಸಿತು.

ಏಪ್ರಿಲ್ ೧, ೧೯೮೯ ರ ಅಮಾನುಷ ಘಟನೆ ವಿಶ್ವದೆದುರು ವರ್ಣದ್ವೇಷಿಗಳ ಕರಾಳತೆಯನ್ನು ಮತ್ತೊಮ್ಮೆ ತೆರೆದಿಟ್ಟಿತು. ಅಂದು ಒಪ್ಪಂದದ ಪ್ರಕಾರ ವಿಶ್ವಸಂಸ್ಥೆಯ ಸಂಕ್ರಮಣ ನೆರವು ಪಡೆ (ಯುಎನ್‌ಟಿಎಜಿ)ಗಳಿಗೆ ಶರಣಾಗಲು ಜಾಂಬಿಯಾದ ದಕ್ಷಿಣ ಗಡಿಯಿಂದ ಸ್ವಾಪೋ ಗೆರಿಲ್ಲಾಗಳು ತಮ್ಮ ತಾಯ್ನಾಡನ್ನು ಪ್ರವೇಶಿಸಿದಾಗ ದಕ್ಷಿಣ ಆಫ್ರಿಕಾದ ಪಡೆಗಳು ಅತ್ಯಂತ ಸಮೀಪದಿಂದ ಅವರ ಮೇಲೆ ಗುಂಡುಹಾರಿಸಿದವು. ೬೦ ಗೆರಿಲ್ಲಾಗಳನ್ನು ಕೊಂದವು. ಆತ್ಮರಕ್ಷಣೆಗೆ ಸ್ವಾಪೋ ಹೋರಾಟಗಾರರು ವರ್ಣದ್ವೇಷಿ ಪಡೆಗಳಿಗೆ ಪ್ರತ್ಯುತ್ತರ ನೀಡಬೇಕಾಯಿತು. ಇದರಲ್ಲಿ ಒಟ್ಟು ೩೦೦ ಜನರು ಸಾವಿಗೀಡಾದರು. ಪ್ರಿಟೋರಿಯಾದ ವರ್ಣದ್ವೇಷಿಗಳು ಇದಕ್ಕಾಗಿ ಸ್ವಾಪೋವನ್ನು ದೂಷಿಸುತ್ತಾ ಒಪ್ಪಂದದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಇದು ವರ್ಣದ್ವೇಷಿಗಳ ದುರುದ್ದೇಶ ಪೂರಿತ ಪ್ರಯತ್ನವಾಗಿತ್ತೆಂದು ವಿಶ್ವಕ್ಕೆಲ್ಲಾ ಬೇಗನೇ ತಿಳಿಯಿತು. ನಮೀಬಿಯಾದ ಸ್ವಾತಂತ್ರ್ಯದ ಪ್ರಕ್ರಿಯೆಯನ್ನು ತನ್ನ ಪರವಾಗಿ ತಿರುಗಿಸಿ ಕೊಳ್ಳುವ ಅದರ ಪ್ರಯತ್ನ ವಿಫಲಗೊಂಡಿತು.

ನವಂಬರ್ ೭-೧೧ ರವರೆಗೆ ನಡೆದ ಶಾಂತಿಯುತ ಚುನಾವಣೆಗಳಲ್ಲಿ ಸ್ವಾಪೋ ೭೨ ರಲ್ಲಿ ೪೧ ಸ್ಥಾನಗಳನ್ನು ಗಳಿಸಿ ದಕ್ಷಿಣ ಆಫ್ರಿಕಾದ ವರ್ಣದ್ವೇಷಿಗಳ ಆಟಗಳನ್ನೆಲ್ಲಾ ಕೊನೆಗೊಳಿಸಿತು. ಸಾಮ್ ನುಜೋಮಾ ಸೇರಿದಂತೆ ಸ್ವಾಪೋ ಹೋರಾಟಗಾರರು ದೀರ್ಘಕಾಲದ ಗಡೀಪಾರಿನ ನಂತರ ವಿಜಯೋತ್ಸಾಹದಿಂದ ತಾಯ್ನಾಡಿಗೆ ಮರಳಿದರು.

ಆದರೆ ಹೋರಾಟ ಇನ್ನೂ ಮುಗಿದಿಲ್ಲ. ಮಾರ್ಚ್ ೨೧ ರಂದು ಸಾಮ್ ನುಜೋಮಾ ಸ್ವತಂತ್ರ ನಮೀಬಿಯಾದ ಪ್ರಥಮ ಅಧ್ಯಕ್ಷರಾಗಿ ಪ್ರತಿಜ್ಞೆ ಸ್ವೀಕರಿಸುವಾಗ ದೇಶದ ಏಕಮಾತ್ರ ಬಂದರು ವಲ್ವಿಸ್ ಇನ್ನೂ ದಕ್ಷಿಣ ಆಫ್ರಿಕಾದ ಹತೋಟಿಯಲ್ಲಿದೆ. ಒಂದೆಡೆ ಅಮೆರಿಕಾ, ಬ್ರಿಟನ್, ಜರ್ಮನ್,ಜಪಾನ್ ಬಹುರಾಷ್ಟ್ರೀಯ ಕಂಪೆನಿಗಳು ಈ ನವೋದಿತ ದೇಶದೊಂದಿಗೆ ಆರ್ಥಿಕ ಆಮಿಷಗಳ ಬಲೆಬೀಸ ಹಾಕಿದ್ದಾರೆ. ಇನ್ನೊಂದೆಡೆ ಐ.ಎಂ.ಎಫ್., ವಿಶ್ವ ಬ್ಯಾಂಕ್‌ಗಳ ಮಾಯಕ್ಕೆ ಆರ್ಥಿಕತೆಯ ತನ್ನ ಹುಕ್ಕುದಿಗ್ಬಂಧ ಬಳಸಿ ಎಂದು ಒತ್ತಡ ಹೇರುತ್ತಿದೆ.

ಈ ಅಗಾಧ ಕ್ಲಿಷ್ಟ ವಾತಾವರಣದಲ್ಲಿ ಸ್ವತಂತ್ರ ನಮೀಬಿಯಾ ಹುಟ್ಟಿ ಬರುತ್ತಿದೆ. ನಮೀಬಿಯನ್ನರ ದೀರ್ಘಕಾಲದ ಹೋರಾಟದ ಗುರಿತ್ತಿದೆ. ಸಾವಿರಾರು ತಾಯಂದಿರ, ಅಕ್ಕಂದಿರ ತಂಗಿಯರು ಹುತಾತ್ಮರ ರಕ್ತದ ಸಾಗರ ದಾಟಿ ಬಂದು ಸ್ವತಂತ್ರವಾಗುತ್ತಿದೆ. ಸ್ವಾಪೋ ಹೋರಾಟಗಳಲ್ಲಿ ಜತೆಗೊಂಡ ತನ್ನ ಜನ ಬಲವನ್ನು ಹಾದಿ ಬರೆಯುವ ಅಗಾಧ ವಿಶ್ವಾಸದಲ್ಲಿ ಈ ದೇಶ ಕೊನೆಗೂ ಗೆದ್ದೇ ಗೆಲ್ಲುತ್ತದೆ. ಇದು ವಿಶ್ವದ ಪ್ರಜಾಪ್ರಭುತ್ವ ಶಕ್ತಿಗಳ ದೃಢ ವಿಶ್ವಾಸ.

ಇಂಡಿಯನ್ ಪ್ಲಾಯವುಡ್ ಕಾರ್ಮಿಕರ ಅನಿರ್ದಿಷ್ಟ ಮುಷ್ಕರ

ಕರ್ನಾಟಕ ರಾಜ್ಯದಲ್ಲಿ ದಾಂಡೇಲಿ, ಧಾರವಾಡ ಹಂಗಾರಕಟ್ಟೆ,ನ್ಯಾನಾ ಕಾರ್ಖಾನೆಗಳ ಕಾರ್ಮಿಕ ನೌಕರರ ಸಂಘಗಳ ಜಂಟಿ ಕ್ರಿಯಾ ಸಮಿತಿ ಹಾಗೂ ಇಂಡಿಯನ್ ಪ್ಲಾಯವುಡ್ ಆಡಳಿತ ವರ್ಗದ ಜೊತೆ ಅವರ ಬೇಡಿಕೆಗಳ ಬಗ್ಗೆ ಚರ್ಚೆ ವಿಫಲವಾಗಿದ್ದು ನಾಲ್ಕು ಕಾರ್ಖಾನೆಗಳ ಸುಮಾರು ೩೦೦೦ ಕಾರ್ಮಿಕ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ತಾ: ೧೨.೩.೯೦ ರಿಂದ ತಮ್ಮ 'ಅನಿರ್ದಿಷ್ಟ ಅವಧಿ'ಯ ಮುಷ್ಕರ ಆರಂಭಿಸಿದ್ದಾರೆ.

ಜಂಟಿ ಕ್ರಿಯಾ ಸಮಿತಿ ಹಾಗೂ ಆಡಳಿತ ವರ್ಗದ ಮಧ್ಯೆ ಹಿಂದೆ ತಾ: ೧.೭.೮೬ ಕ್ಕೆ ಒಪ್ಪಂದವಾಗಿದ್ದು ಈ ಒಪ್ಪಂದವು ೩೦.೬.೮೯ ಕ್ಕೆ ಕೊನೆಗೊಂಡಿದ್ದು ಹೊಸ ಬೇಡಿಕೆ ಪಟ್ಟಿಯನ್ನು ಆಡಳಿತ ವರ್ಗಕ್ಕೆ ಕೊಡಲಾಗಿದೆ. ಕಂಪನಿಯ ಆಡಳಿತ ವರ್ಗವು ಕುಂಟು ನೆಪಗಳನ್ನು ಹೇಳುತ್ತ ಸದರೀ ಬೇಡಿಕೆಗಳ ಮೇಲೆ ಚರ್ಚೆಗೆ ಬರಲಿಲ್ಲ. ೬-೭. ತಿಂಗಳು ಕಾದು ಬೇಸತ್ತ ಕಾರ್ಮಿಕರು ಅನಿವಾರ್ಯವಾಗಿ ೧.೨.೯೦ ಕ್ಕೆ ನೋಟೀಸ್ ಕೊಟ್ಟು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅನಿರ್ದಿಷ್ಟ ಮುಷ್ಕರದ ಮೇಲೆಹೋಗುವ ಮುನ್ನೂಚನೆಯನ್ನು ಕೊಟ್ಟಿದ್ದರು.

ಈ ನೋಟೀಸಿನ ಹಿನ್ನೆಲೆಯಲ್ಲಿ ಆಡಳಿತ ವರ್ಗ ಮಾರ್ಚ್ ೧ ರಂದು ಹುಬ್ಬಳ್ಳಿಯಲ್ಲಿ ಹಾಗೂ ಮಾರ್ಚ್ ೭, ೮ ರಂದು ಬೆಂಗಳೂರಿನಲ್ಲಿ ಚರ್ಚೆ ನಡೆಸಿದರು. ಈ ಚರ್ಚೆಯಲ್ಲಿ ಜಂಟಿ ಕ್ರಿಯಾ ಸಮಿತಿಯು "ಕೇವಲ ಒಪ್ಪಂದದ ಉದ್ದೇಶಕ್ಕಾಗಿ" ಕೆಲವು ಬೇಡಿಕೆಗಳನ್ನು ಕೈ ಬಿಡಲು ಮುಂದಾದರೂ ಒಪ್ಪಂದವಾಗದೆ ಚರ್ಚೆ ವಿಫಲವಾಯಿತು.

– ಸಂಚಾಲಕರು

ಚಾಲಕರ, ಸಾರ್ವಜನಿಕರ ಹಿತಾಸಕ್ತಿಗೆ ಆಟೋ ಸಂಘ ಬದ್ಧ

ಶಿವಮೊಗ್ಗ ತಾಲೂಕು ಆಟೋ ಚಾಲಕರ ಸಂಘ ಮಾರ್ಚ್ ೧೧ ರಂದು ಸಭೆ ಸೇರಿ ಆಟೋ ಚಾಲಕರ ಮತ್ತು ಜತೆಗೇ ಸಾರ್ವಜನಿಕರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು ಕೆಲವು ನಿರ್ಣಯಗಳನ್ನು ಕೈಗೊಂಡಿತು. ಚಾಲಕರಿಗೆ, ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುವ ಈಗಿನ ಬಾಡಿಗೆ ಪದ್ಧತಿ ಬದಲಿಸಿ ಏರಿಯಾ ಬಾಡಿಗೆ ನಿಗದಿಗೊಳಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದ ಈ ಸಭೆ ಆಟೋ ಚಾಲಕರಿಂದ ಸಾರ್ವಜನಿಕರಿಗೆ, ಅಥವಾ ಸಾರ್ವಜನಿಕರಿಂದ ಆಟೋ ಚಾಲಕರಿಗೆ ತೊಂದರೆಯುಂಟಾದಲ್ಲಿ ಸಂಘಕ್ಕೆ ತಿಳಿಸಿದರೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಹೇಳಿದೆ. ಎಲ್ಲಾ ಆಟೋ ಚಾಲಕರೂ ತಪ್ಪದೇ ಸಮವಸ್ತ್ರ ಧರಿಸಬೇಕೆಂದೂ ಈ ಸಭೆ ನಿರ್ಧರಿಸಿತು.

ಈ ಸಂಘದ ನೇತೃತ್ವದಲ್ಲಿ ಮಾರ್ಚ್ ೧೪ ರಂದು ಆಟೋ ಚಾಲಕರಿಗೆ ಇನ್ನೊಂದು ಸೌಲಭ್ಯ ಕಲ್ಪಿಸಲೂ ಸಾಧ್ಯವಾಗಿದೆ. ಇಂಡಿಯನ್ ಆಯಿಲ್ ಕಂಪೆನಿಯವರು ಸಹ್ಯಾದ್ರಿ ಪೆಟ್ರೋಲ್ ಬಂಕ್‌ನಲ್ಲಿ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಆಟೋಗಳಿಗಾಗಿ ಒಂದು ಪೆಟ್ರೋಲ್ ಪಂಪನ್ನು ಅಳವಡಿಸಿದ್ದಾರೆ. ಸಂಘದ ಅಧ್ಯಕ್ಷ ಅಣ್ಣಯ್ಯನವರು ಇದರ ಉದ್ಘಾಟನೆ ನಡೆಸಿದರು. ಇದರ ಸದುಪಯೋಗ ಪಡೆಯಬೇಕೆಂದು ಸಂಘದ ಸಹ ಕಾರ್ಯದರ್ಶಿ ಜಂಶೀದ್ ಆಟೋ ಚಾಲಕರಿಗೆ ಮನವಿ ಮಾಡಿಕೊಂಡಿದ್ದಾರೆ.

ಧಾರವಾಡದಲ್ಲಿ ಮಂಡೇಲಾ ಬಿಡುಗಡೆ ಸ್ವಾಗತ ಸಮಾರಂಭ

ಫೆಬ್ರವರಿ ೨೧ ರಂದು ಧಾರವಾಡದಲ್ಲಿ 'ಸಮುದಾಯ'ದ ಸ್ಥಳೀಯಘಟಕ ಮತ್ತಿತರ ಸಾಂಸ್ಕೃತಿಕ, ಸಾಮೂಹಿಕ ಸಂಘಟನೆಗಳು ದಕ್ಷಿಣ ಆಫ್ರಿಕಾದ ಮಹಾನ್ ಹೋರಾಟಗಾರ ನೆಲ್ಸನ್ ಮಂಡೇಲಾರವರ ಬಿಡುಗಡೆಯ ಸ್ವಾಗತ ಸಮಾರಂಭ ನಡೆಸಿದವು.

ಅಂದು ಸಂಜೆ ಸಾಂಸ್ಕೃತಿಕ ಕಾರ್ಯಕರ್ತರು ಯುವಜನರು, ವಿದ್ಯಾರ್ಥಿಗಳು, ವಕೀಲರು, ಡಾಕ್ಟರುಗಳು, ಶಿಕ್ಷಕರು, ಪತ್ರಕರ್ತರು ನಗರದ ಮುಖ್ಯ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ, ಹಾಡುಗಳನ್ನು ಹಾಡುತ್ತಾ ಆಕರ್ಷಕ ಮೆರವಣಿಗೆ ನಡೆಸಿದರು.

ನಂತರ ವಿದ್ಯಾವರ್ಧಕ ಸಂಘದಲ್ಲಿ ನಡೆದ ಸಭೆಯಲ್ಲಿ ಮಾತ ನಾಡುತ್ತಾ ಪ್ರೊ ಚಂದ್ರಶೇಖರ್ ಪಾಟೀಲ್ ೨೦ ನೇ ಶತಮಾನ ಶೋಷಕ ಮತ್ತು ಶೋಷಿತ ವರ್ಗಗಳ ನಡುವಿನ ಸಂಘರ್ಷದ ಶತಮಾನವೆಂದು ವರ್ಣಿಸಿ ಮಂಡೇಲಾರ ಬಿಡುಗಡೆ ಈ ಶತಮಾನದ ಉತ್ತರಾರ್ಧ ಮಹತ್ವದ ಜಾಗತಿಕ ವಿದ್ಯಮಾನ ಎಂದರು. 'ಸಮುದಾಯ' ಹುಬ್ಬಳ್ಳಿ ಧಾರವಾಡ ಘಟಕದ ಪ್ರೊ.ಎಸ್.ಆರ್. ತೋಂಟದಾರರು ೨೭ ವರ್ಷಗಳ ದೀರ್ಘಕಾಲ ಜೈಲು ವಾಸ ಅನುಭವಿಸಿದ ಮಂಡೇಲಾರ ಧೀಶಕ್ತಿಯನ್ನು ಕೊಂಡಾಡಿದರು. ಬಿಳಿಯರ ಹಲವಾರು ಶರತ್ತು, ಬೆದರಿಕೆ, ಹಿಂಸೆ, ಕಿರುಕುಳಗಳಿಗೆ ಮಣಿಯದೆ ಎ.ಎನ್.ಸಿ. ಮತ್ತು ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಮೇಲೆ ನಿರ್ಬಂಧ ತೆಗೆದ ಮೇಲೇನೇ ಜೈಲಿನಿಂದ ಹೊರಬರಲು ಬಿಟ್ಟಿದ್ದನ್ನು ಸ್ಮರಿಸಿದರು.

ಡಾ. ಮುರಿಗೆಪ್ಪ, ಪ್ರೊ.ಶಿವಾನಂದ ಶೆಟ್ಟರ್, ವಿಮಾ ನೌಕರರ ಸಂಘದ ಎಂ.ಕೆ.ದೇಶಪಾಂಡೆ, ಇಪ್ಟಾದ ಸಿದ್ಧನಗೌಡ ಪಾಟೀಲ,ಎಸ್.ಎಫ್.ಐ. ಪರವಾಗಿ ಬಸವರಾಜ ಭಜಂತ್ರಿ, ಬಂಡಾಯ ಸಂಘಟನೆಯಿಂದ ಜಗದೀಶ ಮಂಗಳೂರಮಠ ಮತ್ತಿತರು ಸಭೆಯಲ್ಲಿ ಮಾತನಾಡಿದರು.

ಸಮುದಾಯ ಘಟಕದ ಅಧ್ಯಕ್ಷರಾದ ಸಿ.ಆರ್.ಭಟ್ ಮಂಡೇಲಾರ ಬಿಡುಗಡೆಯನ್ನು ಸ್ವಾಗತಿಸುವ, ದಕ್ಷಿಣ ಆಫ್ರಿಕಾ ಜನರ ಹೋರಾಟವನ್ನು ಬೆಂಬಲಿಸುವ ಠರಾವನ್ನು ಮಂಡಿಸಿದರು. ಡಾ.ವಿ.ಎನ್. ದೇಶಪಾಂಡೆ ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದ ಪ್ರಾರಂಭದಲ್ಲಿ 'ಸಮುದಾಯದ ಕಾರ್ಯದರ್ಶಿ ರವಿ ಪಾಟೀಲರು ಧನ್ಯವಾದವಿತ್ತರು.

(ಪುಟ ೩ ರಿಂದ)

ರಾಮದುರ್ಗದಲ್ಲಿ ವಿಜಯೋತ್ಸವ

ಆಫ್ರಿಕಾದ ಹೋರಾಟಗಾರ ನೆಲ್ಸನ್ ಮಂಡೇಲಾ ಜಗತ್ತಿನ ಶೋಷಿತರ ಸೂರ್ಯವಾಗಿದ್ದಾನೆ. ಭಾರತದಲ್ಲಿ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ಹತ್ತಿರವಾಗುತ್ತಾನೆ ಎಂದು ಖ್ಯಾತ ಸಾಹಿತಿ ಚಂದ್ರಶೇಖರ ಪಾಟೀಲರು ಇಂದಿಲ್ಲಿ ಹೇಳಿದರು.

ದಿನಾಂಕ: ೮.೩.೯೦ ರಂದು ರಾಮದುರ್ಗ ತಾಲೂಕಿನ ಎಸ್.ಎಫ್.ಐ. ಸಂಘಟನೆ ವ್ಯವಸ್ಥೆ ಮಾಡಿದ "ನೆಲ್ಸನ್ ಮಂಡೇಲಾಬಿಡುಗಡೆಯ ವಿಜಯೋತ್ಸವ ದಿನಾಚರಣೆ"ಗೆ ಚಂದ್ರಶೇಖರ ಪಾಟೀಲ ಮುಖ್ಯ ಅತಿಥಿಯಾಗಿದ್ದರು.

ಇದೇ ಸಮಾರಂಭಕ್ಕೆ ಇನ್ನೊಬ್ಬ ಮುಖ್ಯ ಅತಿಥಿಗಳಾಗಿ ಮಾತನಾಡಿದ ಕರ್ನಾಟಕ ವಿಶ್ವ ವಿದ್ಯಾನಿಲಯದ ಪ್ರೊ ತೋಂಟದಾರ್ಯ ಅವರು "ನೆಲ್ಸನ್ ಮಂಡೇಲಾ ವಿಜಯೋತ್ಸವ ಆಚರಿಸುವ ಜೊತೆಗೆ ಮುಂದಿನ ಆಫ್ರಿಕಾ ಜನರ ಹೋರಾಟಕ್ಕೆ ನಮ್ಮ ನೈತಿಕ ಬೆಂಬಲ ವ್ಯಕ್ತಪಡಿಸಬೇಕು" ಎಂದು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಎ.ಕೆ. ನವಲಗುಂದ ವಹಿಸಿದ್ದರು.

ಮಂಡಲ ಪಂಚಾಯ್ತಿ ನೌಕರರ ಸಭೆ ಮಡಕೇರಿ ತಾಲ್ಲೂಕು.

ದಿನಾಂಕ ೧೮-೨-೯೦ ರಂದು ಮಡಕೇರಿ ತಾಲ್ಲೂಕು ಮಂಡಲ ಪಂಚಾಯ್ತಿ ನೌಕರರ ಸರ್ವ ಸದಸ್ಯರ ಸಭೆಯ ನೌಕರರ ಸಂಘದ ಜಿಲ್ಲಾ ಸಂಚಾಲಕ ಐ.ಆರ್. ಪ್ರಮೋದ್ ರವರ ಅಧ್ಯಕತೆಯಲ್ಲಿ ನಡೆಯಿತು.

ಸಭೆಯಲ್ಲಿ ನೂತನ ತಾಲ್ಲೂಕು ಸಮಿತಿಯ ಅಧ್ಯಕ್ಷಿಣಿಯಾಗಿ ಶ್ರೀಮತಿ ಬಿ.ಬಿ. ದೇವಕಿ, ಉಪಾಧ್ಯಕ್ಷರಾಗಿ ಟಿ.ಪಿ. ಭೀಮಯ್ಯ, ಕಾರ್ಯದರ್ಶಿಯಾಗಿ ಕೆ.ಪಿ. ಗಣಪತಿ, ಜಂಟಿ ಕಾರ್ಯದರ್ಶಿಯಾಗಿ ಕೆ.ಯು. ಆನಂದ, ಖಜಾಂಚಿಯಾಗಿ, ಎಸ್.ಎಂ. ಸೋಮಪ್ಪ ಈ ಐದು ಜನ ಪದಾಧಿಕಾರಿಗಳನ್ನೊಳಗೊಂಡ ೯ ಜನರ ತಾಲ್ಲೂಕು ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಭೆಯ ನೌಕರರ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಚರ್ಚಿಸಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿತು.

★ ಬಾಗಮಂಡಲ ಪಂಚಾಯ್ತಿ ನೌಕರ ಎಂ.ರಂಗನವರು ತಮ್ಮ ಸೇವಾ ಅವಧಿಯಲ್ಲಿ ಮೃತಪಟ್ಟಿದ್ದು ಅವರಿಗೆ ಸರ್ಕಾರ ಯಾವುದೇ ಪರಿಹಾರ ಕೊಡದೆ ಇರುವುದರ ಕುರಿತು ಸರ್ಕಾರವನ್ನು ಒತ್ತಾಯಿಸಿ.

★ ೧೯೮೭ ರಲ್ಲಿ ಕೊಡಗು ಜಿಲ್ಲಾ ಪರಿಷತ್ ೨ನೇ ವಿಭಾಗದ ನೌಕರರ ನೇಮಕಕ್ಕೆ ಆಯ್ಕೆ ಮಾಡಿದ ಜಿಲ್ಲೆಯ ೯ ಜನರನ್ನು ಇನ್ನೂ ನೇಮಕ ಮಾಡದಿರುವುದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು.

★ ಭಾಗಮಂಡಲ ಪಂಚಾಯ್ತಿ ಬಿಲ್‌ಕಲೆಕ್ಟರ್‌ರನ್ನು ಅಮಾನತ್ತುಗೊಳಿಸಿರುವುದನ್ನು ಖಂಡಿಸಿ ಹಾಗೂ

★ ಶನಿವಾರಸಂತೆಯ ಪಂಚಾಯ್ತಿ ನೌಕರನ ಮೇಲೆ ಹಲ್ಲೆಯನ್ನು ಖಂಡಿಸಿ ಪಂಚಾಯತ್ ನೌಕರರಿಗೆ ಸೂಕ್ತ ರಕ್ಷಣೆ ನೀಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು. ಪ್ರಾರಂಭದಲ್ಲಿ ಕಾರ್ಯದರ್ಶಿ ಕೆ.ಪಿ. ಗಣಪತಿಯವರು ಸ್ವಾಗತಿಸಿ ಕೊನೆಯಲ್ಲಿ ಜಂಟಿ ಕಾರ್ಯದರ್ಶಿ ಕೆ.ಯು. ಆನಂದ ವಂದಿಸಿದರು.

ಇ.ಎಂ.ಎಸ್. ಪ್ರಶ್ನೋತ್ತರ

ವಿಶ್ವದ ಸಮಾಜವಾದಿಚಳುವಳಿಗಳಲ್ಲಿಯೂ, ಜನ ಸಾಮಾನ್ಯರಲ್ಲಿಯೂ ಮೂಡಿತು.

ಹೀಗೆ ಹೊಸದಾಗಿ ಸಮಾಜವಾದಿ ವಿಶ್ವಕ್ಕೆ ಕಾಲಿಟ್ಟ ರಾಷ್ಟ್ರಗಳೆಲ್ಲವೂ ಸೋವಿಯತ್ ಮಾದರಿಯನ್ನು ಅಂಗೀಕರಿಸುವಂತಾಯಿತು. ಆದರೆ ಕ್ರಮೇಣವಾಗಿ ಇದು ತಪ್ಪೆಂದು ಗೋಚರಿಸಲಾರಂಭಿಸಿತು.

ಮೊದಲನೆಯದಾಗಿ: ಸೋವಿಯತ್ ಒಕ್ಕೂಟದಲ್ಲಿ ಅದ್ಭುತಕರವಾದ ಯಶಸ್ಸು ಉಂಟಾಗಿದೆಯಾದರೂ, ಆ ಯಶಸ್ಸುಗಳಿಗೆ ಮತ್ತೊಂದು ಮುಖವೂ ಇದೆಯೆಂದು ಸೋವಿಯತ್ ನಾಯಕರುಗಳಿಗೆ ಅನಿಸಲಾರಂಭಿಸಿತು. ಸೋವಿಯತ್ ಪಕ್ಷದ ಇಪ್ಪತ್ತನೆಯ ಸಮ್ಮೇಳನದಿಂದ ಆ ಪಕ್ಷದೊಳಗೆ ತೀಕ್ಷ್ಣವಾದ ವಿಮರ್ಶೆ ಸ್ವವಿಮರ್ಶೆಗಳು ಪ್ರಾರಂಭವಾದುವು. ಲೆನಿನ್ನರ ನಂತರ ಸಮಾಜವಾದಿ ಸಮಾಜ ನಿರ್ಮಾಣಕ್ಕಾಗಿ ಅಂಗೀಕರಿಸಿದ ನಿಲುಮೆಗಳಲ್ಲಿ ಹಲವೂ ತಪ್ಪಾಗಿತ್ತೆಂದುತಿಳಿಯಿತು. ಸರಿಯಾಗಿ ದ್ವವ್ಯಗಳನ್ನೇ ಜಾರಿ ಮಾಡುವುದರಲ್ಲಿ ವಿಕಲತೆಗಳುಂಟಾಯಿತೆಂದು ಎತ್ತಿ ತೋರಿಸ ಲಾಯಿತು. ಲೆನಿನ್‌ರ ನಂತರ ಧೀರ್ಘ ವರೆಯುವರೆಗೆ ಅಧಿಕಾರದಲ್ಲಿದ್ದ ಸ್ಟಾಲಿನ್ನರಿಗೇ ಗುರುತರವಾದ ತಪ್ಪುಗಳು ಉಂಟಾಗಿ ರುವುದಾಗಿ ಸಾಬೀತಾಯಿತು.

ಎರಡನೇಯದಾಗಿ, ಎರಡೂ (ಸಮಾಜವಾದಿ ಮತ್ತು ಬಂಡವಾಳಶಾಹಿ) ಜಗತ್ತುಗಳೂ ಅನುದಿನವೂ ಪ್ರಗತಿ ಹೊಂದುತ್ತಿತ್ತು. ಆದರೆ ಅಭಿವೃದ್ಧಿ ಶೀಲ ರಾಷ್ಟ್ರಗಳನ್ನು ನವೀಕರಿಸುವುದರಲ್ಲಿ ಜಯಕಂಡ ಸಮಾಜವಾದಕ್ಕೆ ಅಭಿವೃದ್ಧಿ ಹೊಂದಿದ ಬಂಡವಾಳಶಾಹೀ ರಾಷ್ಟ್ರಗಳನ್ನು ದಾಟಿ ಮುಂದುವರೆಯಲು ಸಾಧ್ಯವಾಗಲಿಲ್ಲ. ಈ ಸಮೀಪದ ಇತ್ತೀಚಿನ ದಿನಗಳಲ್ಲಿ ಸಮಾಜವಾದೀ ಜಗತ್ತು ಅಭಿವೃದ್ಧಿ ಹೊಂದಿದ ಬಂಡವಾಳಶಾಹೀ ಜಗತ್ತಿಗೆ ಹಿಂದೆ ಬಿತ್ತು. ಈ ಹಿನ್ನೆಲೆಯಲ್ಲಿ ಸಮಾಜವಾದಕ್ಕೆ ಇನ್ನು ಮುಂದುವರೆಯಬೇಕಾದರೆ ಹಿಂದೆ ಪ್ರಯೋಗಿಸಿ ಜಾರಿ ಮಾಡಿದ್ದ ಹಲವು ಧೋರಣೆಗಳನ್ನು ಕೈ ಬಿಡಬೇಕೆಂಬ ವಿಷಯ ಖಚಿತವಾಯಿತು. ಇದರ ಆಧಾರದಲ್ಲಿ ಆರ್ಥಿಕ ಮತ್ತು ರಾಜಕೀಯಗಳನ್ನೊಳಗೊಂಡ ಹಲವು ರಂಗಗಳಲ್ಲಿ ಒಂದು ನವೀಕರಣ ನಡೆಯಬೇಕೆಂಬುದು ಸ್ಪಷ್ಟವಾಯಿತು. ಅದರಂತೆಯೇ ವ್ಯಾಪಕವಾದ ಒಂದು ಸುಧಾರಣಾ ಚಳವಳಿ ಸೋವಿಯತ್ ಒಕ್ಕೂಟದಲ್ಲಿ ಮೊಳಕೆಯಾಯಿತು.

ಮೂರನೇಯದಾಗಿ ಕ್ರಾಂತಿಯ ಪರಿಣಾಮವಾಗಿ ಸೋವಿಯತ್ ಯೂನಿಯನ್‌ನ ಮಾದರಿಯಲ್ಲಿ ಸಮಾಜವಾದಿ ಸಮಾಜವನ್ನು ಕಟ್ಟಿಬೆಳೆಸಲು ಪ್ರಾರಂಭಿಸಿದ ಇತರೆ ಸಮಾಜವಾದೀ ದೇಶಗಳು ತಮ್ಮ ಸ್ವಂತ ಅನುಭವದಿಂದ ಒಂದು ಪಾಠವನ್ನು ಕಲಿತರು. ಸಮಾಜವಾದಿ ಸಮಾಜದ ಸಾಮಾನ್ಯ ದೃಷ್ಟಿ ಕೋನ ಎಲ್ಲೆಡೆಗಳಲ್ಲೂ ಒಂದೇ ಆಗಿದ್ದರೂ ಅದರ ವಿಷದವಾದ ರೂಪ ಒಂದೊಂದು ದೇಶಗಳಲ್ಲಿಯೂ ಬೇರೆ ಬೇರೆಯಾಗಿರುತ್ತದೆ. ಈ ವಿಶಿಷ್ಟತೆಗಳನ್ನು ಗಣನೆಗೆ ತೆಗೆದುಕೊಳ್ಳದೆ ಸಮಾಜವಾದೀ ನಿರ್ಮಾಣ ಕಾರ್ಯ ಕೈಗೊಳ್ಳಲಾರಂಭಿಸಿದರೆ ಸೋಲಾಗಬಹುದು ಎಂದು.

ಅಂದರೆ ಒಂದೊಂದು ಸಮಾಜವಾದಿ ದೇಶಗಳಲ್ಲಿಯೂ ಇನ್ನು ಮುಂದಕ್ಕಿರುವ ಸಮಾಜವಾದೀ ಸಮಾಜ ನಿರ್ಮಾಣಕ್ಕೆ ಮೊದಲ ಕಾಲದಲ್ಲಿ ಸೋವಿಯತ್ ಒಕ್ಕೂಟದಲ್ಲಿ ಜಾರಿಯಲ್ಲಿ ಬಂದ ನಿಲುಮೆಗಳಿಂದ ಬೇರೆಯೇ ಆದ ನಿಲುಮೆಗಳನ್ನಂಗೀಕರಿಸಬೇಕು. ಆದರೆ ಒಂದು ಸಮಸ್ಯೆ ಇಲ್ಲಿ ಹುಟ್ಟುತ್ತದೆ. ಒಂದೊಂದು ರಾಷ್ಟ್ರಗಳಲ್ಲಿಯೂ ಏನು ಮಾಡಬೇಕು? ಮೊದಲಿನ ಸಮಾಜವಾದಿ ಸಮಾಜದಲ್ಲಿ ಬಳಸಿ ಫಲಕೊಟ್ಟಂತಹ ಮಾರ್ಗಗಳಲ್ಲಿ, ಇನ್ನು ಯಾವುದನ್ನು ಮುಂದುವರೆಸಬೇಕು? ಯಾವುದನ್ನು ಕೈ ಬಿಡಬೇಕು? ಸೋವಿಯಿತ್ ಒಕ್ಕೂಟದ ಸಮಾಜವಾದಿ ಸಮಾಜ ನಿರ್ಮಾಣದಲ್ಲಿ, ಸ್ವಾಧ್ಯವಾಗಿ ಕಂಡು ಕೊಂಡಿದ್ದ ಯಾವ ಯಾವ ರೀತಿ ನೀತಿಗಳು, ತ್ಯಾಜ್ಯವಲ್ಲ ಇತ್ಯಾದಿ.

ಈ ಕುರಿತ ತೀಕ್ಷ್ಣವಾದ ಅಭಿಪ್ರಾಯ ಭೇದಗಳು ಪ್ರತಿ ಸಮಾಜವಾದಿ ರಾಷ್ಟ್ರಗಳ ಪಕ್ಷಗಳಲ್ಲಿಯೂ ಉಂಟಾದುವು. ಅವುಗಳೊಳಗೆ ತಿಕ್ಕಾಟ ನಡೆಯಿತು. ಪಕ್ಷಗಳೊಳಗೆಯೇ ವಿವಿಧ ಗುಂಪುಗಳು ಕಂಡು ಬಂದವು ಅವುಗಳೊಳಗಿನ ತಿಕ್ಕಾಟದಿಂದ ಲಾಭ ಪಡೆಯಲು ಬಂಡವಾಳಶಾಹಿ ಜಗತ್ತು ತಮ್ಮಿಂದಾಗುವುದನ್ನೆಲ್ಲಾ ಮಾಡಿತು. ಇದೆಲ್ಲವುಗಳ ಒಟ್ಟು ಮೊತ್ತವಾಗಿ ವಿವಿಧ ಸಮಾಜವಾದೀ ರಾಷ್ಟ್ರಗಳಲ್ಲಿ ಆಂತರಿಕ ಬಿಕ್ಕಟ್ಟಾಗಿ ರೂಪಗೊಂಡಿತು.

ಸಿ.ಪಿ.ಐ(ಎಂ) ಪಾಲಿಟ್ ಬ್ಯೂರೋ ಬೊಟ್ಟು ಮಾಡಿ ತೋರಿಸಿದಂತೆ, ಇದು ಜಗತ್ತಿನ ಸಮಾಜವಾದಿ ಚಳವಳಿಗೆ ಸಂಭವಿಸಿದ ಹಿನ್ನಡೆ ಆದರೆ ಪಾಲಿಟ್ ಬ್ಯೂರೋವಿನ ಹೇಳಿಕೆಯೇ ಎತ್ತಿ ತೋರಿಸುವಂತೆ: ಪ್ರತಿಯೊಂದು ಸಮಾಜವಾದೀ ರಾಷ್ಟ್ರದ ಭವಿಷ್ಯವನ್ನು ನಿರ್ಣಯಿಸುವುದು ಅಲ್ಲಲ್ಲಿಯ ಜನತೆಯಾಗಿದೆ. ಸಮಾಜವಾದೀ ಸಮಾಜವನ್ನು ಬಂಡವಾಳಶಾಹಿ ಪದ್ಧತಿಗೆ ಮರಳಿಸಲು ನಡೆಸುತ್ತಿರುವ ಎಲ್ಲಾ ಪ್ರಯತ್ನಗಳನ್ನೂ: ದಶಕಗಳಿಂದ ಸಮಾಜವಾದಿ ಸಮಾಜದ ಸತ್ಫಲಗಳನ್ನು ಅನುಭವಿಸಿದ ಜನತೆ ಫಲಪ್ರದವಾಗಿ ಎದುರಿಸಿ ಸೋಲಿಸಿಯೇ ತೀರುವರು. ಇನ್ನು ಮುಂದೆ ಸಮಾಜವಾದಕ್ಕೆ ಪ್ರಗತಿ ಹೊಂದಲು ಅಗತ್ಯವಾದ ಸುಧಾರಣೆಗಳನ್ನು ಅವರು ಜಾರಿ ಮಾಡುವರು. ಅದಕ್ಕೆದುರಾಗಿ ಪಿತೂರಿ ನಡೆಸುವ ಆಂತರಿಕ ಮತ್ತು ಬಾಹ್ಯ ಶಕ್ತಿಗಳನ್ನು ಅವರು ಎದುರಿಸಿ ಸೋಲಿಸುವರು.

ಎಸ್.ಎಫ್.ಐ. ಧಾರವಾಡ ಜಿಲ್ಲಾ ಸಮಿತಿ ಸಭೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಧಾರವಾಡ ಸಮಿತಿಯ ಸಭೆಯು ದಿನಾಂಕ. ೪-೩-೯೦ರಂದು ಹಳೇ ಹುಬ್ಬಳ್ಳಿಯ ಕಛೇರಿಯಲ್ಲಿ ಯಶಸ್ವಿಯಾಗಿ ಜರುಗಿತು.

ಮಂಡೇಲಾರ ಬಿಡುಗಡೆ ಹಾಗೂ ಉತ್ತರ ಭಾರತ ವಿಧಾನಸಭಾ ಚುನಾವಣೆಗಳಲ್ಲಿ ಪ್ರಜಾಪ್ರಭುತ್ವ ಶಕ್ತಿಗಳ ಜಯವನ್ನೂ ಸ್ವಾಗತಿಸಿದ ಸಭೆ. ಹಾಸ್ಟೆಲ್ ವಿದ್ಯಾರ್ಥಿಗಳ ಸಮಸ್ಯೆ ಕುರಿತಾದ ಗುರುಪ್ರಸಾದ್ ವರದಿಯ ಜ್ಯಾರಿಗೆ ಕರ್ನಾಟಕ ವಿ.ವಿ. ದ ಆಶ್ರಮಗಳ ಸಿ.ಓ.ಡಿ. ತನಿಖೆ ಆರಂಭಿಸಲು ಸರಕಾರಕ್ಕೆ ವಿ.ವಿ. ಆಡಳಿತ ಒತ್ತಾಯಸಬೇಕೆಂದು ಹೇಳಿದೆ. ಧಾರವಾಡದಲ್ಲಿ ಮಾರ್ಚ್ ೮ ರಂದು ಕೃಷಿ ವಿದ್ಯಾರ್ಥಿಗಳ ರಾಜ್ಯಮಟ್ಟದ ಸಮಾವೇಶ ನಡೆಸಲು ನಿರ್ಧರಿಸಲಾಯಿತು.

ಸೋಮೇಶ ಸರ್ವಳಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಯಲ್ಲಿ ಜಿಲ್ಲಾ ಸಮಿತಿಯನ್ನು ಪುನಃ ರಚಿಸಿ ಹೊಸ ಸಮಿತಿಯನ್ನು ರಚಿಸಲಾಯಿತು. ಸಭೆಯಲ್ಲಿ ಪ್ರಸ್ತುತ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಚಳುವಳಿಯ ಪಾತ್ರ ಅಲ್ಲದೇ ಮುಂದಿನ ವರ್ಷದ ಯೋಜನೆಗಳನ್ನು ರೂಪಿಸಲಾಯಿತು. ಇದೇ ಬರುವ ಮೇ ತಿಂಗಳಲ್ಲಿ ತಾಂತ್ರಿಕ ವಿದ್ಯಾರ್ಥಿಗಳ ಚಳುವಳಿಯನ್ನು ಹೂಡಿಸಲು ಮತ್ತು ಜೂನ್ ಜುಲೈ ತಿಂಗಳುಗಳಲ್ಲಿ ಡೋನೇಷನ್ ಪದ್ಧತಿಯ ವಿರುದ್ಧ ಹಾಗೂ ಸೆನೆಟ್ ಮತ್ತು ಸಿಂಡಿಕೇಟ್‌ಗಳಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯ ಕುರಿತು ಬಲವಾದ ಹೋರಾಟವನ್ನು ಸಂಘಟಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

೧೫ ಜನರ ನೂತನ ಜಿಲ್ಲಾ ಸಮಿತಿಗೆ ಅಧ್ಯಕ್ಷರಾಗಿ ಶ್ರೀ ಸುರೇಶ ತಾಂಡೇಲ ಅವರು ಆಯ್ಕೆಯಾದರು. ಉಪಾಧ್ಯಕ್ಷರಾಗಿ ಸೋಮು ನಡಪೂರಮಠ ಆಯ್ಕೆಯಾದರೆ ಕಾರ್ಯದರ್ಶಿಯಾಗಿ ಬಸವರಾಜ ಭಜಂತ್ರಿ ಪುನರಾಯ್ಕೆಯಾದರು. ಅಲ್ಲದೇ ಮಹೇಂದ್ರ ಪೂಜಾರ ಸಹ ಕಾರ್ಯದರ್ಶಿಯಾಗಿ ಸೋಮೇಶ ಸರ್ವಳಿ ಸೆಕ್ರೆಟರಿಯೆಟ್ ಸದಸ್ಯರಾಗಿ ಆಯ್ಕೆಯಾದರು. ಇತರೆ ೬ ಜನರನ್ನು ಜಿಲ್ಲಾ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು.

ಲಿಥುವಾನಿಯಾ ನಿರ್ಣಯ: ಒಂದು ತಪ್ಪು ಹೆಜ್ಜೆ

ಲಿಥುವಾನಿಯಾದ ಸಂಸತ್ತು ಸೋವಿಯತ್ ಒಕ್ಕೂಟದಿಂದ ಪ್ರತ್ಯೇಕಗೊಳ್ಳಬೇಕೆಂದು ಕೈಗೊಂಡ ನಿರ್ಣಯ ಅಸಿಂಧು ಎಂದು ಸೋವಿಯತ್ ಜನತಾ ಪ್ರತಿನಿಧಿಗಳ ಸಭೆ (ಸರ್ವೋಚ್ಚ ಸಂಸತ್ತು) ಭಾರೀ ಬಹುಮತದಿಂದ ಅಂಗೀಕರಿಸಿದೆ. ಆದ್ದರಿಂದ ಸೋವಿಯತ್ ಒಕ್ಕೂಟದ ಪ್ರಥಮ ಕಾರ್ಯಾಧ್ಯಕ್ಷರಾಗಿ ಚುನಾಯಿತರಾಗಿರುವ ಮಿಖೈಲ್ ಗೋರ್ಬಚೆವ್ ಲಿಥುವಾನಿಯಾದಲ್ಲಿ ಸೋವಿಯತ್ ಸಾರ್ವಭೌಮತ್ವ ಕಾಪಾಡಲು ಕ್ರಮ ಕೈಗೊಳ್ಳಬೇಕೆಂದು ಲಿಥುವಾನಿಯಾ ಅಧ್ಯಕ್ಷರಿಗೆ ಸಂದೇಶ ಕಳಿಸಿದ್ದಾರೆಂದು ವರದಿಯಾಗಿದೆ.

ಸೋವಿಯತ್ ಪ್ರಭುತ್ವದಲ್ಲಿ ಲಿಥುವಾನಿಯಾ ಅಭಿವೃದ್ಧಿ ಕಂಡಿಲ್ಲವೆಂದು ಅಲ್ಲಿನ ಪ್ರತ್ಯೇಕತಾವಾದಿಗಳು ಚಿತ್ರಿಸುತ್ತಿದ್ದಾರೆ. ಇದು ಸುಳ್ಳು ಎಂಬುದು ಅಂಕೆ-ಸಂಖ್ಯೆಗಳಿಂದ ತಿಳಿದು ಬರುತ್ತದೆ. ಸೋವಿಯತ್ ಪ್ರಥಮ ಉಪ ಪ್ರಧಾನ ಮಂತ್ರಿ ಹಾಗೂ ಸೋವಿಯತ್ ಯೋಜನಾ ಸಮಿತಿಯ ಅಧ್ಯಕ್ಷ ಯೂರಿ ಮಾಸ್ಲ್ಯುಕೊವ್ ಪ್ರಕಾರ ೧೯೪೦ರಲ್ಲಿ ಸೋವಿಯತ್ ಅಧಿಕಾರ ಸ್ಥಾಪನೆಯಾಗುವ ಮೊದಲು ೭೪% ಲಿಥುವಾನಿಯಾ ಜನತೆ ಕೃಷಿಯನ್ನ ವಲಂಬಿಸಿದ್ದರು. ಕೇವಲ ೭% ಉದ್ದಿಮೆಗಳಲ್ಲಿ ದುಡಿಯುತ್ತಿದ್ದರು. ಆದರೆ ಈ ೫೦ ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆ ೮೪ ಪಟ್ಟು ಹೆಚ್ಚಿತು ೫೦ ಶತ ಕೋಟಿ ರೂಬಲ್‌ಗಳ ಬಂಡವಾಳ ಹೂಡಗಿಸಿ ಹಲವಾರು ಹೊಸ ಉದ್ದಿಮೆಗಳನ್ನು ಆರಂಭಿಸಲಾಯಿತು. ಸೋವಿಯತ್ ಪ್ರಭುತ್ವ ಸ್ಥಾಪನೆಯಾಗುವ ಮೊದಲು ಅಲ್ಲಿ ಯಂತ್ರೋಪಕರಣಗಳ ಉದ್ದಿಮೆ ಹಡಗು ರಚನೆ, ವಿದ್ಯುತ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್, ರೇಡಿಯೋ ಇಲೆಕ್ಟ್ರಾನಿಕ್ಸ್, ರಾಸಾಯನಿಕ, ಪೆಟ್ರೋ ಕೆಮಿಕಲ್ಸ್ ಇವೆಲ್ಲಾ ಸೋವಿಯತ್ ಪ್ರಭುತ್ವದಿಂದಾಗಿಯೇ ಆರಂಭವಾದ ಉದ್ದಿಮೆಗಳು.

ಲಿಥುವಾನಿಯಾದಲ್ಲಿ ಸೋವಿಯತ್ ಒಕ್ಕೂಟ ಮಟ್ಟದ ಪ್ರಾಜೆಕ್ಟ್‌ಗಳು ೫.೫೭ ಶತಕೋಟಿ ರೂಬಲ್‌ಗಳಷ್ಟಾಗುತ್ತದೆ. ಅಂದರೆ ಲಿಥುವಾನಿಯಾ ಪ್ರತ್ಯೇಕಗೊಳ್ಳುವುದಾದರೆ ಇಷ್ಟು ಅಗಾಧ ಮೊತ್ತವನ್ನು ಅದು ತುಂಬಿ ಕೊಡಬೇಕಾಗುತ್ತದೆ. ಅದೇ ರೀತಿ ಈ ಪ್ರಾಜೆಕ್ಟ್‌ಗಳಲ್ಲಿ ದುಡಿಯುತ್ತಿದ್ದು ತಮ್ಮ ಸೋವಿಯತ್ ನಾಗರಿಕತೆ ಉಳಿಸಿಕೊಳ್ಳ ಬಯಸುವವರ ಹಕ್ಕನ್ನು ಆಸ್ತಿ-ಪಾಸ್ತಿಗಳನ್ನು ರಕ್ಷಿಸುವ ಹೊಣೆಯೂ ಲಿಥುವಾನಿಯಾದ ಹೊಣೆಯೆಂಬ ಸಂಗತಿಯತ್ತ ಮಾಸ್ಲ್ಯುಕೋವ್ ಗಮನ ಸೆಳೆಯುತ್ತಾ ಲಿಥುವಾನಿಯಾದ ನಿರ್ಣಯ ಆರ್ಥಿಕ, ರಾಜಕೀಯ, ಕಾನೂನಿನ, ಅಂತರಾಷ್ಟ್ರೀಯ ಹಾಗೂ ನೈತಿಕ ಪ್ರಶ್ನೆಗಳ ಮೇಲೆ ಅತ್ಯಂತ ನೋವಿನ ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತದೆ ಎಂದಿದ್ದಾರೆ.

"ಸ್ವತಂತ್ರ ತಾಯ್ನಾಡು ಅಥವಾ ಸಾವು"

"ನಾವು, ಸ್ಯಾಂಡಿನಿಸ್ಟಾಗಳು ಬಿವರು, ರಕ್ತ ಹರಿಸಿದ್ದು ಅಧಿಕಾರದ ಕುರ್ಚಿಗಳಿಗೆ ಅಂಟಿಕೊಂಡಿರಲು ಅಲ್ಲ, ಬದಲು ೧೮೨೧ ರಿಂದಲೂ ನಿಕರಾಗುವಾವನ್ನು ಯಾವುದರಿಂದ ವಂಚಿಸಲಾಗಿತ್ತೋ ಅದನ್ನು ಪಡೆಯಲು ಅಂದು ನಿಕರಾಗುವಾ ಒಂದು ಸ್ವತಂತ್ರ ದೇಶವಾಯಿತು. ಆದರೆ ಸ್ಯಾಂಡಿನೋ ನೇತೃತ್ವದಲ್ಲಿ ನಿಕರಾಗುವನ್ನರು ಗೆದ್ದ ಸ್ವಾತಂತ್ರ್ಯ ಅವರಿಗೆ ದಕ್ಕಲಿಲ್ಲ. ನಿಕರಾಗುವನ್ನರು ಗೆದ್ದ ಪ್ರಜಾಪ್ರಭುತ್ವವನ್ನೂ ವಂಚಿಸಲಾಯಿತು, ಸಾಮಾಜಿಕ, ಆರ್ಥಿಕ ಬೆಳವಣಿಗೆಯಿಂದ ವಂಚಿಸಲಾಯಿತು, ನಿಕರಾಗುವನ್ನರಿಗೆ ಮಾತನಾಡುವ ಹಕ್ಕು, ಸಂಘಟನೆಯ ಹಕ್ಕು, ಭೂಮಿ ಹೊಂದುವ ರೈತರ ಹಕ್ಕು, ಉತ್ತಮ ಜೀವನದ ನಿರೀಕ್ಷೆಯಿಟ್ಟುಕೊಳ್ಳುವ ಬಡವರ ಹಕ್ಕು ಇವನ್ನೆಲ್ಲಾ ನಿರಾಕರಿಸಲಾಯಿತು......

ಜುಲೈ ೧೯, ೧೯೭೯ ರಂದು ನಾವು ಒಂದು ಸ್ವತಂತ್ರ ಗೌರವಪೂರ್ಣ, ಸಾರ್ವಭೌಮ ನಿಕರಾಗುವಾ, ಆರ್ಥಿಕ ಬೆಳವಣಿಗೆ, ಸಾಮಾಜಿಕ ಬೆಳವಣಿಗೆ, ಪೂರ್ಣ ಪ್ರಜಾಪ್ರಭುತ್ವ ನಿಕರಾಗುವಾ ಪಡೆದವು.

ಈ ಫೆಬ್ರುವರಿ ೨೫ ರಂದು ನಾವು ನಮ್ಮ ತತ್ವಗಳಿಗೆ ಬದ್ಧರು ಎಂದು ಇಡೀ ವಿಶ್ವಕ್ಕೆ ತೋರಿಸಿಕೊಟ್ಟೆವು. ಕಾರ್ಯಾವಾಚಾ ಬದ್ಧರು ಎಂದು ತೋರಿಸಿಕೊಟ್ಟೆವು. ನಮಗೆ ಈ ಬಗ್ಗೆ ಹೆಮ್ಮೆ......

ಶಕ್ತಿಶಾಲಿಗಳು ಮತ್ತು ದುರ್ಬಲರ ನಡುವೆ ವಿಭಜನೆಗೊಂಡ ಈ ಅನ್ಯಾಯದ ಜಗತ್ತಿನಲ್ಲಿ, ಒಂದಿಷ್ಟು ಆತ್ಮ ಗೌರವ, ಒಂದಿಷ್ಟು ಪ್ರಜಾಪ್ರಭುತ್ವ, ಒಂದಿಷ್ಟು ಸಾಮಾಜಿಕ ನ್ಯಾಯದ ಕಾಣಿಕೆ ನೀಡಿದೆವು. ನಮಗೆ ಈ ಬಗ್ಗೆ ಹೆಮ್ಮೆ.

ನಿಕರಾಗುವಾದ ಸೋದರ, ಸೋದರಿಯರೇ, ನಮ್ಮ ಹೋರಾಟ ಮುನ್ನಡೆಯಲಿ- ನಮ್ಮ ಸಮರ ಘೋಷದೊಂದಿಗೆ, ಸ್ಯಾಂಡಿನೋರ ಸಮರ ಘೋಷ "ಸ್ವತಂತ್ರ ತಾಯ್ನಾಡು ಅಥವಾ ಸಾವು" ಎಂಬ ಸಮರ ಘೋಷದೊಂದಿಗೆ ಮುನ್ನಡೆಯಲಿ".

ಫೆಬ್ರುವರಿ ೨೫ ರ ಚುನಾವಣೆಯಲ್ಲಿ ಮತದಾನ ಮುಗಿದ ಮೇಲೆ ಅಧ್ಯಕ್ಷ ಡೇನಿಯಲ್ ಒರ್ಟೆಗಾ ತನ್ನ ದೇಶ ಬಾಂಧವರಿಗೆ ನೀಡಿದ ಸಂದೇಶದ ಕೆಲವು ಅಂಶಗಳು. ಮತದಾನ ಆರಂಭವಾಗುವ ಮೊದಲು ಆಡಿದ ಮಾತುಗಳಿವು.

ಟ್ಯಾಕ್ಸಿ ಟ್ಯಾಕ್ಸಿ ಮೀಟರ್ ಮೇಲೆ ನೂರು ಪಟ್ಟು ಅಷ್ಟೇ!

ಗ್ಯಾಸ್ ಮತ್ತು ವಿದ್ಯುತ್ ಬೆಲೆ ४ ಪಟ್ಟಿನಷ್ಟು ಏರಿದೆ ಬ್ರೆಡ್ಡು, ಹಿಟ್ಟು ಮತ್ತು ಮಾಂಸದ ಬೆಲೆಗಳು ಗಗನಕ್ಕೇರಿವೆ. ಹೆಚ್ಚಿನ ಗ್ರಾಹಕ ಮಹಿಳೆಯರು ಬೆಲೆ ಏರಿಕೆಯಿಂದಾಗಿ ಮಾಂಸದ ಬಳಕೆಯನ್ನು ಅರ್ಧಕ್ಕೆ ಇಳಿಸಿದ್ದಾಗಿ ತಿಳಿಸಿದರು. ಮಾಂಸದ ಅಂಗಡಿಗಳು ಖಾಲಿ ಹೊಡೆಯುತ್ತವೆ. ಬೆಲೆಗಳು ಎಷ್ಟು ಹೆಚ್ಚಿವೆಯೆಂದರೆ ಸುಮಾರು ಒಂದು ಲಕ್ಷ ಕಾರಿನ ಮಾಲಿಕರು ತಮ್ಮ ರಿಜಿಸ್ಟ್ರೇಶನ್ ಪ್ಲೇಟ್ ವಾಪಸು ಮಾಡಿದ್ದಾರೆ. ಇವರ ಈ ಕ್ರಮಕ್ಕೆ ಪೆಟ್ರೋಲ್ ಬೆಲೆಗಳಲ್ಲದೆ ಕಾರು ಟ್ಯಾಕ್ಸ್ ಏರಿಸಿದ್ದೂ ಕಾರಣ. ಟ್ಯಾಕ್ಸಿ ನಿಲ್ದಾಣಗಳು ಬಿಕೋ ಎನ್ನುತ್ತವೆ. ಪೆಟ್ರೋಲ್ ಬೆಲೆ ಏರಿಕೆಯಿಂದಾಗಿ ಏರಿದ ಟ್ಯಾಕ್ಸಿ ದರಗಳು ಮೀಟರ್ ನ ಬೆಲೆಗಿಂತ ನೂರು ಪಟ್ಟು!

ಪ್ಯಾರಿಸಿಗೆ ಹೋಗುವ ವಿಮಾನ ಹೆಚ್ಚು ಕಡಿಮೆ ಖಾಲಿ ಹೋಗುತ್ತಿದೆಯಂತೆ. ಇದಕ್ಕೆ ವಿಪರೀತ ಹೆಚ್ಚಿನ ಬೆಲೆಗಳು ಕಾರಣ- ಹಿಂದೆ ತುಂಬಿರುತ್ತಿದ್ದ ಪ್ಯಾರಿಸ್ ವಿಮಾನಯಾನದ ವೆಚ್ಚ ಈಗ ೨೦ ಲಕ್ಷ ಝ್ಲೋಟಿ (ಆ ದೇಶದ ನಾಣ್ಯ ನಮ್ಮ ರೂಪಾಯಿಯಂತೆ). ಈ ದೇಶದ ಸಂಚಾರ ಪ್ರಿಯ ಜನರ ಕೈಗೆಟುಕದ್ದು.

ಇದು ಯಾವ ದೇಶದಲ್ಲಿ ಎಂದು ನೀವು ಆಶ್ಚರ್ಯಪಡುತ್ತಿರಬಹುದು. ಇದು ನಡೆದಿರುವುದು ಕೆಲವು ತಿಂಗಳುಗಳಲ್ಲೇ. ಕಮ್ಯುನಿಸ್ಟೇತರ ಪ್ರಧಾನಿ ಹೊಂದಿದ ಪ್ರಥಮ ಪೂರ್ವ ಯುರೋಪಿಯನ್ ದೇಶ ಪೋಲೆಂಡ್‌ನ 'ಕ್ರಾಂತಿ'ಯ ಫಲ ಇದು. ಆಗಸ್ಟ್‌ನಲ್ಲಿ ಅಧಿಕಾರಕ್ಕೆ ಬಂದ ಸಾಲಿಡಾರಿಟಿ ಸರಕಾರ ಕೈಗೊಂಡಿರುವ ಆರ್ಥಿಕ ಕ್ರಮಗಳ ಪರಿಣಾಮ ಇದು. ಈ ಕ್ರಮಗಳಲ್ಲಿ ಮುಖ್ಯವಾದುವು ಪ್ರಮುಖ ಬಳಕೆ ವಸ್ತುಗಳಿಗೆ ಸರ್ಕಾರ ಸಬ್ಸಿಡಿ ಅಂತ್ಯ, ಬೆಲೆ ನಿಯಂತ್ರಣ ಅಂತ್ಯ ಮತ್ತು ವೇತನ ಸ್ಥಗಿತ. ಇದಕ್ಕೆ 'ಬಾಲ್ಸೆ ರೊಪಿಕ್ಸ್ (ಅರ್ಥ ಮಂತ್ರಿಯ ಹೆಸರು) ಯೋಜನೆ ಎಂದು ಹೆಸರು.

ಈ ಯೋಜನೆಯ ಮೊದಲ ಹಂತವಷ್ಟೇ ಇದು. ಇನ್ನೂ ಪೂರ್ಣ ಖಾಸಗೀಕರಣದ ನೀತಿ ಎರಡನೇ ಹಂತದಲ್ಲಿ ಬರಬೇಕಷ್ಟೇ. ಈ ವರ್ಷದ ಕೊನೆಯ ಹೊತ್ತಿಗೆ ಸರ್ಕಾರದ ಅಂದಾಜು ಪ್ರಕಾರವೇ ಲಕ್ಷದಿಂದ ೧೦ ಲಕ್ಷ ಜನ ನಿರುದ್ಯೋಗಿಗಳಾಗಬಹುದು.

ಆಳುವ 'ಸಾಲಿಡಾರಿಟಿ' ಪಕ್ಷದ ಮೇಲೆ ಇದರ ಪರಿಣಾಮ ಆಗದೆ ಇಲ್ಲ. 'ಸಾಲಿಡಾರಿಟಿ' ಮೇಲೆ ನಿಷೇಧ ತೆಗೆದ ನಂತರ ಅದರ ಸದಸ್ಯತ್ವ ಇಳಿಯುತ್ತಿದೆ. ೧೯೮೦ ರಲ್ಲಿ ಒಂದು ಕೋಟಿ ಇದ್ದ 'ಸಾಲಿಡಾರಿಟಿ' ಸದಸ್ಯತ್ವ ಹತ್ತರಲ್ಲಿ ಒಂದು ಪಾಲಿಗೆ ಇಳಿದಿದೆ. ಅಂದರೆ ಈಗ ಅದರ ಸದಸ್ಯತ್ವ ಈಗ ೧೦ ಲಕ್ಷ.

ಇದು ವರದಿಯಾಗಿರುವುದು ಪ್ಯಾರಿಸಿನ ಪ್ರಮುಖ ಬೂರ್ಜ್ವಾ ಫ್ರೆಂಚ್ ಪತ್ರಿಕೆ 'ಲೆ ಮೊಂಡೆ' ದಲ್ಲಿ.

ದೇಶ - ವಿದೇಶ

ಹರಿಯಾಣದಲ್ಲಿ ಚುನಾವಣಾ ಹಿಂಸಾಚಾರ ಅಪಾಯಕಾರೀ ಮಟ್ಟದಲ್ಲಿ

ಮೇಹಂ ಚುನಾವಣೆಯ ಸಮಯದಲ್ಲಿ ನಡೆದ ಹಿಂಸಾಚಾರವನ್ನು ಖಂಡಿಸುತ್ತಾ ಸಿ.ಪಿ.ಐ(ಎಂ) ಹರಿಯಾಣ ರಾಜ್ಯ ಸಮಿತಿ ಬೈಸೀ ಗ್ರಾಮದಲ್ಲಿ ನಿರ್ದೋಷಿ ಜನರ ಸಾವಿಗೆ ಸರಕಾರವೇ ಪೂರ್ಣವಾಗಿ ಜವಾಬ್ದಾರಿ ಎಂದು ಹೇಳಿದೆ. ಈ ಕ್ಷೇತ್ರದಲ್ಲಿ ಗಲಭೆಯ ಸೂಚನೆಗಳಿದ್ದರೂ ಸುರಕ್ಷತೆಯ ವ್ಯವಸ್ಥೆಯನ್ನು ಉಪೇಕ್ಷಿಸಲಾಯಿತು. ಗೋಲೀಬಾರು ಬೆಳಗ್ಗೆ ನಡೆದರೂ ಇಡೀ ದಿನ ಯಾವ ಉಚ್ಛಾಧಿಕಾರಿಯೂ ಅಲ್ಲಿಗೆ ತಲೆ ಹಾಕಲಿಲ್ಲ. ಘಟನೆಯ ಸುದ್ದಿ ತಿಳಿಯುತ್ತಲೇ ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ರಘುವೀರ ಸಿಂಹಪುದಾ ಅಲ್ಲಿಗೆ ಧಾವಿಸಿದರು. ಅವರ ಪ್ರಕಾರ ಉಚ್ಛಾಧಿಕಾರಿಗಳು ಆ ಸಂದರ್ಭದಲ್ಲಿದ್ದಿದರೆ ಪರಿಸ್ಥಿತಿ ಅಷ್ಟೊಂದು ಬಿಗಡಾಯಿಸುತ್ತಿರಲಿಲ್ಲ. ಇದು ನಿಂದನೀಯ. ಆದ್ದರಿಂದ ಸರಕಾರ ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ರಾಜ್ಯ ಸಮಿತಿ ಒತ್ತಾಯಿಸಿದೆ. ಪರಿಸ್ಥಿತಿ ಸಾಮಾನ್ಯಗೊಳ್ಳಲು ಸಾಕಷ್ಟು ಸಮಯಬೇಕು. ನಂತರವೇ ಇಲ್ಲಿ ಚುನಾವಣೆ ಸಾಧ್ಯ ಎಂದೂ ಅದು ಅಭಿಪ್ರಾಯಪಟ್ಟಿದೆ. ರಾಜ್ಯದಲ್ಲಿ ಚುನಾವಣೆ ಕಾಲದ ಹಿಂಸಾಚಾರ, ಗೂಂಡಾಗಿರಿ ಅಪಾಯಕಾರೀ ಮಟ್ಟ ತಲುಪಿರುವ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿರುವ ರಾಜ್ಯ ಸಮಿತಿ ಇದರಿಂದ ಚುನಾವಣಾ ಪದ್ಧತಿಯ ಮೇಲೆಯೇ ಜನರ ನಂಬಿಕೆ ಮಾಯವಾಗುತ್ತಿದೆ ಎಂದಿದೆ. ಈ ಚುನಾವಣಾ ಧಾಂಧಲೆಗಳ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸ ಬೇಕೆಂದು ರಾಜ್ಯದ ಜನತೆಗೆ ಕರೆ ನೀಡಿದೆ.

ವಿಧಾನ ಸಭಾ ಚುನಾವಣೆಗಳಲ್ಲಿ ಸಿ.ಪಿ.ಐ(ಎಂ) ಗೆದ್ದ ಸ್ಥಾನಗಳು

ಬಿಹಾರ

ಬಕ್ಸಾರ್	ಶ್ರೀಮತಿ ಮಂಜು ಪ್ರಕಾಶ್
ಪೂರ್ಣಿಮಾ	ಅಜಿತ್ ಸರ್ಕಾರ್
ಬೇಗುಸರಾಯ್	ಬಾಸುದೇವ್ ಸಿಂಗ್
ಬಿಭೂತಿಪುರ್	ರಾಮದೇವ್ ವರ್ಮಾ
ಸುಗೌಲಿ	ರಾಮಾಶ್ರಯ ಸಿಂಗ್
ಸಿಧ್ವಿ	ರಾಜೇಂದ್ರ ಸಿಂಗ್ ಮಂಡಾ

ಮಹಾರಾಷ್ಟ್ರ

ಜವಾಹರ್ (ಪರಿಶಿಷ್ಟ)	ಲಹಾನು ಕೋಮ್‌ ವರ್
ಸುರ್ಗಾಣಾ (ಪರಿಶಿಷ್ಟ)	ಜೀವಾ. ಪಿ. ಗವಿತ್
ಇಚ್ಚಲ್‌ಕರಂಜಿ	ಕೆ.ಎಲ್.ಮಲ್ಬಾಡೆ

ಒರಿಸ್ಸಾ

ಪತಮುಂಡ್ಯಾ	ರಾಧಾಕಾಂತ ಸೇಠಿ

ರಾಜಸ್ಥಾನ

ಸಂಘೇರಿಯಾ	ಹೇತ್‌ರಾಂ ಬೆನಿವಾಲ್

ಎಲ್.ಡಿ.ಎಫ್. ಸರಕಾರದ ಸಮಯಬದ್ಧ ಕಾರ್ಯಕ್ರಮ

ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ಕೇರಳದ ಎಲ್.ಡಿ.ಎಫ್. ಸರ್ಕಾರ ವಿವಿಧ ರಂಗಗಳಲ್ಲಿ ಸಮಯಬದ್ಧ ಕಾರ್ಯ ಕ್ರಮ ರೂಪಿಸಿ ಅನುಷ್ಠಾನಕ್ಕೆ ತರಲಿದೆ. ತಿರುವನಂತಪುರದಲ್ಲಿ ಫೆಬ್ರುವರಿ ೧೭ ಹಾಗೂ ೧೭ರಂದು ನಡೆದ ಸಿ.ಪಿ.ಐ(ಎಂ) ಕೇರಳ ರಾಜ್ಯಸಮಿತಿಯ ಸಭೆಯಲ್ಲಿ ಇದನ್ನು ಚರ್ಚಿಸಲಾಯಿತು. ಮುಂದೆ ಇದನ್ನು ಎಡ ಪ್ರಜಾಪ್ರಭುತ್ವ ರಂಗವೆದುರು ಒಪ್ಪಿಗೆಗೆ ಇಡಲಾಗುವುದು.

ಕಳೆದ ಎರಡು ವರ್ಷಗಳಲ್ಲಿ ಹಿಂದಿನ ಸರ್ಕಾರದಿಂದ ಬಳುವಳಿಯಾಗಿ ಬಂದ ಸಾಲ ಹೊರೆಯಲ್ಲಿ ಒಂದು ಭಾಗವಾದ ४೦೦ ಕೋಟಿ ರೂ. ಗಳ ಅಲ್ಪಾವಧಿಯ ಸಾಲ ಮರುಪಾವತಿ ಸೇರಿದಂತೆ ವಿವಿಧ ಯಶಸ್ವಿ ಕಲ್ಯಾಣ ಕಾರ್ಯಕ್ರಮಗಳಿಗಾಗಿ, ಅಭಿವೃದ್ಧಿಗಾಗಿ ಸಂಪನ್ಮೂಲ ಸಂಗ್ರಹಣೆಯ ಸಮಯದಲ್ಲಿ ಕೆಲವು ಜನ ವಿಭಾಗಗಳಿಗೆ ತೊಂದರೆಯಾಗಿದ್ದು ಇವನ್ನುಸರಿಪಡಿಸಲು ತಕ್ಷಣ ಕ್ರಮಕೈಗೊಳ್ಳಬೇಕೆಂದೂ, ಕಲ್ಯಾಣ ಯೋಜನೆಗಳ ಫಲ ವಿಳಂಬ ಹಾಗೂ ಖೋತಾ ಇಲ್ಲದೆ ಸಂಬಂಧಪಟ್ಟವರಿಗೆ ತಲುಪಬೇಕೆಂದೂ, ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಹೊಸ ಉದ್ದಿಮೆಗಳ ಆರಂಭ ಅಗತ್ಯವೆಂದೂ ರಾಜ್ಯ ಸಮಿತಿ ಹೇಳಿದೆ. ರೈತರ ಹಿಡುವಳಿ ಮೇಲೆ ಅವರ ಸ್ವಾಮ್ಯವನ್ನು ಸ್ವೀಕರಿಸುವುದು, ಬೆಲೆ ಇಳಿಕೆ, ಕೃಷಿ ಉತ್ಪನ್ನಗಳಿಗೆ ಫಲಕಾರಿ ಬೆಲೆ ನೀಡಲು ವ್ಯವಸ್ಥೆ ಮಾಡಬೇಕು. ಗುಂಪು ವ್ಯವಸಾಯ ಉದ್ದಿಮೆಗಳು ಯಶಸ್ವಿಯಾಗಿ ಜ್ಯಾರಿಯಾಗುವಂತೆ ರೈತರನ್ನೂ, ಕೃಷಿ ಕಾರ್ಮಿಕರನ್ನು ಆಣಿನೆರೆಸಬೇಕು. ಚಿಕ್ಕದ ರೈತರಿಗೆ ಹಿಡುವಳಿ ದಾಖಲೆಗಳನ್ನು ನೀಡುವ ಕೆಲಸ ತ್ವರಿತಗೊಳ್ಳಬೇಕಾದುದು ಅಗತ್ಯ ಎಂದು ರಾಜ್ಯಸಮಿತಿ ಅಭಿಪ್ರಾಯ ಪಟ್ಟಿತು. ವಿದ್ಯುತ್ ವಲಯದಲ್ಲಿ ಅಭಿವೃದ್ಧಿಗಾಗಿ ಸಂಬಂಧಪಟ್ಟ ಪ್ರಾಜೆಕ್ಟ್‌ಗಳನ್ನು ತುರ್ತಾಗಿ ಜ್ಯಾರಿಗೊಳಿಸುವಂತೆ ಕೇಂದ್ರ ಸರ್ಕಾರದ ಗಮನ ಸೆಳೆಯಬೇಕು. ಬರ ಪರಿಸ್ಥಿತಿ ಬರುವ ಶಂಕೆಯಿರುವುದರಿಂದ ಕುಡಿಯುವ ನೀರಿನ ಪೂರೈಕೆಗೂ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸಮಿತಿ ಹೇಳಿದೆ.

ಇದಲ್ಲದೆ ಆಡಳಿತದಲ್ಲಿ ಬೇಜವಾಬ್ದಾರಿ ವರ್ತನೆ, ಭ್ರಷ್ಟಾಚಾರಕ್ಕೆ ಅವಕಾಶವಿಲ್ಲದಂತೆ ಕೆಲಸದ ವಾತಾವರಣ ಸೃಷ್ಟಿಸುವಂತೆ ಎಲ್.ಡಿ.ಎಫ್. ಸರಕಾರವನ್ನು ರಾಜ್ಯ ಸಮಿತಿ ಕೇಳಿಕೊಂಡಿದೆ. ಅಲ್ಲದೆ ಈ ಬಗ್ಗೆ ಸೂಕ್ತ ಚಳುವಳಿ ನಡೆಸುವಂತೆ ಎಲ್ಲಾ ವರ್ಗ ಸಂಘಟನೆಗಳು ಹಾಗೂ ಸಾಮೂಹಿಕ ಸಂಘಟನೆಗಳ ಮುಖಂಡರಿಗೆ, ಕಾರ್ಯಕರ್ತರಿಗೆ ರಾಜ್ಯಸಮಿತಿ ಆದೇಶ ನೀಡಿದೆ.

ರಾಜ್ಯದ ಇನ್ನೂ ಲಕ್ಷಾಂತರ ಯುವಜನ ಚೈತನ್ಯವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸುವ ಯೋಜನೆಗಳನ್ನು ರೂಪಿಸಬೇಕು ಎಂದು ಸರಕಾರವನ್ನು ಕೇಳಿರುವ ಕೇರಳ ರಾಜ್ಯ ಸಮಿತಿ [illegible] ದಲ್ಲೆಲ್ಲಾ ಸಾಕ್ಷರತಾ ಆಂದೋಲನ [illegible] ಗರಿಷ್ಠ ಸಂಖ್ಯೆಯಲ್ಲಿ ಸೇವಾ [illegible] ಯುವ ಜನಗಳನ್ನು [illegible] ನೀಡಿದೆ.

"ಬಚ್ಚಾ - ಬಚ್ಚಾ ರಹಾಪುಕಾರ್ ಅಮನ್ ಶಾಂತಿ ಹೈ ದರ್ಕಾರ್"

ಇದು ಈಗ ಪಂಜಾಬಿನ ಹಲವು ಜಿಲ್ಲೆಗಳಲ್ಲಿ ಕೇಳಿ ಬರುತ್ತಿರುವ ಕೋಮು ಸೌಹಾರ್ದದ ಕೂಗು. ಸಿ.ಪಿ.ಐ(ಎಂ) ಜಾಲಂಧರ್, ಸಂಗರೂರ್, ಹೋಶಿಯಾರ್‌ಪುರ್, ಗುರುದಾಸ್‌ಪುರ್, ಫರೀದ್‌ಪುರ್ ಮತ್ತು ಪಾಟಿಯಾಲಾ ಜಿಲ್ಲೆಗಳಲ್ಲಿ ಸಿ.ಪಿ.ಐ (ಎಂ) ಕಾರ್ಯಕರ್ತರ, ಸ್ವಯಂ ಸೇವಕರ ತಂಡಗಳು ಜಾಥಾ ಹೊರಟು ಹಳ್ಳಿ ಹಳ್ಳಿ ತಲುಪಿ ಕೋಮು ಸೌಹಾರ್ದ, ದೇಶದ ಐಕ್ಯತೆಯ, ಶಾಂತಿಯ ಸಂದೇಶ ತಲುಪಿಸುತ್ತಿವೆ. ಮಾರ್ಚ್ ೧ರಂದು ಹಲವೆಡೆ ಸಾರ್ವಜನಿಕ ಸಭೆಗಳು ನಡೆದು ಈ ಜಾಥಾಗಳು ಆರಂಭವಾಗಿವೆ. ರಾಜ್ಯ ಸೆಕ್ರೆಟಾರಿಯಟ್ ಸದಸ್ಯರುಗಳು ವಿವಿಧೆಡೆಗಳಿಂದ ಈ ಜಾಥಾಗಳನ್ನು ಬೀಳ್ಕೊಟ್ಟರು.


ಜಾಲಂಧರ್ ಬೀರಾ ಗ್ರಾಮ ಇತ್ತೀಚೆಗೆ ಹುತಾತ್ಮರಾದ ಹರ್‌ಬಂಸ್ ಸಿಂಹ ಬೀರಾರ ಊರು ಇಲ್ಲಿಂದ ಒಂದು ಜಾಥಾವನ್ನು ರಾಜ್ಯ ಸಮಿತಿಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಮಂಗತರಾಮ್ ಪಾಸಲಾ ಉದ್ಘಾಟಿಸಿ ಕಳುಹಿಸಿದರೆ ಇದೇ ಜಿಲ್ಲೆಯ ಇನ್ನೊಬ್ಬ ಹುತಾತ್ಮ ಕಾಂ. ಸೋಹನ್‌ಸಿಂಗ್ ಢೇಸಿಯವರ ಊರು ಢೇಸಿಯಾಂದಿಂದ ಇನ್ನೊಂದು ೨೫೦ ಸ್ವಯಂ ಸೇವಕರಿದ್ದ ಜಾಥಾ ಹೊರಟಿತು.

ಸಂಗರೂರ್ ಜಿಲ್ಲೆಯಿಂದ ಹೊರಟ ಇನ್ನೊಂದು ೨೫೦ ಕಾರ್ಯಕರ್ತ ಜಾಥಾ ಮೊದಲ ದಿನವೇ ೯ ಗ್ರಾಮಗಳಲ್ಲಿ ಜನ ಸಂಪರ್ಕ ಕಾರ್ಯಕ್ರಮ ನಡೆಸಿತು. ನಾಲ್ಕು ದೊಡ್ಡಗ್ರಾಮಗಳಲ್ಲಿ ರ್‍ಯಾಲಿಗಳನ್ನು ನಡೆಸಿತು. ಈ ಜಿಲ್ಲೆಯ ಇನ್ನೊಂದು ಜಾಥಾ ಹರಿಘರದಿಂದ ಹೊರಟಿತು. ಗುರುದಾಸಪುರದ ಭಯೋತ್ಪಾದಕ ಪೀಡಿತ ಬಟಾಲಾದಿಂದ ಒಂದು ದೊಡ್ಡ ರ್‍ಯಾಲಿಯನಂತರ ಇನ್ನೊಂದು ಜಾಥಾ ಹೊರಟಿತು. ಪಟಿಯಾಲಾ ಜಿಲ್ಲೆಯಿಂದ ನಾಲ್ಕು ಜಾಥಾಗಳು ಹೊರಟವೆ.

ಜಾಥಾಗಳು ಆರಂಭವಾದ ಎರಡನೇ ದಿನ ರಾಜ್ಯ ಕೇಂದ್ರದಲ್ಲಿ ದೊರೆತ ವರದಿಗಳ ಪ್ರಕಾರ ಆಗಲೇ ೧೨೦ ಗ್ರಾಮಗಳಲ್ಲಿ ಈ ಜಾಥಾಗಳು ಜನಸಂಪರ್ಕ ನಡೆಸಿದವು. ४೨ ರ್‍ಯಾಲಿಗಳನ್ನು ನಡೆಸಿದವು. ನೀರು ಮತ್ತು ಗಡಿ ಪ್ರಶ್ನೆಗಳ ಮೇಲೆ ಸರ್ವಸಮ್ಮತ ರಾಜಕೀಯ ಪರಿಹಾರ, ಸಾಮ್ರಾಜ್ಯಶಾಹಿ ಬೆಂಬಲಿತ ಭಯೋತ್ಪಾದಕರ ವಿರುದ್ಧ ಸರ್ವಪಕ್ಷ ಪ್ರಚಾರಗಳ ಮೂಲಕ ಜನರನ್ನು ಅಣಿನೆರೆಸುವುದು ಮತ್ತು ತೀವ್ರಗಾಮಿಗಳ ವಿರುದ್ಧ [illegible] ಕ್ರಮ ಈ ಅಂಶಗಳ ಮೇಲೆ ಜಾಥಾಗಳಲ್ಲಿ [illegible] ವಿವರಿಸಲಾಗುತ್ತಿದೆ. ಜನತೆಯಿಂದ ಈ ಪ್ರಚಾರಕ್ಕೆ ಉತ್ತಮ ಸ್ಪಂದನ ದೊರೆಯುತ್ತಿದೆ.

KRNW / BGS-312 MAG(2) PRB DECR 319-78/79

ಎ.ಕೆ.ಜಿ. ಭವನ ನಿಧಿಗೆ ಮನವಿ



ಐದು ವರ್ಷಗಳ ವಿಳಂಬದ ನಂತರ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಂದ ಪರವಾನಿಗೆ ದೊರೆತು ಫೆಬ್ರುವರಿ ಮೊದಲ ವಾರದಲ್ಲಿ ಪಕ್ಷದ ಕೇಂದ್ರ ಕಚೇರಿ ಎ.ಕೆ.ಜಿ. ಭವನದ ನಿರ್ಮಾಣ ಕಾರ್ಯ ಆರಂಭವಾಗಿದೆ. ಈ ಕಟ್ಟಡಕ್ಕೆ ನಾಲ್ಕು ಅಂತಸ್ತುಗಳು, ಒಂದು ನೆಲಮಾಳಿಗೆಯಿರುತ್ತದೆ. ೧೯೯೧ ರ ಆದಿ ಭಾಗದಲ್ಲಿ ಇದು ಉಪಯೋಗಕ್ಕೆ ಸಿದ್ಧವಾಗುತ್ತದೆ ಎಂಬ ನಿರೀಕ್ಷೆಯಿದೆ.

೧೯೮೪ ರಲ್ಲಿ ಎ.ಕೆ.ಜಿ. ಭವನಕ್ಕೆ ೭೫ ಲಕ್ಷ ರೂಪಾಯಿಗಳ ನಿಧಿಗೆ ಕೇಂದ್ರ ಸಮಿತಿಕರೆ ನೀಡಿತ್ತು. ಇದರಲ್ಲಿ ೭೫ ಲಕ್ಷ ರೂ ಸಂಗ್ರಹವಾಗಿತ್ತು. ಈಗ ಜಮೀನಿಗೆ ೩೪ ಲಕ್ಷ ರೂ. ಪಾವತಿ ಮಾಡಿದ ಮೇಲೆ ಕಳೆದ ಐದುವರ್ಷಗಳ ನಿರ್ಮಾಣ ವೆಚ್ಚಗಳ ಏರಿಕೆಗಳಿಂದಾಗಿ ಇನ್ನೂ ೪೦ ಲಕ್ಷ ರೂ. ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

ಈ ಹೆಚ್ಚಿನ ಖರ್ಚನ್ನು ನಿಭಾಯಿಸಲು ನಿಧಿ ಸಂಗ್ರಹ ಕೆಲಸ ಮತ್ತೆ ನಡೆಸಬೇಕೆಂದು ಸಿ.ಪಿ.ಐ(ಎಂ) ಪಾಲಿಟ್ ಬ್ಯೂರೋ ಕರೆ ನೀಡಿದೆ. ಈ ಹಣವನ್ನು ನಾಲ್ಕು ತಿಂಗಳಲ್ಲಿ, ಜುಲೈ ೧೯೯೦ ರ ಅಂತ್ಯದೊಳಗೆ ಸಂಗ್ರಹಿಸಬೇಕಾಗಿದೆ. ಹಣನೀಡಿ. ಹಣ ಸಂಗ್ರಹಿಸಿ ನಿರ್ಮಾಣ ಕಾರ್ಯ ಯೋಜನೆಯಂತೆ ಪೂರ್ಣಗೊಳ್ಳುವಂತಾಗಬೇಕೆಂದು ಪಿ.ಬಿ. ಪಕ್ಷದ ಎಲ್ಲಾ ಘಟಕಗಳಿಗೆ, ಸದಸ್ಯರಿಗೆ, ಹಿತೈಷಿಗಳಿಗೆ ಮನವಿ ಮಾಡಿಕೊಂಡಿದೆ.

ಮೊದಲ ರಾಷ್ಟ್ರೀಯರಂಗ ಬಜೆಟ್

ಪುಟ 1 ರಿಂದ

ತುಷ್ಟ ಸುರಿಯಲಿದೆ ಎಂದು ಪಿ.ಬಿ. ಈ ಏರಿಕೆಗಳನ್ನು ಬಲವಾಗಿ ಟೀಕಿಸಿದೆ.

ಆದಾಯ ತೆರಿಗೆ ರಿಯಾಯ್ತಿ ಮಿತಿಯನ್ನು ೨೨ ಸಾವಿರ ರೂ. ಗೆ ಏರಿಸಿ ೧೦ ಸಾವಿರ ರೂ. ವರೆಗೆ ರೈತರ ಸಾಲ ಮನ್ನಾ ಮಾಡಿ, ಸಣ್ಣ ಉದ್ದಿಮೆಗಳಲ್ಲಿ ಕೆಲವು ರಿಯಾಯ್ತಿ ನೀಡಿ ಬಜೆಟ್ ಜನರಿಗೆ ಸ್ವಲ್ಪ ಪರಿಹಾರ ನೀಡಿದೆ. ಆದರೆ ಗ್ರಾಮೀಣ ವಲಯದ ಪರಿಹಾರ ಅದು ಅತ್ಯಂತ ಅವಶ್ಯಕವಿರುವ ವರ್ಗವನ್ನು ಲಕ್ಷ್ಯದಲ್ಲಿಟ್ಟು ಕೊಂಡದ್ದಲ್ಲ. ಏಕೆಂದರೆ ಈ ಸಾಲ ಪರಿಹಾರ ಹಿಡುವಳಿಯ ಗಾತ್ರ ಏನೇ ಇದ್ದರೂ ಎಲ್ಲರಿಗೂ ಅನ್ವಯವಾಗುವ ಪರಿಹಾರ.

ಈ ಬಜೆಟ್ಟಿನ ಇನ್ನೊಂದು ಪ್ರತಿಗಾಮಿ ಲಕ್ಷಣವೆಂದರೆ ಅಧಿಕ ಸಂಪನ್ಮೂಲ ಶೇಖರಣೆಯ ಒಂದು ನ್ಯಾಯ ಪಾಲು ರಾಜ್ಯಕ್ಕೆ ದೊರೆಯದಂತೆ ವಂಚಿಸಲಾಗಿದೆ. ಎಂದೂ ಪಿ.ಬಿ. ಟೀಕಿಸಿದೆ. ಒಟ್ಟು ೧೭೯೦ ಕೋಟಿ ರೂ. ಗಳಲ್ಲಿ ಕೇವಲ ೩ ಕೋಟಿ ರೂ. ರಾಜ್ಯಕ್ಕೆ ಸಿಗುವಂತೆ ಈ ತೆರಿಗೆಗಳನ್ನು ರೂಪಿಸಲಾಗಿದೆ. ಇದು ಆರ್ಥಿಕ ಬೆಳವಣಿಗೆಯಲ್ಲಿ ರಾಜ್ಯಗಳಿಗೆ ನ್ಯಾಯಪಾಲು ದೊರೆಯುವಂತೆಮಾಡಲು ತಾನು ಬದ್ಧ ಎಂಬ ರಾಷ್ಟ್ರೀಯ ರಂಗದ ವಚನವನ್ನು ಉಲ್ಲಂಘಿಸಿದೆ ಎಂದು ಪಿ.ಬಿ. ಹೇಳಿದೆ.

ಚಿನ್ನ ನಿಯಂತ್ರಣ ರದ್ದು ಮಾಡುವ ಅಗತ್ಯವಿರಲಿಲ್ಲ. ಇದು ಚಿನ್ನದ ರೂಪದಲ್ಲಿ ಕಪ್ಪು ಹಣದ ಶೇಖರಣೆಗೆ ಸೌಲಭ್ಯ ಒದಗಿಸುತ್ತದೆ ಎಂದು ಪಿ.ಬಿ. ಟೀಕಿಸಿದೆ. ನಾಗಾಲೋಟದಲ್ಲಿ ಓಡುತ್ತಿರುವ ಕೊರತೆಯನ್ನು ತಡೆಯಲು ಬಜೆಟ್ ಪ್ರಯತ್ನಿಸಿದ್ದರೂ ೭೨೦೬ ಕೋಟಿ ರೂ. ಗಳ ಕೊರತೆಯನ್ನು ಮುಚ್ಚುವುದು ಅದಕ್ಕಾಗಿಲ್ಲ. ಮುಂದೆ ಹೇಗೆ ಮುಚ್ಚಲಾಗುತ್ತದೆ ಎಂಬುದರ ಮೇಲೆ ಜನತೆಯ ಜೀವನ ಮಟ್ಟದ ಮೇಲೆ ಇದು ಯಾವ ರೀತಿ ಪ್ರತಿಕೂಲ ಪ್ರಭಾವಬೀರುತ್ತದೆ ಎಂಬುದು ಅವಲಂಬಿಸಿದೆ. ಕಳೆದ ೯ ತಿಂಗಳಲ್ಲಿ ಸಗಟು ಬೆಲೆ ಸೂಚ್ಯಂಕ ಏರುತ್ತಲೇ ಇದೆ.

ತೈಲ ಬೆಲೆಗಳು ಹಾಗೂ ಅಂಚೆ ದರಗಳ ಏರಿಕೆಯನ್ನು ಪ್ರಸ್ತಾಪಗಳನ್ನು ಪರಿಷ್ಕರಿಸಿ ಈ ಮೂಲಕ ಜನ ಸಾಮಾನ್ಯನ ನಿಜ ಆದಾಯ ಮತ್ತಷ್ಟು ಕರಗದಂತೆ ಅವರನ್ನು ರಕ್ಷಿಸಬೇಕೆಂದು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಹಣಕಾಸು ಮಂತ್ರಿಗಳನ್ನು ಒತ್ತಾಯಿಸಿದೆ ಉದಾರೀಕರಣ ಸೂತ್ರಗಳಿಂದ ದೇಶದ ಆರ್ಥಿಕಕ್ಕೆ ಹಿಡಿದ ದಾರಿಯನ್ನೂ ಬದಲಿಸುವುದು ಅತ್ಯಗತ್ಯ. ರಾಷ್ಟ್ರೀಯ ರಂಗ ಸರ್ಕಾರ ತನ್ನ ಭರವಸೆಗಳು ಹಾಗೂ ಜನರ ಆಶೋತ್ತರಗಳಿಗೆ ಸರಿಹೊಂದುವ ಹೆಚ್ಚು ಅರ್ಥ ಪೂರ್ಣ ಧೋರಣೆಗಳನ್ನು ರೂಪಿಸುವ ಬಗ್ಗೆ ಕೆಲವು ಧೀರ ಯೋಚನೆ ನಡೆಸಬೇಕಾಗಿದೆ ಎಂದು ಪಾಲಿಟ್ ಬ್ಯೂರೋ ಹೇಳಿದೆ.

ಬಜೆಟ್ ೧೯೯೦-೯೧

ಕೇಂದ್ರ ಹಣಕಾಸು ಮಂತ್ರಿ ಪ್ರೊ. ಮಧು ದಂಡವತೆಯವರು ಮಾರ್ಚ್ ೧೯ ರಂದು ಸಂಸತ್ತಿನಲ್ಲಿ ಮಂಡಿಸಿದ ರಾಷ್ಟ್ರೀಯ ರಂಗದ ಮೊದಲ ಬಜೆಟ್‌ನಲ್ಲಿ ೭೨೦೬ ಕೋಟಿ ರೂ. ಗಳ ಕೊರತೆ ತೋರಿಸಿದೆ. ೧೯೮೯-೯೦ ರ ಕಾಂಗ್ರೆಸ್(ಐ) ಬಜೆಟ್ ಅಂದಾಜು ಮಾಡಿದ್ದ ೭೩೩೭ ಕೋಟಿ ರೂ. ಗಳ ಕೊರತೆ ವಾಸ್ತವವಾಗಿ ೧೧೭೫೦ ಕೋಟಿ ರೂ. ಗಳಾಯಿತೆಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ.

೧೭೯೦ ಕೋಟಿ ರೂ. ಗಳಷ್ಟು ಹೊಸ ತೆರಿಗೆ ಮೂಲಕ ಆದಾಯ ಸಂಗ್ರಹಿಸುವ ಪ್ರಸ್ತಾಪ ಮಾಡಲಾಗಿದೆ. ಇದರಲ್ಲಿ ೮೦೦ ಕೋಟಿ ರೂ. ಕಂಪನಿಗಳ ಮೇಲಿನ ತೆರಿಗೆಯಿಂದ, ೮೩೫ ಕೋಟಿ ರೂ. ಆಮದು ರಫ್ತು ಸುಂಕದಿಂದ, ೩೯೦ ಕೋಟಿ ರೂ. ಕೇಂದ್ರ ಅಬಕಾರಿ ಸುಂಕಗಳಿಂದ ಹಾಗೂ ೧೫ ಕೋಟಿ ರೂ. ಇತರ ತೆರಿಗೆ, ಸುಂಕಗಳಿಂದ, ಪೆಟ್ರೋಲ್, ಡೀಸೆಲ್, ಕಾರುಗಳು, ಸಿಗರೇಟುಗಳು ವಿ.ಸಿ.ಆರ್. ಮುಂತಾದ ಹೆಚ್ಚು ಬೆಲೆಯ ಇಲೆಕ್ಟ್ರಾನಿಕ್ ಉಪಕರಣಗಳಿಗೆ ಹೆಚ್ಚಿನ ತೆರಿಗೆಗಳ ಮೂಲಕ ಹೆಚ್ಚಿನ ಆದಾಯ ಸಂಗ್ರಹಿಸಲಾಗುತ್ತದೆ.

ಜತೆಗೆ ಅಂತರ್ದೇಶಿಯ ಪತ್ರ ಮತ್ತು ಅಂಚೆ ಲಕೋಟೆಗಳಿಗೆ ಬೆಲೆ ಹೆಚ್ಚಿಸಿ ಕೂಡಾ ೨೦೬ ಕೋಟಿ ರೂ. ಗಳನ್ನು ಸಂಗ್ರಹಿಸಲಾಗುವುದು.

ತೈಲ ಬಾಬ್ತಿನಿಂದ ಸರಕಾರದ ಬಂಡವಾಳ ಪಾವತಿಯಿಂದ ಬರುವ ೧೪೦೦ ಕೋಟಿ ರೂ. ಗಳನ್ನು ಸೇರಿಸಿದರೆ ಈ ಬಜೆಟ್ಟಿನ ಒಟ್ಟು ಹೆಚ್ಚಿನ ಸಂಪನ್ಮೂಲ ಸಂಗ್ರಹಣೆ ೩,೩೯೭ ಕೋಟಿ ರೂ. ಗಳು.

ಬಡರೈತರ, ಕಸುಬುದಾರರು ಸರ್ಕಾರಿ ಕ್ಷೇತ್ರದ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ೧೯೮೯ ಅಕ್ಟೋಬರ್ ೨ ರವರೆಗೆ ಪಡೆದ ರೂ. ೧೦,೦೦೦/- ವರೆಗಿನ ಸಾಲವನ್ನು ಮನ್ನಾ ಮಾಡುವ ಯೋಜನೆಯೊಂದನ್ನು ಜ್ಯಾರಿಗೊಳಿಸುವುದಾಗಿ ಬಜೆಟ್ ಪ್ರಸ್ತಾಪ ತಿಳಿಸುತ್ತದೆ. ಇದಕ್ಕಾಗಿ ೧೦೦೦ ಕೋಟಿ ರೂ. ಗಳನ್ನು ತೆಗೆದಿಡಲಾಗಿದೆ.

ಆದಾಯ ತೆರಿಗೆ ವಿನಾಯ್ತಿಯನ್ನು ಈಗಿನ ೧೮ ಸಾವಿರ ರೂ. ಗಳಿಂದ ೨೨ ಸಾವಿರ ರೂ. ಗಳಿಗೆ ಏರಿಸಲಾಗಿದೆ. ಉಳಿತಾಯಕ್ಕೆ ಕೊಡುವ ವಿನಾಯ್ತಿಗಳನ್ನು ಪರಿಷ್ಕರಿಸಲಾಗಿದೆ. ಇದರಿಂದ ಸುಮಾರು ೧೦ ಲಕ್ಷ ಮಂದಿಗೆ ಪ್ರಯೋಜನವಾಗುತ್ತದೆ. ಬೊಕ್ಕಸಕ್ಕೆ ೨೫೦ ಕೋಟಿ ರೂ. ಗಳ ನಷ್ಟವಾಗುತ್ತದೆ ಎಂದು ಹೇಳಲಾಗಿದೆ.

ರಕ್ಷಣಾ ಬಾಬಿಗೆ ೧೩,೭೫೦ ಕೋಟಿ ರೂ. ಇಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಇದು ೮.೬% ಶೇಕಡಾ ಏರಿಕೆ.

ಕೇಂದ್ರ ಯೋಜನೆಯ ಗಾತ್ರ ೧೯೯೦-೯೧ ರಲ್ಲಿ ೩೯,೩೨೯ ಕೋಟಿ ರೂ.ಗಳು ೧೯೮೯-೯೦ ಕ್ಕೆ ಹೋಲಿಸಿದರೆ ಇದು ೧೪.೨% ಏರಿಕೆ. ಇದರಲ್ಲಿ ೧೭೩೪೪ ಕೋಟಿ ರೂ. ಗಳು ಬಜೆಟ್ಟಿನಿಂದ ಬಂದರೆ ಉಳಿದ ಹಣವನ್ನು ಸಾರ್ವಜನಿಕ ಉದ್ದಿಮೆಗಳು ತಮ್ಮ ಅಂತರಿಕ ಸಂಪನ್ಮೂಲಗಳು ಹಾಗೂ ಸಾಲಗಳಿಂದ ಪೂರೈಸಬೇಕು ಎಂದು ಹಣಕಾಸು ಮಂತ್ರಿ ಹೇಳಿದ್ದಾರೆ.

ಬಹಳಷ್ಟು ಮಿತಿಗಳ ನಡುವೆ ನಾವು ಈ ಬಜೆಟ್ ತಯಾರಿಸಬೇಕಾದುದರಿಂದ ಹಲವು 'ಕಠಿಣ ಕ್ರಮ' ಗಳನ್ನು ಕೈಗೊಳ್ಳಬೇಕಾಗಿದೆ. ಕೊರತೆ ೭೨೦೬ ಕೋಟಿ ರೂ. ಗಳಾಗಿದೆ ಎಂದು ಹೇಳಿರುವ ಪ್ರಧಾನ ಮಂತ್ರಿ ವಿ.ಪಿ.ಸಿಂಗ್ "ನಾವು ಸಾಲ ಬಲೆಯಲ್ಲಿ ಸಿಲುಕಿ ಕೊಳ್ಳಬಯಸುವುದಿಲ್ಲ. ನಮ್ಮ ಆರ್ಥಿಕ ಸ್ವಾತಂತ್ರ್ಯ ಕಾಪಾಡ ಬಯಸುತ್ತೇವೆ" ಎಂದು ಹೇಳಿ ಈ ಬಜೆಟ್ ಅದಕ್ಕೆ ನೆರವಾಗುವುದೆಂದು ತಮ್ಮ ಸರಕಾರದ ಈ ಮೊದಲ ಬಜೆಟ್ಟನ್ನು ಸಮರ್ಥಿಸಿ ಕೊಂಡಿದ್ದಾರೆ.

ರಾಜ್ಯ ಬಜೆಟ್ ಜನ ವಿರೋಧಿ

ಇತ್ತೀಚೆಗೆ ವಿಧಾನ ಸಭೆಯಲ್ಲಿ ಮಂಡಿಸಿರುವ ರಾಜ್ಯದ ಬಜೆಟ್ ಜನತಾ ವಿರೋಧಿ, ರೈತ ವಿರೋಧಿಯಾಗಿ ದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಿದೆ. ಚುನಾವಣಾ ಪರಿಣಾಮಗಳಿಂದ ಕಾಂಗ್ರೆಸ್ ಪಕ್ಷ ಏನೂ ಪಾಠ ಕಲಿತಿಲ್ಲ. ಈ ತರಹದ ಬಜೆಟ್ ಮಂಡಿಸುವುದರಿಂದ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸದಂತಾಗುವುದಿಲ್ಲ. ಮಾತ್ರವಲ್ಲ ಅವರ ವಿಚಾರಧಾರೆ ಪ್ರತಿಗಾಮಿಯಾಗಿದೆಂಬುದನ್ನು ತೋರಿಸಿಕೊಡುತ್ತದೆ. ಇಂಥ ಜನತಾ ವಿರೋಧಿ ಬಜೆಟ್‌ನ್ನು ವಿರೋಧಿಸಲು ಎಲ್ಲಾ ಪ್ರಜಾಪ್ರಭುತ್ವ ವಿಚಾರಧಾರೆಯ ಜನ ಮುಂದೆ ಬರಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೇಳಿಕೊಂಡಿದೆ.

ಬಜೆಟ್ಟಿನಲ್ಲಿ ಕರ್ನಾಟಕ

೧) ಕೈಗಾ ಅಣುಸ್ಥಾವರಕ್ಕೆ ೧೮೫.೩೯ ಕೋಟಿ ರೂ. ಕಳೆದ ವರ್ಷ ೧೧೦ ಕೋಟಿ ರೂ. ಇಡಲಾಗಿತ್ತು. ಇದರಲ್ಲಿ ೭೬.೪೪ ಕೋಟಿ ರೂ. ಖರ್ಚು ಮಾಡಲಾಯಿತು. ೧೯೯೫-೯೬ ರಲ್ಲಿ ಪೂರ್ಣಗೊಳ್ಳುವ ಈ ಯೋಜನೆಯ ಅಂದಾಜು ವೆಚ್ಚ ೭೩೦.೭೨ ಕೋಟಿ ರೂ.

೨) ವಿಜಯನಗರ ಉಕ್ಕು ಕಾರ್ಖಾನೆಗೆ ಕೇವಲ ೫೦ ಲಕ್ಷ ರೂ. ಕಳೆದ ವರ್ಷ ಇಟ್ಟ ೯೫ ಲಕ್ಷ ರೂ. ಗಳಲ್ಲಿ ಖರ್ಚು ಮಾಡಿದ್ದು ೫೪ ಲಕ್ಷ ರೂ.

೩) ಮೈಸೂರಿನ ಟಂಕ ಸಾಲೆಗೆ ಪಶ್ಚಿಮ ಬಂಗಾಳದ ಸಲ ಬೋನಿ ಟಂಕ ಸಾಲೆ ಜೊತೆಗೆ ೧ ಕೋಟಿ ರೂ. ಗಳು. ಕಳೆದ ವರ್ಷ ಇವೆರಡಕ್ಕು ಸೇರಿ ೬ ಕೋಟಿ ರೂ. ಇಡಲಾಗಿತ್ತು.

೪) ಬೆಂಗಳೂರಿನಲ್ಲಿರುವ ಕೇಂದ್ರೋದ್ಯಮಗಳಲ್ಲಿ ಹೆಚ್.ಎ.ಎಲ್.ಗೆ ೩೬ ಕೋಟಿ ರೂ. ಬೆಮೆಲ್‌ಗೆ ೧೦ ಕೋಟಿ ರೂ. ಕೇಂದ್ರ ವಿದ್ಯುತ್ ಸಂಶೋಧನಾ ಕೇಂದ್ರಕ್ಕೆ ೧೫ ಕೋಟಿ. ನಿಮ್ಹಾನ್ಸ್‌ಗೆ ೫.೮೫ ಕೋಟಿ ರೂ.

ವಿದ್ಯಾರ್ಥಿಗಳ ಶೈಕ್ಷಣಿಕ ಶುಲ್ಕ ಎಸ್.ಎಫ್.ಐ. ಒತ್ತಾಯ.

ಕರ್ನಾಟಕದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕದ ರಿಯಾಯಿತಿಯನ್ನು ವಾರ್ಷಿಕ ಆದಾಯದ ಮಿತಿ ರೂ. ೩,೬೦೦-೦೦ ರೂ. ೧೦,೦೦೦-೦೦ ಕ್ಕೆ ಏರಿಸಬೇಕೆಂದು ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್.ಎಫ್.ಐ.) ಬಂಟ್ವಾಳ ತಾಲ್ಲೂಕು ಸಂಘಟನಾ ಸಮಿತಿಯ ಘಟಕವು ಕರ್ನಾಟಕ ಸರ್ಕಾರವನ್ನು ಒತ್ತಾಯಿಸಿದೆ.

ಎಸ್.ಎಫ್.ಐ. ಪರವಾಗಿ ಬಂಟ್ವಾಳ ತಾಲ್ಲೂಕ ತಹಶೀಲ್ದಾರರ ಮುಖಾಂತರ ರಾಜ್ಯದ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿಯಲ್ಲಿ ರಾಜ್ಯದ ಎಲ್ಲಾ ಪ್ರೌಢ ಶಾಲೆ, ಪದವಿಪೂರ್ವ ಕಾಲೇಜುಗಳಲ್ಲೂ ಅಧ್ಯಾಪಕರ ಕೊರತೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕೆಂದು ಅಲ್ಲದೆ ಹಾಸ್ಟೆಲ್‌ಗಳ ಸೌಲಭ್ಯ ಮತ್ತು ಮಾಸಿಕ ಹಣ ನೀಡಿಕೆಯ ಹೆಚ್ಚಳ ಕೆಲವು ತಿದ್ದುಪಡಿಗಳೊಂದಿಗೆ ಗುರುಪ್ರಸಾದ್ ಆಯೋಗದ ವರದಿ ಜಾರಿ ಮಾಡಬೇಕು. ಹಾಗೂ ಹಾಸ್ಟೆಲ್‌ಗಳಿಗೆ ಪ್ರವೇಶಾವಕಾಶಕ್ಕೆ ಮುಕ್ತ ಅವಕಾಶ ನೀಡಬೇಕು ಎಂದು ಕೇಳಿಕೊಳ್ಳಲಾಯಿತು.

ಎಸ್.ಎಫ್.ಐ.ಯ ಇನ್ನೊಂದು ಮನವಿಯೊಂದನ್ನು ತಹಶೀಲ್ದಾರರ ಮುಖಾಂತರ ಶಿಕ್ಷಣ ಸಚಿವರಿಗೆ ಸಲ್ಲಿಸಿ ಬಂಟ್ವಾಳ ತಾಲ್ಲೂಕಿನ ಚೆನ್ನೈತೋಡಿ ಗ್ರಾಮದ ವಾಮದಪದವಿನಲ್ಲಿ ಸರಕಾರದ ವತಿಯಿಂದ ನಡೆಸಲ್ಪಡುವ ಪದವಿ ಪೂರ್ವಕಾಲೇಜಿನಲ್ಲಿ ೩೬೦ ವಿದ್ಯಾರ್ಥಿಗಳಿದ್ದು ಕೇವಲ ೫ ಮಂದಿ ಶಿಕ್ಷಕರು ಮಾತ್ರ ಇದ್ದು ಈ ಬಗ್ಗೆ ವಿದ್ಯಾರ್ಥಿಗಳು ಪಡುವ ಬವಣೆಯನ್ನು ವಿವರಿಸಿ ದ.ಕ. ಜಿಲ್ಲಾ ಪರಿಷತ್ತನ್ನು ಹತ್ತು ಹಲವು ಬಾರಿ ಒತ್ತಾಯಿಸಿದರೂ ಸಮಸ್ಯೆಗೆ ಪರಿಹಾರ ದೊರೆತಿಯುವುದಿಲ್ಲ. ಆದುದರಿಂದ ಸರ್ಕಾರ ಈ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಅಗತ್ಯವಿರುವಷ್ಟು ಅಧ್ಯಾಪಕರನ್ನು ಕೂಡಲೇ ನೇಮಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಲಾಗಿದೆ.

ತಹಶೀಲ್ದಾರರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ನಿಯೋಗದಲ್ಲಿ ಎಸ್.ಎಫ್.ಐ. ನ ಪ್ರವೀಣ್ ಎಸ್. ರಮೇಶ್, ರಾಘವೇಂದ್ರ, ದಾಮೋಧರ, ಜಿ.ವಿ. ಸತೀಶ್ ಮೊದಲಾದವರಿದ್ದರು.

ಹರಿಪಾಡ್ ಉಪಚುನಾವಣೆ ಮಹತ್ವ ಪೂರ್ಣ ತಿರುವು

ಫೆಬ್ರವರಿ ೨೭ ರಂದು ಜರುಗಿದ ಎಂಟು ರಾಜ್ಯಗಳ ವಿಧಾನ ಸಭಾ ಚುನಾವಣೆಗಳೊಂದಿಗೆ ಕೆಲವು ರಾಜ್ಯಗಳಲ್ಲಿ ಉಪಚುನಾವಣೆಗಳು ಸಹ ನಡೆದವು.

ಕೇರಳದ ಹರಿಪಾಡ ಕ್ಷೇತ್ರದ ಉಪಚುನಾವಣೆಯಲ್ಲೂ ಎಲ್.ಡಿ.ಎಫ್. ಜಯಗಳಿಸಿರುತ್ತದೆ.

ಮೂರು ವರ್ಷಗಳ ಅವಧಿಯನ್ನು ಮುಗಿಸುತ್ತಿರುವ ಇ.ಕೆ. ನಾಯನಾರ್ ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಸ್ವಾಭಾವಿಕವಾಗಿ ಹರಿಪಾಡ್ ಉಪ ಚುನಾವಣೆಯ ಫಲಿತಾಂಶದ ಬಗ್ಗೆ ಹೆಮ್ಮೆ ಪಡಬಹುದಾಗಿದೆ. ಲೋಕಸಭಾ ಚುನಾವಣೆಗಳಲ್ಲಿ ಪಡೆದ ಜಯ ಮತ್ತಿನಿಂದ ರಾಜ್ಯ ವಿಧಾನ ಸಭಾ ಚುನಾವಣೆಯಲ್ಲಿ ಕೂಡಾ ಜಯದ ಪಡೆಯುತ್ತೇವೆಂದು ಎಲ್.ಡಿ.ಎಫ್.ನ ಆತ್ಮ ವಿಶ್ವಾಸದ ಕೋಟೆಯ ಮೇಲೆ ಪ್ರಬಲದಾಳಿ ನಡೆಸು ತ್ತೇವೆಂದು ಕೊಂಡಿದ್ದ ಯು.ಡಿ.ಎಫ್.ನ ಲೆಕ್ಕಚಾರ ಪೂರ್ಣವಾಗಿ ತಲೆಕೆಳಗಾಗಿದೆ. ಹರಿಪಾಡ್ ಪರಾಭವದಿಂದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗದ ವಲಯದಲ್ಲಿ ಅದರಲ್ಲೂ ಕಾಂಗ್ರೆಸ್(ಐ) ಪಕ್ಷದೊಳಗೆ ತೀವ್ರ ಅಸಮಾಧಾನ ಹಾಗೂ ಪರಸ್ಪರ ದೋಷಾರೋಪಣೆಗಳು ಕಂಡುಬರುತ್ತಿದ್ದು ಪಕ್ಷದ ವಿಶ್ವಾಸ ಪೂರ್ಣವಾಗಿ ಕುಸಿದಿದೆ.

ಎಲ್.ಡಿ.ಎಫ್.ನ ಪಕ್ಷವಾದ ಆರ್.ಎಸ್.ಪಿ.ಯ ಅಭ್ಯರ್ಥಿ ಎ.ವಿ. ತಮರಾಕ್ಷನ್ ೧೧೭೬ ಮತಗಳ ಅಂತರದಿಂದ ಕಾಂಗ್ರೆಸ್(ಐ) ಪಕ್ಷದಿಂದ ಕ್ಷೇತ್ರವನ್ನು ಮರಳಿ ಗೆದ್ದುಕೊಂಡಿದ್ದಾರೆ. ಕಾಂಗ್ರೆಸ್(ಐ) ೧೯೮೭ರ ವಿಧಾನಸಭಾ ಚುನಾವಣೆಯಲ್ಲಿ ಹರಿಪಾಡ್ ಕ್ಷೇತ್ರದಲ್ಲಿ ೪,೫೭೪ ಮತಗಳ ಅಂತರದಲ್ಲಿ ಜಯಗಳಿಸಿತ್ತು. ೧೯೮೯ರ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲೂ ಈ ಕ್ಷೇತ್ರದಲ್ಲಿ ೩,೮೧೬ ಮತಗಳಷ್ಟು ಹೆಚ್ಚಳ ಪಡೆದಿತ್ತೆಂಬುದನ್ನು ಗಮನಿಸಿದರೆ ಇತ್ತೀಚಿನ ಉಪಚುನಾವಣೆಯ ಫಲಿತಾಂಶ ಕೇರಳದ ರಾಜಕೀಯ ರಂಗದಲ್ಲಿ ಮೂಡಿ ಬರಬಹುದಾದ ಮಹತ್ವಪೂರ್ಣ ತಿರುವಿನ ಮುನ್ಸೂಚನೆಯಾಗಿದೆ.

- ಆರಾಧ್ಯ ಎಸ್.ಆರ್

Printed and published by P.Ramachandra Rao on behalf of Communist party of India (Marxist), Karnataka State Committee